ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Swabhimani Sahakari

Pages - 28, ₹12

Volume -15

Issue - 4

April - 2018

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ




ಸೌಹಾರ್ದ ಸಹಕಾರಿಗಳ ಸಂಖ್ಯೆ : 4272

ಇ-ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1123



“ಸೌಹಾರ್ದ ಸಹಕಾರಿ ಕ್ಷೇತ್ರದ ಸವಾಲುಗಳಲ್ಲಿ ವಿಶೇಷವಾಗಿ ತೆರಿಗೆ ಕಾಯ್ದೆಗಳ ಅನ್ವಯಿಸುವಿಕೆಯ ಸಮಸ್ಯೆ ನಿವಾರಣೆಗಾಗಿ ರಾಜ್ಯದ ಸಂಸದರನ್ನು ಹಾಗೂ ಕೇಂದ್ರದಲ್ಲಿರುವ ರಾಜ್ಯದ ಸಚಿವರ ಮೂಲಕ ಕೇಂದ್ರದ ಹಣಕಾಸು ಸಚಿವರಾದ ಶ್ರೀ ಅರುಣ ಜೇಟ್ಲಿಯವರನ್ನು ಹಾಗೂ ಸಂಬಂಧಿಸಿದ ಅಧಿಕಾರಿಗಳನ್ನು ಭೇಟಿ ಮಾಡಿ ಸಮಸ್ಯೆಗಳನ್ನು ವಿವರಿಸಲು ಸಾಧ್ಯವಾಗಿದೆ. ಕೇಂದ್ರ ಹಣಕಾಸು ರಾಜ್ಯ ಸಚಿವರಾದ ಶ್ರೀ ಶಿವಪ್ರತಾಪ ಶುಕ್ಲಾರವರು ಬೆಂಗಳೂರಿಗೆ ಬಂದಾಗ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡುವಂತೆ ಮನವೊಲಿಸಿ ಭೇಟಿ ಮಾಡಿಸಿ ಸಮಸ್ಯೆಗಳ ಬಗ್ಗೆ ವಿವರಿಸಲಾಗಿದೆ.”

# ಅಧ್ಯಕ್ಷನಾಗಿ ಪ್ರಸಕ್ತ ಹಣಕಾಸಿನ ವರ್ಷದಲ್ಲಿ ಆಡಳಿತ ಮಂಡಲಿಯ ಹಾಗೂ ಸಹಕಾರಿಗಳ ಸಹಕಾರದಿಂದ ನಿರ್ವಹಿಸಿದ ಕೆಲಸ ತೃಪ್ತಿ ನೀಡಿದೆ.

ಆತ್ಮೀಯ ಸಹಕಾರಿ ಬಂಧುಗಳಿಗೆಲ್ಲಾ ಹೊಸ ಆರ್ಥಿಕ ವರ್ಷದ ಶುಭಾಷಯಗಳು. ಅಂಬೇಡ್ಕರ ಜಯಂತಿ, ಅಕ್ಷಯ ತೃತಿಯ/ ಬಸವ ಜಯಂತಿ ಹಾಗೂ ಬುದ್ಧ ಪೂರ್ಣಿಮಾ ದಿನದ ಶುಭಾಷಯಗಳು. ಕಳೆದ ವರ್ಷದಲ್ಲಿ ಸಹಕಾರಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮಗಳು, ನಡೆಸಿದ ಚಟುವಟಿಕೆಗಳು, ಸದಸ್ಯರಿಗೆ ನೀಡಿರುವ ಸೌಲಭ್ಯಗಳು ಹಾಗೂ ಗಳಿಸಿದ ಲಾಭದ ಅವಲೋಕನಾ ಮತ್ತು ಮುಂಬರುವ ಕಾರ್ಯಚಟುವಟಿಕೆಗಳ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಲು ನಿರತರಾಗಿರುವ ಸಮಯ. ನಿಮ್ಮ ಎಲ್ಲಾ ಕಾರ್ಯಕ್ರಮಗಳಿಗೆ ಸಂಯುಕ್ತ ಸಹಕಾರಿಯ ಸಂಪೂರ್ಣ ಬೆಂಬಲ ಹಾಗೂ ಪ್ರೋತ್ಸಾಹ ನಿರಂತರವಾಗಿ ತಮಗೆ ಲಭ್ಯವಿದೆ.

ಸಂಯುಕ್ತ ಸಹಕಾರಿಯ ಅಧ್ಯಕ್ಷನಾಗಿ ವರ್ಷಾಂತ್ಯದವರೆಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಹಾಗೂ ತಮ್ಮೆಲ್ಲರ ಸಹಕಾರದಿಂದ ಹಲವಾರು ಕೆಲಸಗಳನ್ನು ನಿರ್ವಹಿಸಲು ಸಾಧ್ಯವಾಗಿದೆ. ಮತ್ತೊಮ್ಮೆ ಅವುಗಳ ಮೆಲುಕು ಹಾಕಿ ತಮಗೆಲ್ಲಾ ಕೃತಜ್ಞತೆ ಸಲ್ಲಿಸುವುದು ನನ್ನ ಹೊಸ ಆರ್ಥಿಕ ವರ್ಷ ಪ್ರಾರಂಭದ ಆದ್ಯತೆಯ ಕೆಲಸವೆಂದು ನಾನು ಭಾವಿಸಿದ್ದೇನೆ.

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಸೌಹಾರ್ದ ಸಹಕಾರಿ ಸಂಪರ್ಕ ಕಛೇರಿಗಳನ್ನು ಪ್ರಾರಂಭಿಸಿರುವುದು, ಜಿಲ್ಲಾ ಒಕ್ಕೂಟಗಳ ರಚನೆಗೆ ಕ್ರಮವಿಟ್ಟಿರುವುದು ಅದರಲ್ಲಿ ಈಗಾಗಲೇ ಬಳ್ಳಾರಿ ಜಿಲ್ಲೆಯಲ್ಲಿ ಶೇರು ಸಂಗ್ರಹಣೆಗೆ ಅನುಮತಿ ದೊರೆತಿರುವುದು, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುವುದು, ಬೆಂಗಳೂರು ಜಿಲ್ಲೆಯಲ್ಲಿ ಪ್ರಗತಿಯಲ್ಲಿರುವುದು ಹಾಗೂ ರಾಯಚೂರು ಜಿಲ್ಲೆಯಲ್ಲಿ ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟವು ನೋಂದಣಿಯಾಗಿರುವುದು ಸಂತೋಷದ ವಿಷಯ. ಸಂಯುಕ್ತ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯಕ್ಕೆ ಪೂರ್ಣ ಪ್ರಮಾಣದ ಪೀಠಾಧಿಕಾರಿಯ ನೇಮಕಕ್ಕೆ ಹಾಗೂ ಪೂರ್ಣ ಪ್ರಮಾಣದ ವಸೂಲಾತಿ ಅಧಿಕಾರಿಯ ನೇಮಕಾತಿಗಾಗಿ ಪ್ರಯತ್ನಿಸಿ ಯಶಸ್ವಿಯಾಗಿರುವುದು, ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಗೆ ಸಲ್ಲಿಸಬೇಕಿರುವ ಸಹಕಾರ ಶಿಕ್ಷಣ ನಿಧಿ ಹಾಗೂ ವಾರ್ಷಿಕ ಶುಲ್ಕಗಳ ಪಾವತಿ ಬಗ್ಗೆ ಸೌಹಾರ್ದ ಸಹಕಾರಿಗಳಿಗೆ ತಿಳುವಳಿಕೆ ನೀಡಿ ಗರಿಷ್ಠ ಪ್ರಮಾಣದ ಮೊತ್ತ ಶೇಖರಣೆ ಆಗುವ ಹಾಗೇ ಕ್ರಮವಿಡಲು ಸಾಧ್ಯವಾಗಿರುವುದು, ಸಂಯುಕ್ತ ಸಹಕಾರಿಯ ಸ್ವಂತ ಕಟ್ಟಡ ನಿರ್ಮಾಣದ ಕಾರ್ಯದಲ್ಲಿ ಗಣನೀಯ ಪ್ರಗತಿ, ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ಅನುಮೋದಿಸಿದ ಸಂಯುಕ್ತ ಸಹಕಾರಿಯ ಉಪವಿಧಿಗಳ ತಿದ್ದುಪಡಿ ಅನುಮೋದನೆಯಾಗಿರುವುದು, ವಿಭಾಗೀಯ ಕಛೇರಿಗಳಿಗೆ ಹೆಚ್ಚಿನ ಅಧಿಕಾರ ನೀಡಲು ಕ್ರಮವಿಡಲು ಸಾಧ್ಯವಾಗಿರುವುದು ಮತ್ತು ವಿಭಾಗೀಯ ನಿರ್ದೇಶಕರ ಸಭೆಗಳಿಗೆ ಹೆಚ್ಚಿನ ಮಾನ್ಯತೆ ಹಾಗೂ ಅಧಿಕಾರ ವಿಕೇಂದ್ರೀಕರಣ ಸಾಧಿಸುವಲ್ಲಿ ಯಶಸ್ವಿಯಾಗಿರುವುದು, ನೂತನ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಿರುವುದು, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯವರಿಗೆ ಪದೋನ್ನತಿಗಳನ್ನು ನೀಡಿ ಮೋಟಿವೇಷನ್ ಕ್ರಮ ಜಾರಿ ಮಾಡಿರುವುದು, ಹೀಗೆ ಹಲವಾರು ಪ್ರಗತಿಪರ ಕಾರ್ಯಕ್ರಮಗಳನ್ನು ನಿರ್ವಹಿಸಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ಧನ್ಯವಾದಗಳು.

ಸೌಹಾರ್ದ ಸಹಕಾರಿ ಕ್ಷೇತ್ರದ ಸವಾಲುಗಳಲ್ಲಿ ವಿಶೇಷವಾಗಿ ತೆರಿಗೆ ಕಾಯ್ದೆಗಳ ಅನ್ವಯಿಸುವಿಕೆಯ ಸಮಸ್ಯೆ ನಿವಾರಣೆಗಾಗಿ ರಾಜ್ಯದ ಸಂಸದರನ್ನು ಹಾಗೂ ಕೇಂದ್ರದಲ್ಲಿರುವ ರಾಜ್ಯದ ಸಚಿವರ ಮೂಲಕ ಕೇಂದ್ರದ ಹಣಕಾಸು ಸಚಿವರಾದ ಶ್ರೀ ಅರುಣ ಜೇಟ್ಲಿಯವರನ್ನು ಹಾಗೂ ಸಂಬಂಧಿಸಿದ ಅಧಿಕಾರಿಗಳನ್ನು ಭೇಟಿ ಮಾಡಿ ಸಮಸ್ಯೆಗಳನ್ನು ವಿವರಿಸಲು ಸಾಧ್ಯವಾಗಿದೆ. ಕೇಂದ್ರ ಹಣಕಾಸು ರಾಜ್ಯ ಸಚಿವರಾದ ಶ್ರೀ ಶಿವಪ್ರತಾಪ ಶುಕ್ಲಾರವರು ಬೆಂಗಳೂರಿಗೆ ಬಂದಾಗ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡುವಂತೆ ಮನವೊಲಿಸಿ ಭೇಟಿ ಮಾಡಿಸಿ ಸಮಸ್ಯೆಗಳ ಬಗ್ಗೆ ವಿವರಿಸಲಾಗಿದೆ.

# ಸಂಪಾದಕೀಯ

## ವೈವಿಧ್ಯತೆ, ಗಾತ್ರ, ವೇಗ ಹಾಗೂ ಗುಣಾತ್ಮಕ ಅಭಿವೃದ್ಧಿ ಇಂದಿನ ಆದ್ಯತೆ, ಅಗತ್ಯತೆ

ಆರ್ಥಿಕ ವರ್ಷ 2017–18 ಮುಕ್ತಾಯವಾಗಿದೆ. ಸೌಹಾರ್ದ ಸಹಕಾರಿಗಳು ಹಮ್ಮಿಕೊಂಡಿದ್ದ ವಾರ್ಷಿಕ ಕ್ರಿಯಾ ಯೋಜನೆಯಂತೆ ಕೆಲಸಗಳು ನಡೆದು ಅಂತಿಮ ಲೆಕ್ಕಪತ್ರಗಳ ಸಿದ್ಧತೆಯಾಗಿ ಮುಂಬರುವ ವರ್ಷದ ಕ್ರಿಯಾ ಯೋಜನೆ ಹಾಗೂ ಆಯ–ವ್ಯಯಗಳ ಮತ್ತು ಪ್ರಸಕ್ತ ಸಾಲಿನ ಲಾಭಾಂಶ ವಿಲೇವಾರಿಯ ಹಂತವನ್ನು ಎಲ್ಲಾ ಸೌಹಾರ್ದ ಸಹಕಾರಿಗಳು ತಲುಪಿರುವುದು ವಾರ್ಷಿಕ ಸಹಜ ಪ್ರಕ್ರಿಯೆ.

ಇದು ಆಧುನಿಕ ಯುಗ. 1991ರಲ್ಲಿ ಜಾರಿಗೆ ಬಂದ ಹೊಸ ಆರ್ಥಿಕ ನೀತಿ – ಖಾಸಗೀಕರಣ, ಜಾಗತೀಕರಣ ಹಾಗೂ ಉದಾರೀಕರಣ, 2008ರ ಜಾಗತಿಕ ಹಣಕಾಸಿನ ಮುಗ್ಗಟ್ಟು ಮತ್ತು 2016ರ ನೋಟು ಅಮಾನ್ಯೀಕರಣದಂತಹ ಸನ್ನಿವೇಶಗಳಲ್ಲಿ ನಮ್ಮ ದೇಶದ ಸಹಕಾರ ಕ್ಷೇತ್ರ ಬಾಳಿ ಬದುಕಿದೆ. ಕೇಂದ್ರದಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಸಕಾರಾತ್ಮಕ ಧೋರಣೆಗಳು ಕಡಿಮೆಯಾಗುತ್ತಿರುವ ಈ ಸಂದರ್ಭದಲ್ಲಿ ಮತ್ತೊಮ್ಮೆ ಸಹಕಾರಿ ವ್ಯವಸ್ಥೆಯನ್ನು ಬಲಪಡಿಸುವ, ಸವಾಲುಗಳನ್ನು ಎದುರಿಸುವ ಮತ್ತು ಹೊಸ ಅವಕಾಶಗಳ ಬಗ್ಗೆ ಚಿಂತನೆ ಮಾಡದಿದ್ದರೆ ಮುಂದಿನ ದಾರಿ ಸುಗಮವಾಗಿಲ್ಲವೆಂಬುದನ್ನು ಸಹಕಾರಿಗಳು ಅರ್ಥ ಮಾಡಿಕೊಂಡು ಕಾರ್ಯನಿರ್ವಹಿಸುವುದು ಉತ್ತಮ.

ಸಹಕಾರಿಗಳು ತಮ್ಮ ಕ್ರಿಯಾ ಯೋಜನೆಗಳ ಅನುಷ್ಠಾನಕ್ಕೆ ಸಮಯ ನಿಗದಿ ಮಾಡಬೇಕು, ಹೊಸತನ್ನು ಅಳವಡಿಸಬೇಕು. ವಿಶೇಷವಾಗಿ ಸದಸ್ಯರಿಗೆ ಮತ್ತು ಗ್ರಾಹಕರಿಗೆ ಸೌಲಭ್ಯಗಳನ್ನು ತಲುಪಿಸುವ ವಿಧಾನಗಳು ವಿನೂತನವಾಗಿರಬೇಕು, ಕಾರ್ಯಚಟುವಟಿಕೆಗಳು ಕೇವಲ ಸಾಂಪ್ರದಾಯಿಕವಾಗಿರದೇ ವೈವಿಧ್ಯಮಯವಾಗಿರುವುದು ಅಪೇಕ್ಷಣೀಯ. ಸಹಕಾರಿ ಸಂಸ್ಥೆಯ ಕಾರ್ಯವ್ಯಾಪ್ತಿ ಎಷ್ಟೇ ಚಿಕ್ಕದಾಗಿದ್ದರೂ ಬೆಳೆಯುವ ಅವಕಾಶ ಸಾಕಷ್ಟಿದೆ. ಗ್ರಾಮೀಣ ಭಾಗದಲ್ಲಿ ಎಷ್ಟು ಪ್ರಾಥಮಿಕ ಹಂತದ ಸಹಕಾರಿ ಸಂಸ್ಥೆಗಳು ಬೃಹದಾಕಾರವಾಗಿ ಬೆಳೆದಿವೆ. ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಅಧ್ಯಯನ ಯೋಗ್ಯವಾಗಿವೆ. ಅನುಕರಣೀಯವಾಗಿವೆ ಎಂಬುದನ್ನು ಗಮನಿಸುವುದು ಅವಶ್ಯಕ. (There is a need for the Cooperatives to grow faster larger). ಸಹಕಾರಿ ಚಿಂತಕರ, ಸಾಧಕರ, ಸಲಹೆ–ಮಾರ್ಗದರ್ಶನ ಪಡೆದು ಸಹಕಾರಿಗಳು ತಮ್ಮ ಬೆಳವಣಿಗೆಯ ಗಾತ್ರ, ಕಾರ್ಯಗಳಲ್ಲಿ ವೈವಿಧ್ಯತೆ ಮತ್ತು ವೇಗದ ಅಭಿವೃದ್ಧಿಗೆ ಗಮನ ಹರಿಸದಿದ್ದರೆ ಅಭಿವೃದ್ಧಿ ಮರೀಚಿಕೆ ಎನಿಸುತ್ತದೆ.

ಕೆನಡಾದ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಸಹಕಾರ ಕ್ಷೇತ್ರದಲ್ಲಿ ಹೊಸ ಅಧ್ಯಾಯ ಹಾಗೂ ಆವಿಷ್ಕಾರವೆನಿಸಿರುವ ಸೌಹಾರ್ದ ಸಹಕಾರಿ ಕ್ಷೇತ್ರದ ಅಧ್ಯಯನ ಪೀಠ ಸ್ಥಾಪಿತವಾಗಿದ್ದು, ಪ್ರತಿ ವರ್ಷ ಒಬ್ಬ ರಿಸರ್ಚ್ ಸ್ಕಾಲರ್ ಒಬ್ಬರನ್ನು ಅಧ್ಯಯನಕ್ಕಾಗಿ ಕಳುಹಿಸುವ ವ್ಯವಸ್ಥೆಯಾಗಿರುವುದು ಸೌಹಾರ್ದ ಸಹಕಾರಿಗಳು ಹೆಮ್ಮೆಪಡಬೇಕಾದ ವಿಷಯ. ಈ ಬಾರಿ ಮಿಸ್ ಲಾರೆನ್ಸ್ ಹಮ್ಮನ್ ಎಂಬ ಮಹಿಳಾ ವಿದ್ಯಾರ್ಥಿಯೊಬ್ಬರು ಮತ್ತು ಐ.ಸಿ.ಎ.ದ ಅಧಿಕಾರಿಯವರು ಸಂಯುಕ್ತ ಸಹಕಾರಿಗೆ ಹಾಗೂ ಕೆಲವು ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿ, ಅಧ್ಯಯನ ಮಾಡಿ, ಈ ವ್ಯವಸ್ಥೆಯ ಬಗ್ಗೆ ಸಂತೋಷ ವ್ಯಕ್ತಪಡಿಸಿರುವುದು ನಮಗೆಲ್ಲಾ ಗೌರವ ತಂದಿದೆ.

ಶ್ರೀಲಂಕಾದಲ್ಲಿ ಐ.ಸಿ.ಎ.ನವರು ನಡೆಸಿದ ಏಷಿಯಾ ಫೆಸಿಫಿಕ್ ಕೋ–ಆಪರೇಟಿವ್ ಸಮ್ಮೇಳನ, ಜಲಗಾಂವದಲ್ಲಿ ನಡೆದ ಪಟ್ಟಣ ಸಹಕಾರ ಬ್ಯಾಂಕುಗಳ ಸಭೆಗಳಲ್ಲಿ ಭಾಗವಹಿಸಲಾಗಿದೆ. ಚೆನ್ನೈನಲ್ಲಿ ಐಸೆಕ್‌ನವರು ನಡೆಸಿದ 33ನೇ ವಾರ್ಷಿಕ ಸಹಕಾರ ವಿಚಾರ ಗೋಷ್ಠಿಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರು ಭಾಗವಹಿಸುವ ಅವಕಾಶವಾಗಿದೆ. ರಾಷ್ಟ್ರೀಯ ಸಹಕಾರ ಯೂನಿಯನ್‌ರವರು ಬೆಂಗಳೂರಿನಲ್ಲಿ ನಡೆಸಿದ ದಕ್ಷಿಣ ರಾಜ್ಯಗಳ ವಿಭಾಗೀಯ ಸಹಕಾರ ಅಭಿವೃದ್ಧಿ ಸಮ್ಮೇಳನದಲ್ಲಿ ಭಾಗವಹಿಸಲಾಗಿದೆ. ಅತ್ಯಂತ ವ್ಯವಸ್ಥಿತವಾಗಿ 64ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ತುಮಕೂರಿನಲ್ಲಿ ಆಚರಿಸಿ, ರಾಜ್ಯದ ಸಹಕಾರಿಗಳ ಗಮನ ಸೆಳೆಯಲಾಗಿದೆ. ಅವಕಾಶವಿರುವ ಸ್ಥಳಗಳಲ್ಲಿ ಸಂಪರ್ಕ ಸಭೆಗಳನ್ನು ಮತ್ತು ಪತ್ರಿಕಾ ಗೋಷ್ಠಿಗಳನ್ನು ನಡೆಸಲಾಗಿದೆ. ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಗೆ ಸಂಬಂಧಿಸಿದಂತೆ ಮಾನ್ಯ ಸಹಕಾರ ಸಚಿವರನ್ನು, ಮಾನ್ಯ ಮುಖ್ಯಮಂತ್ರಿಗಳನ್ನು, ಸಹಕಾರಿ ನಿಬಂಧಕರನ್ನು ಭೇಟಿ ಮಾಡಿ ವಿವರಣೆ ನೀಡಲಾಗಿದೆ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಯಶಸ್ಸನ್ನು ಹಾಗೂ ವಿಶೇಷತೆಯನ್ನು ರಾಜ್ಯ, ರಾಷ್ಟ್ರ ಹಾಗೂ ಅಂತರ ರಾಷ್ಟ್ರ ಮಟ್ಟದಲ್ಲಿ ಸಹಕಾರಿಗಳು ಗುರುತಿಸಿ ಪ್ರಶಂಸಿಸುವ ಮಟ್ಟಕ್ಕೆ ಕಾರ್ಯನಿರ್ವಹಿಸಿ ಅದರಲ್ಲಿ ಯಶಸ್ವಿಯಾಗಲು ಅವಕಾಶವಾಗಿದೆ.

ನಿರ್ವಹಿಸಿದ ಕೆಲಸ ತೃಪ್ತಿ ನೀಡಿದೆ. ತಾವು ನೀಡಿದ ಸಹಕಾರಕ್ಕೆ ಧನ್ಯವಾದಗಳು. ಸಾಧನೆಯ ಹಾದಿ ಇನ್ನೂ ಇದೆ. ಹಲವು ಮೆಟ್ಟಲುಗಳ ಪ್ರಯಾಣವಿದೆ. ಈ ದಾರಿಯುದ್ದಕ್ಕೂ ತಮ್ಮ ನಿರಂತರ ಸಹಕಾರ, ಸಲಹೆ ಹಾಗೂ ಮಾರ್ಗದರ್ಶನಗಳನ್ನು ಆದರದಿಂದ ಸ್ವಾಗತಿಸುತ್ತೇನೆ.

▸▸ **ಬಿ.ಹೆಚ್. ಕೃಷ್ಣಾರೆಡ್ಡಿ**, ಅಧ್ಯಕ್ಷರು

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ : 080–23378375–80, 23474408, 23573291
ಇ–ಮೇಲ್ : souharda@souharda.coop | ವೆಬ್‌ಸೈಟ್ : www.souharda.coop

## ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ



**ಬೆಂಗಳೂರು** : ಮಾನ್ಯ ಕೇಂದ್ರ ಹಣಕಾಸು ರಾಜ್ಯ ಸಚಿವರಾದ ಶ್ರೀ ಶಿವಪ್ರತಾಪ ಶುಕ್ಲಾರವರು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಸವಾಲುಗಳು/ಸಮಸ್ಯೆಗಳ ಕುರಿತು ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಸಿಬ್ಬಂದಿ ವರ್ಗದವರು ಸನ್ಮಾನಿಸಿದರು.

## ವಿಚಾರ ಗೋಷ್ಠಿ



**ಚೆನ್ನೈ** : ಇಂಡಿಯನ್ ಸೊಸೈಟಿ ಫಾರ್ ಸ್ಟಡೀಸ್ ಇನ್ ಕೋ–ಆಪರೇಷನ್, ಪುಣೆ ಇವರು ಚೆನ್ನೈನಲ್ಲಿ ದಿನಾಂಕ 2 ರಿಂದ 3 ಮಾರ್ಚ್ 2018ರವರೆಗೆ ನಡೆಸಿದ 33ನೇ ರಾಷ್ಟ್ರೀಯ ವಾರ್ಷಿಕ ಸಹಕಾರ ವಿಚಾರ ಗೋಷ್ಠಿಯಲ್ಲಿ ಸಂಯುಕ್ತ ಸಹಕಾರಿಯ ವತಿಯಿಂದ ನಿರ್ದೇಶಕರಾದ ಶ್ರೀ ಎ.ಆರ್.ಪ್ರಸನ್ನ ಕುಮಾರ್‌ರವರು ಭಾಗವಹಿಸಿದ್ದರು.

## ಜ್ಞಾನ ಜ್ಯೋತಿ



### ಸನಾತನ ಧರ್ಮ
### ದೇವರು, ಸಮಾಜ, ಜೀವ ಜೀವಿಗಳ ಸೇವೆಯೇ ಸನಾತನ ಧರ್ಮ : ಶ್ರೀ ಚೈತನ್ಯ ಮಹಾಪ್ರಭು

ಸನಾತನ ಧರ್ಮದ ಇತಿಹಾಸಕ್ಕೆ ಪ್ರಾರಂಭ ಎನ್ನುವುದು ಇಲ್ಲ. ಜೀವಿಗಳಿಗೆ ಹೇಗೆ ಹುಟ್ಟು ಹಾಗೂ ಸಾವು ಇಲ್ಲವೋ ಹಾಗೇ ಸನಾತನ ಧರ್ಮ ಜೀವಿಗಳ ಜೊತೆಗೆ ನಿರಂತರವಾಗಿ ಬೆಳೆದು ಬಂದಿದೆ. ಜೀವಿಯ ಹಾಗೇ ಅದು ಕೂಡ ಅವಿನಾಶಿ. ಯಾವುದೊಂದು ವಿಶಿಷ್ಟ ವಸ್ತುವಿನ ಜೊತೆಗೆ ಯಾವುದು ನಿರಂತರವಾಗಿರುತ್ತದೆಯೋ ಅದು ಆ ವಿಶಿಷ್ಟ ವಸ್ತುವಿನ ಧರ್ಮ. ಅದುವೇ ಸನಾತನ. ಹೀಗಾಗಿ ಅದು ಸನಾತನ ಧರ್ಮ ಎನಿಸುತ್ತದೆ. ಬೆಂಕಿಯೊಂದಿಗೆ ಶಾಖವು ಹಾಗೂ ಬೆಳಕು ಇರುವುದು ಸಹಜ. ಶಾಖ ಮತ್ತು ಬೆಳಕು ಇಲ್ಲದೇ ಬೆಂಕಿ ಎನ್ನುವ ಪದಕ್ಕೆ ಅರ್ಥವೇ ಇರುವುದಿಲ್ಲ. ಹಾಗಾಗಿ ಒಂದು ಜೀವನ ಸಾರಭೂತವಾದ ಭಾಗ ಅಂದರೆ ನಿರಂತರ ಸಂಗಾತಿ ಅದರ ಸನಾತನ ಗುಣ ಮತ್ತು ಆ ಸನಾತನ ಗುಣವೇ ಸನಾತನ ಧರ್ಮ.

ಶ್ರೀ ಚೈತನ್ಯ ಮಹಾಪ್ರಭುಗಳಿಗೆ ಸನಾತನ ಗೋಸ್ವಾಮಿಯವರು ಜೀವನ ಸ್ವರೂಪವನ್ನು ಪ್ರಶ್ನಿಸಿದಾಗ ಮಹಾಪ್ರಭುಗಳು ದೇವೋತ್ತಮ ಪರಮ ಪುರುಷನ ಸೇವೆಯೇ ಜೀವಿಯ ಸ್ವರೂಪ ಎಂದು ಹೇಳಿದರು. ಪ್ರತಿಯೊಬ್ಬ ಜೀವಿಯು ಮತ್ತೊಬ್ಬ ಜೀವಿಯ ಸೇವೆಯಲ್ಲಿ ಸದಾ ನಿರತನಾಗಿರುತ್ತಾನೆ. ಒಬ್ಬ ಜೀವಿಯು ಇತರ ಜೀವಿಗಳಿಗೆ ಹಲವು ರೀತಿಗಳಲ್ಲಿ ಸೇವೆ ಸಲ್ಲಿಸುತ್ತಾನೆ. ಹೀಗೆ ಮಾಡುತ್ತಲೇ ಅವನ ಜೀವನದ ಸಾರ್ಥಕತೆಯನ್ನು ಪಡೆಯುತ್ತಾನೆ. ಸೇವಕ ಒಡೆಯನನ್ನು, ಹೆಂಡತಿ ಗಂಡನನ್ನು, ಗಂಡ ಹೆಂಡತಿಯನ್ನು, ಮಕ್ಕಳು ಹಾಗೂ ಸಣ್ಣವರು ತಂದೆ ತಾಯಿಗಳನ್ನು ಗುರು ಹಿರಿಯರನ್ನು, ತಾಯಿ ಮಗನನ್ನು, ಸ್ನೇಹಿತ ಮತ್ತೊಬ್ಬ ಸ್ನೇಹಿತನನ್ನು, ಅಂಗಡಿಯವ ಗಿರಾಕಿಯನ್ನು, ಕುಶಲ ಕರ್ಮಿಯು ಬಂಡವಾಳಗಾರನನ್ನು, ಬಂಡವಾಳಗಾರನು ಕುಟುಂಬವನ್ನು ಸೇವಿಸುವುದು ಹೀಗೆ ಒಂದಿಲ್ಲೊಂದು ವಿಧದಲ್ಲಿ ಸೇವೆ ಸಲ್ಲಿಸದ ಜೀವಿಗಳೇ ಇರುವುದಿಲ್ಲ. ಆದ್ದರಿಂದ ಸೇವೆಯೇ ನಿರಂತರ ಸಂಗಾತಿ ಮತ್ತು ಸೇವೆ ಮಾಡುವುದೇ ಜೀವನದ ಸನಾತನ ಧರ್ಮ.

ಒಬ್ಬ ಮನುಷ್ಯನು ಒಂದು ನಿರ್ದಿಷ್ಟ ಕಾಲದಲ್ಲಿ ಒಂದು ನಿರ್ದಿಷ್ಟ ಬಗೆಯ ಶ್ರದ್ಧೆಗೆ ತಾನು ಸೇರಿದವನು ಎಂದು ಹೇಳಿಕೊಳ್ಳುತ್ತಾನೆ. ತಾನು ಒಬ್ಬ ಹಿಂದೂ, ಮುಸ್ಲಿಂ, ಕ್ರೈಸ್ತ, ಜೈನ, ಬುದ್ಧ, ಪಾರ್ಸಿ, ಸಿಖ್ ಪಂಥ ಅಥವಾ ಬೇರೆ ಯಾವುದೋ ಧರ್ಮದ ಅನುಯಾಯಿ ಎಂದು ಹೇಳುತ್ತಾನೆ. ಇವು ಸನಾತನ ಧರ್ಮೇತರ ಹೆಸರುಗಳು. ಒಬ್ಬ ಹಿಂದೂ ಮುಸ್ಲಿಂ ಆಗಬಹುದು. ಮುಸ್ಲಿಂನೊಬ್ಬ ಕ್ರೈಸ್ತ ಆಗಬಹುದು. ಹೀಗೆ ಮತಗಳ ಬದಲಾವಣೆಯು ಇತರರ ಸೇವೆ ಮಾಡುವ ಸನಾತನ ಧರ್ಮದ ಮೇಲೆ ಪ್ರಭಾವ ಬೀರುವುದಿಲ್ಲ. ಸೇವೆಯ ಬದಲಾವಣೆ ಆಗುವುದಿಲ್ಲ. ಹಿಂದೂ, ಮುಸ್ಲಿಂ, ಕ್ರೈಸ್ತ ಮುಂತಾದವರೆಲ್ಲ ಮತ್ತೊಬ್ಬನ ಸೇವಕರೇ ಇರುತ್ತಾರೆ. ಹೀಗಾಗಿ ಯಾವುದೋ ಒಂದು ಮತಕ್ಕೆ ಸೇರಿದವನು ಎಂದರೆ ಸನಾತನ ಧರ್ಮಕ್ಕೆ ಸೇರಿದವನು ಎಂದಲ್ಲ. ಸೇವೆ ಮಾಡುವುದೇ ಸನಾತನ ಧರ್ಮ.

ವಾಸ್ತವವಾಗಿ ಜೀವಿಗೆ ಭಗವಂತನ ಸೇವೆಯ ಬಾಂಧವ್ಯವಿದೆ. ಭಗವಂತನೇ ಭೋಕ್ತಾರ. ಜೀವಿಗಳಾದ ನಾವೆಲ್ಲಾ ಅವನ ಸೇವಕರು. ಭಗವಂತನಿಗೆ ಅಲೌಕಿಕವಾದ ಪ್ರೀತಿಯ ಸೇವೆಯನ್ನು ಅರ್ಪಿಸದೇ ಯಾವ ಜೀವಿಯೂ ಸುಖಿಯಾಗಲಾರ. ಅದುವೇ ಸನಾತನ ಧರ್ಮ.

# ರಾಷ್ಟ್ರೀಯ ಸಹಕಾರ ಯೂನಿಯನ್ ನೇತೃತ್ವದಲ್ಲಿ ದಕ್ಷಿಣ ರಾಜ್ಯಗಳ ಸಹಕಾರ ಸಮಾವೇಶ

## ಸಹಕಾರ ಕ್ಷೇತ್ರಕ್ಕೆ ಅಧಿಕೃತ ಮಾನ್ಯತೆ ಹಾಗೂ ಪ್ರೋತ್ಸಾಹ ಸರಕಾರದ ಕ್ರಮವಾಗಬೇಕು - ಡಾ. ಚಂದ್ರಪಾಲ ಸಿಂಗ್

**ಬೆಂಗಳೂರು** : ರಾಷ್ಟ್ರೀಯ ಸಹಕಾರ ಯೂನಿಯನ್ ನೇತೃತ್ವದಲ್ಲಿ ದಕ್ಷಿಣ ರಾಜ್ಯಗಳ ಸಹಕಾರ ಸಮಾವೇಶವನ್ನು ದಿನಾಂಕ 10.03.2018ರಂದು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು.

ಈ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಎನ್.ಸಿ.ಯು.ಐ.ನ ಅಧ್ಯಕ್ಷರಾದ ಡಾ. ಚಂದ್ರಪಾಲ ಸಿಂಗ್‌ರವರು ದೇಶದಲ್ಲಿ 8 ಲಕ್ಷ ಸಹಕಾರ ಸಂಸ್ಥೆಗಳು 30 ಕೋಟಿ ಸದಸ್ಯ ಬಳಗವನ್ನು ಸಹಕಾರ ಕ್ಷೇತ್ರವು ಹೊಂದಿದೆ. ದಕ್ಷಿಣ ಭಾರತದಲ್ಲಿಯೇ 2.5 ಕೋಟಿ ಸಹಕಾರ ಸಂಸ್ಥೆಗಳಿವೆ. ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರ ಅಪಾರ ಕೊಡುಗೆ ನೀಡುತ್ತಾ ಬಂದಿದೆ.

ವಿಶೇಷವಾಗಿ ವ್ಯವಸಾಯ ಕ್ಷೇತ್ರ ಹಾಗೂ ಹೈನುಗಾರಿಕೆ ಮತ್ತು ಇತರ ಕ್ಷೇತ್ರಗಳಲ್ಲಿನ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರದ ಪಾಲುಗಾರಿಕೆಯನ್ನು ಕಡೆಗಣಿಸುವಂತಿಲ್ಲ. ಇಷ್ಟಾದರೂ ಸಹ ಸರಕಾರದ ಇತ್ತೀಚಿನ ಧೋರಣೆಗಳು ಸಹಕಾರ ಕ್ಷೇತ್ರವನ್ನು ಪ್ರೋತ್ಸಾಹಿಸುವಂತಿಲ್ಲ. ಕೇಂದ್ರದ ಆಯ-ವ್ಯಯದಲ್ಲಿ ಮತ್ತು ಇತ್ತೀಚಿನ ನೋಟು ಅಮಾನ್ಯೀಕರಣ ಮುಂತಾದ ಸಂದರ್ಭಗಳಲ್ಲಿ ಸಹಕಾರ ಕ್ಷೇತ್ರಕ್ಕೆ ಕನಿಷ್ಠ ಮಹತ್ವವನ್ನು ನೀಡದಿರುವುದು ವಿಷಾದನೀಯ ಎಂದು ತಿಳಿಸಿದರು.

ಮುಂದುವರೆದು ಮಾತನಾಡಿದ ಶ್ರೀಯುತರು ಸಹಕಾರ ಕ್ಷೇತ್ರವನ್ನು ಬಲಪಡಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಸಹಕಾರ ಯೂನಿಯನ್‌ನವರು ನಿರಂತರ ಸಹಕಾರ ಶಿಕ್ಷಣ ಹಾಗೂ ತರಬೇತಿಗಳನ್ನು ವ್ಯವಸ್ಥೆ ಮಾಡುತ್ತಾ ಬಂದಿದೆ. ಸಹಕಾರಿಗಳಲ್ಲಿ ವೃತ್ತಿಪರತೆ ಅವಶ್ಯಕ ಎಂದು ತಿಳಿಸಿದರು. ಸಹಕಾರ ಕ್ಷೇತ್ರದಲ್ಲಿ ಯುವಕರಿಗೆ ಹಾಗೂ ಮಹಿಳೆಯರಿಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಕ್ರಮವಿಡಬೇಕು. 97ನೇ ಸಂವಿಧಾನ ತಿದ್ದುಪಡಿ ಸಹಕಾರ ಕ್ಷೇತ್ರದಲ್ಲಿ ಸ್ವಾಯತ್ತತೆ ಹಾಗೂ ಸಂವಿಧಾನಾತ್ಮಕ ಸ್ಥಾನಮಾನ ನೀಡುವಲ್ಲಿ ಯಶಸ್ವಿಯಾಗಿದೆಯಾದರೂ ಅದು ಪೂರ್ಣ ಪ್ರಮಾಣದಲ್ಲಿ ಕಾರ್ಯಗತವಾಗದೇ ನ್ಯಾಯಾಲಯಗಳಲ್ಲಿ ಬಾಕಿ ಇರುವುದು ವಿಷಾದನೀಯ ಎಂದರು.

ಪ್ರಾರಂಭದಲ್ಲಿ ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣ ಮಾಡಿದ ಎನ್.ಸಿ.ಯು.ಐ.ನ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಸತ್ಯನಾರಾಯಣರವರು ಮಾತನಾಡಿ ದಕ್ಷಿಣ ಭಾರತದ ಸಹಕಾರ ಚಳುವಳಿಯಲ್ಲಿ ಕೇರಳದ 23800, ಕರ್ನಾಟಕದ 39619 ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ 4260 ಸಂಸ್ಥೆಗಳು, ಆಂಧ್ರಪ್ರದೇಶ ಹಾಗೂ ತೆಲಂಗಾಣದ 67300 ಸಂಸ್ಥೆಗಳು, ತಮಿಳುನಾಡಿನ 34500 ಸಂಸ್ಥೆಗಳು, ಪುದುಚೇರಿಯ 23500 ಸಂಸ್ಥೆಗಳು ತೊಡಗಿಸಿಕೊಂಡಿವೆ. ಇವುಗಳಲ್ಲಿ ವೃತ್ತಿಪರತೆಯನ್ನು ತುಂಬಿಸುವುದು, ಹಣಕಾಸಿನ ಕೊರತೆಗಳನ್ನು ನಿವಾರಿಸುವ ಕ್ರಮಗಳನ್ನು ಅಳವಡಿಸುವುದು ಮತ್ತು ಉತ್ತಮ ನಾಯಕತ್ವವನ್ನು ರೂಪಿಸುವುದು ಈ ಸಮಾವೇಶ ಹಾಗೂ ತರಬೇತಿಗಳ ಮುಖ್ಯ ಉದ್ದೇಶವಾಗಿರುತ್ತದೆ ಎಂದು ತಿಳಿಸಿದರು.



ಸಂಯುಕ್ತ ಸಹಕಾರಿಯ ವತಿಯಿಂದ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಉಪಸ್ಥಿತರಿದ್ದು, ಎನ್.ಸಿ.ಯು.ಐ.ನ ಅಧ್ಯಕ್ಷರಾದ ಶ್ರೀ ಚಂದ್ರಪಾಲ ಸಿಂಗ್‌ರವರನ್ನು ಹಾಗೂ ಹಿರಿಯ ಸಹಕಾರಿ ಶ್ರೀ ಬಿ.ಎಸ್.ವಿಶ್ವನಾಥ ಇವರುಗಳನ್ನು ಸನ್ಮಾನಿಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅರುಣ ಕುಮಾರ, ಎನ್.ಸಿ.ಡಿ.ಸಿ.ಯ ಸಿ.ಜಿ.ಎಮ್. ಶ್ರೀ ಗಾಣಗಿ, ಡಾ. ಪರಂಜ್ಯೋತಿ ಮುಂತಾದವರು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.

ರಾಷ್ಟ್ರೀಯ ಸಹಕಾರ ಯೂನಿಯನ್‌ನ ಉಪಾಧ್ಯಕ್ಷರಾದ ಶ್ರೀ ವಿ.ಪಿ.ಸಿಂಗ್, ಶ್ರೀ ವಿ.ಆರ್.ಪಟೇಲ್, ಶ್ರೀ ಕೆ.ಶಿವದಾಸನ್ ನಾಯರ್, ಶ್ರೀ ವಿಜಯೇಂದ್ರ ಸಿಂಗ್, ಎನ್.ಸಿ.ಡಿ.ಸಿ.ಯ ಸಿ.ಜಿ.ಎಮ್. ಶ್ರೀ ಗಾಣಗಿ ಮುಂತಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.




ಸಮಾವೇಶದಲ್ಲಿ ಎನ್.ಸಿ.ಯು.ಐ.ನ ಅಧ್ಯಕ್ಷರಾದ ಡಾ. ಚಂದ್ರಪಾಲ್ ಸಿಂಗ್‌ರವರ ಭಾಷಣ. ವೇದಿಕೆಯಲ್ಲಿ ಗಣ್ಯರು.

# ಮೈಸೂರು ವಿಶ್ವವಿದ್ಯಾಲಯದ ನೇತೃತ್ವದಲ್ಲಿ ರಾಷ್ಟ್ರೀಯ ಸಹಕಾರ ಯೂನಿಯನ್ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸಹಯೋಗದೊಂದಿಗೆ ಮೈಸೂರಿನಲ್ಲಿ 7 ದಿನಗಳ ವಿಷಯ ತಜ್ಞರ ಜ್ಞಾನಾಭಿವೃದ್ಧಿ ತರಬೇತಿ - ಸುಸ್ಥಿರ ಅಭಿವೃದ್ಧಿ ಹಾಗೂ ಸಹಕಾರಿ ಸಂಸ್ಥೆಗಳು


ಉದ್ಘಾಟನೆ


ಸಮಾರೋಪ

**ಮೈಸೂರು** : ಮೈಸೂರು ವಿಶ್ವವಿದ್ಯಾಲಯದ ಥರ್ಡ್ ಸೆಕ್ಟರ್ ರಿಸೋರ್ಸ್ ರಿಸರ್ಚ್ ಸೆಂಟರ್‌ನ ಪ್ರೊ. ಯಶವಂತ ಡೋಂಗ್ರೆಯವರ ನೇತೃತ್ವದಲ್ಲಿ ರಾಷ್ಟ್ರೀಯ ಸಹಕಾರ ಯೂನಿಯನ್, ನವದೆಹಲಿ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರುಗಳ ಸಹಯೋಗದೊಂದಿಗೆ ದಿನಾಂಕ 18.03.2018 ರಿಂದ 24.03.2018ರವರೆಗೆ 7 ದಿನಗಳ ವಿಷಯ ತಜ್ಞರ ಜ್ಞಾನಾಭಿವೃದ್ಧಿ ತರಬೇತಿ – ಸುಸ್ಥಿರ ಅಭಿವೃದ್ಧಿ ಹಾಗೂ ಸಹಕಾರಿ ಸಂಸ್ಥೆಗಳು ಕುರಿತು ತರಬೇತಿ ಕಾರ್ಯಕ್ರಮವು ಮೈಸೂರಿನ ವಿಜ್ಞಾನ ಭವನದಲ್ಲಿ ನಡೆಯಿತು.

ಈ ಕಾರ್ಯಕ್ರಮವನ್ನು ದಿನಾಂಕ 19.03.2018 ರಂದು ಬೆಳಿಗ್ಗೆ ಉದ್ಘಾಟಿಸಿ ಮಾತನಾಡಿದ ಮೈಸೂರು ವಿಶ್ವವಿದ್ಯಾಲಯದ ಹಂಗಾಮಿ ಕುಲಪತಿ ಶ್ರೀ ಬಸವರಾಜರವರು ವಿಷಯ ತಜ್ಞರು ಆಗಿಂದ್ದಾಗ್ಗೆ ಹೊಸ ಹೊಸ ವಿಷಯಗಳ ಬಗ್ಗೆ ಮಾಹಿತಿಯನ್ನು ಹೊಂದುವುದಕ್ಕಾಗಿ ಇಂತಹ ತರಬೇತಿಗಳು ಅಗತ್ಯ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರಾಷ್ಟ್ರೀಯ ಸಹಕಾರಿ ಯೂನಿಯನ್‌ನ ಉಪನಿರ್ದೇಶಕರಾದ ಡಾ. ಎ.ಆರ್. ಶ್ರೀನಾಥ, ಮೈಸೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ. ಮಹೇಂದ್ರ ಕುಮಾರರವರು ಉಪಸ್ಥಿತರಿದ್ದರು.

ಪ್ರಾಸ್ತಾವಿಕ ಭಾಷಣ ಮಾಡಿದ ಪ್ರೊ. ಯಶವಂತ ಡೋಂಗ್ರೆಯವರು ಐ.ಸಿ.ಎ.ರವರು ದಶಕದಲ್ಲಿ ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ನೀಲಿ ನಕ್ಷೆಯನ್ನು ಸಿದ್ಧಪಡಿಸಿದ್ದಾರೆ. ಇದರಂತೆ ಸುಸ್ಥಿರ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರಕ್ಕೆ ಇರುವ ಸವಾಲುಗಳು, ಅವಕಾಶಗಳು ಮುಂತಾದ ವಿಷಯಗಳ ಬಗ್ಗೆ ಆಳವಾದ ಅಧ್ಯಯನ ಮಾಡುವುದು ಈ ತರಬೇತಿಯ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.

ತರಬೇತಿ ಅವಧಿಯಲ್ಲಿ ಡಾ. ಪರಂಜ್ಯೋತಿ, ಡಾ. ಶ್ರೀನಾಥ, ಪ್ರೊ. ಯಶವಂತ ಡೋಂಗ್ರೆ, ಶ್ರೀ ಶರಣಗೌಡ ಜಿ. ಪಾಟೀಲ, ಡಾ. ಮಹೇಂದ್ರ ಕುಮಾರ ಮುಂತಾದವರುಗಳು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.

ತರಬೇತಿ ಅವಧಿಯಲ್ಲಿ ಮೈಸೂರಿನ ಸಪ್ತರ್ಷಿ ಸೌಹಾರ್ದ ಸಹಕಾರಿ, ಗ್ರಾಜುಯೇಟ್ಸ್ ಸಹಕಾರಿ ಬ್ಯಾಂಕ್, ಮಹಿಳಾ ಸಹಕಾರಿ ಬ್ಯಾಂಕ್, ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್, ಮೈಸೂರು ಇವುಗಳಿಗೆ ಭೇಟಿ ನೀಡಿ ಅಧ್ಯಯನ ಮಾಡಲಾಯಿತು.

ತಂಡಗಳ ರಚನೆಯ ಮೂಲಕ ವಿವಿಧ ವಿಷಯಗಳ ಬಗ್ಗೆ ಪ್ರಸ್ತಾವನೆಗಳನ್ನು ಸಿದ್ಧಪಡಿಸಿ ಪ್ರಸ್ತುತಪಡಿಸುವ ಪ್ರಾಯೋಗಿಕವನ್ನು ಮಾಡಲಾಯಿತು.

ಮುಕ್ತಾಯ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮೈಸೂರು ವಿಶ್ವವಿದ್ಯಾಲಯದ ಸೆಂಟರ್ ಆಫ್ ಎಕ್ಸಲೆನ್ಸ್ ಮುಖ್ಯಸ್ಥರಾದ ಡಾ.ಹೇಮಂತ ಕುಮಾರ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭಾಗವಹಿಸಿ, ಮಾತನಾಡಿದರು.

ಶ್ರೀ ಶರಣಗೌಡ ಜಿ. ಪಾಟೀಲರವರು ಇಂತಹ ಉತ್ತಮ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಸಹಯೋಗ ನೀಡುವುದು ಸಂಯುಕ್ತ ಸಹಕಾರಿಗೆ ಸಹಕಾರ ಕ್ಷೇತ್ರಕ್ಕೆ ಸೇವೆ ಸಲ್ಲಿಸಲು ಒದಗಿದ ಅವಕಾಶವೆಂದು ಭಾವಿಸಲಾಗಿದೆ. ಮುಂಬರುವ ದಿನಗಳಲ್ಲಿ ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಹಮ್ಮಿಕೊಳ್ಳಲಾಗುವ ಕಾರ್ಯಕ್ರಮಗಳಲ್ಲಿ ಸಂಯುಕ್ತ ಸಹಕಾರಿಯು ಸಂತೋಷದಿಂದ ಪಾಲ್ಗೊಳ್ಳುತ್ತದೆ ಎಂದು ತಿಳಿಸಿದರು. ಅಧ್ಯಕ್ಷತೆಯನ್ನು ಮೈಸೂರು ವಿಶ್ವವಿದ್ಯಾಲಯದ ಥರ್ಡ್ ಸೆಕ್ಟರ್ ರಿಸೋರ್ಸ್ ರಿಸರ್ಚ್ ಸೆಂಟರ್‌ನ ಪ್ರಾಧ್ಯಾಪಕರಾದ ಡಾ. ಇಂದಿರಾರವರು ವಹಿಸಿದ್ದರು. ಶಿಬಿರಾರ್ಥಿಗಳನೇಕರು ಮಾತನಾಡಿ ಕಾರ್ಯಕ್ರಮದ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಾರಂಭದಲ್ಲಿ ಶಿಬಿರಾರ್ಥಿ ಡಾ. ರಶ್ಮಿಯವರು ಸ್ವಾಗತಿಸಿದರು. ಇನ್ನೊಬ್ಬ ಶಿಬಿರಾರ್ಥಿ ಡಾ. ಪರಮೇಶ್ವರಿಯವರು ಶಿಬಿರದ ವರದಿ ಪ್ರಸ್ತುತಪಡಿಸಿದರು. ಡಾ. ಮೀರಾರವರು ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಕರ್ನಾಟಕ, ತಮಿಳನಾಡು, ಪಾಂಡಿಚೇರಿ, ಕರ್ನಾಟಕದ ವಿವಿಧ ಸಹಕಾರಿ ಸಂಸ್ಥೆಗಳಿಂದ 33 ಜನ ವಿಷಯ ತಜ್ಞರು ಭಾಗವಹಿಸಿದ್ದರು.



## ವಿಜಯಪುರ ಜಿಲ್ಲಾ ಸಂಪರ್ಕ ಕಛೇರಿಯ ಉದ್ಘಾಟನೆ

**ವಿಜಯಪುರ** : ವಿಜಯಪುರ ಜಿಲ್ಲಾ ಸಂಪರ್ಕ ಕಛೇರಿಯನ್ನು ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಸನಗೌಡ ಪಾಟೀಲ ಯತ್ನಾಳರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಉಪ್ಪಿನ ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಎಂ.ಜಿ.ಪಾಟೀಲ ಮತ್ತು ಬೆಳಗಾವಿ ವಿಭಾಗೀಯ ಅಧಿಕಾರಿಯಾದ ಶ್ರೀ ಶ್ರೀಕಾಂತ ಬರುವೆರವರು ಉಪಸ್ಥಿತರಿದ್ದರು.

## ತುಮಕೂರು ಜಿಲ್ಲಾ ಸಂಪರ್ಕ ಕಛೇರಿಯ ಉದ್ಘಾಟನೆ

## ಜಿಲ್ಲಾ ಸಂಪರ್ಕ ಕಛೇರಿಯನ್ನು ಸದುಪಯೋಗ ಮಾಡಿಕೊಳ್ಳಲು ಕರೆ – ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ

**ತುಮಕೂರು** : ದಿನಾಂಕ 21 ಮಾರ್ಚ್ 2018ರಂದು ಶ್ರೀ ಶಿವಾಜಿ ಪತ್ತಿನ ಸೌಹಾರ್ದ ಸಹಕಾರಿಯ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ತುಮಕೂರು ಜಿಲ್ಲಾ ಸಂಪರ್ಕ ಕಛೇರಿಯನ್ನು ಉದ್ಘಾಟಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ಸೌಹಾರ್ದ ಸಹಕಾರಿಗಳ ಅನುಕೂಲಕ್ಕಾಗಿ ಮತ್ತು ಶೀಘ್ರವಾಗಿ ಕುಂದುಕೊರತೆಗಳ ನಿವಾರಣೆಗಾಗಿ ತುಮಕೂರು ಜಿಲ್ಲಾ ಸಂಪರ್ಕ ಕಛೇರಿಯನ್ನು ಪ್ರಾರಂಭಿಸಲಾಗಿದ್ದು, ಎಲ್ಲಾ ಸಹಕಾರಿಗಳು ಇದರ ಲಾಭವನ್ನು ಪಡೆದುಕೊಳ್ಳುವಂತೆ ಸಹಕಾರಿಗಳಿಗೆ ಕರೆ ನೀಡಿದರು.

ಸಂಯುಕ್ತ ಸಹಕಾರಿಯು ರಾಜ್ಯದಲ್ಲಿರುವ ಸೌಹಾರ್ದ ಸಹಕಾರಿಗಳಿಗೆ ಉತ್ಕೃಷ್ಟವಾದ ರೀತಿಯಲ್ಲಿ ತರಬೇತಿಗಳನ್ನು ನೀಡುವುದರ ಮೂಲಕ ಸಹಕಾರ ಕ್ಷೇತ್ರದಲ್ಲಿ ಮಾದರಿ ತರಬೇತಿ ನೀಡುವುದರ ಮುಖಾಂತರ ದೇಶದಲ್ಲಿ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿರುವುದು ತುಂಬ ಸಂತೊಷಕರವಾದುದು, ಆದ್ದರಿಂದ, ಇಂದು ರಾಜ್ಯದಾದ್ಯಂತ ಸೌಹಾರ್ದ ಸಹಕಾರಿಗಳು ರಾಜ್ಯದಲ್ಲಿ ವಿಶಿಷ್ಟವಾಗಿ, ಜನಸಾಮಾನ್ಯರಿಗೆ ಅವಶ್ಯಕವಾದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತ ಜನಪರ ಕೆಲಸಗಳನ್ನು ನಿರ್ವಹಿಸುತ್ತಿವೆ. ತುಮಕೂರು ಜಿಲ್ಲೆಯ ಹಲವಾರು ಸಹಕಾರಿಗಳು ಇಂದು ವೈಶಿಷ್ಟ್ಯವಾಗಿ ಕಾರ್ಯಚಟುವಟಿಕೆಗಳನ್ನು ನಡೆಸುವುದರ ಮುಖಾಂತರ ರಾಜ್ಯದಲ್ಲಿ ಮಾದರಿ ಸಹಕಾರಿಗಳಾಗಿ ಹೊರಹೊಮ್ಮಿವೆ. ಇಂತಹ ಚಟುವಟಿಕೆಗಳನ್ನು ನಡೆಸಲು ಪ್ರತಿ ಜಿಲ್ಲೆಯಲ್ಲಿ ಸಂಪರ್ಕ ಕಛೇರಿಗಳ ಅವಶ್ಯಕತೆ ಇರುವುದರಿಂದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ನಿರ್ಣಯ ಪಡೆದು ಇಂದು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಸಂಪರ್ಕ ಕಛೇರಿಗಳನ್ನು ಪ್ರಾರಂಭಿಸಲಾಗುತ್ತಿದೆ ಎಂದರು. ಈ ಕಛೇರಿಗಳು ಸಹಕಾರಿಗಳ



ಗುಣಮಟ್ಟವನ್ನು ಹೆಚ್ಚಿಸಲು ಹಾಗೂ ಅವರ ಕುಂದು-ಕೊರತೆಗಳನ್ನು ನಿವಾರಿಸಲು ಸಹಕಾರಿಯಾಗಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯರವರು ಮಾತನಾಡಿ ಇಂದು ಹೆಚ್ಚಿನ ಸಂಖ್ಯೆಯಲ್ಲಿ ಹೊಸ ಸೌಹಾರ್ದ ಸಹಕಾರಿಗಳನ್ನು ಪ್ರಾರಂಭಿಸಿ ಕಾರ್ಯನಿರ್ವಹಿಸುತ್ತಿರುವುದರಿಂದ ಅವುಗಳ ನಿರ್ವಹಣೆಗೆ ಜಿಲ್ಲಾ ಸಂಪರ್ಕ ಕಛೇರಿಗಳು ಅವಶ್ಯಕವಾಗಿದೆ. ಆದ್ದರಿಂದ, ಇಂದು ಜಿಲ್ಲಾ ಸಂಪರ್ಕ ಕಛೇರಿಗಳನ್ನು ಪ್ರಾರಂಭಿಸಿ ಸಹಕಾರಿಗಳಿಗೆ ಅನುಕೂಲ ಮಾಡಲಾಗಿದೆ ಎಂದರು.

ಮುಖ್ಯ ಅಥಿತಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಎಸ್.ಆರ್. ಲಕ್ಷ್ಮೀಕಾಂತರೆಡ್ಡಿ, ಶ್ರೀ ಜಿ.ನಂಜನಗೌಡ, ಶ್ರೀ ಬಿ.ಎಸ್. ಗುಂಡುರಾವ್ ಮತ್ತು ಶ್ರೀ ಎ.ಆರ್.ಪ್ರಸನ್ನಕುಮಾರ, ತುಮಕೂರಿನ ಶಿವಾಜಿ ಸೌಹಾರ್ದ ಸಹಕಾರಿಯ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ ಕುಮಾರ್, ಸಹಕಾರಿಗಳ ಉಪ ನಿಬಂಧಕರಾದ ಶ್ರೀ ಜಿ.ಆರ್.ವಿಜಯಕುಮಾರ ಹಾಗೂ ಸಂಯುಕ್ತ ಸಹಕಾರಿಯ ವಿಭಾಗೀಯ ಅಧಿಕಾರಿ ಶ್ರೀ ನಾರಾಯಣ ಹೆಗಡೆರವರು ಉಪಸ್ಥಿತರಿದ್ದರು.

### ತಿದ್ದುಪಡಿ

ಸ್ವಾಭಿಮಾನಿ ಸಹಕಾರಿಯ ಫೆಬ್ರವರಿ-2018ರ ಮಾಹೆಯಲ್ಲಿ ಪ್ರಕಟವಾಗಿರುವ ಶಿವಮೊಗ್ಗ ಜಿಲ್ಲಾ ಸಂಪರ್ಕ ಕಛೇರಿಯ ಉದ್ಘಾಟನಾ ಸಮಾರಂಭದ ವರದಿಯಲ್ಲಿ "ದಿನಾಂಕ 07.01.2018ರಂದು ಸಂಯುಕ್ತ ಸಹಕಾರಿಯ ಶಿವಮೊಗ್ಗ ಜಿಲ್ಲಾ ಸಂಪರ್ಕ ಕಛೇರಿಯನ್ನು ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., 1ನೇ ಮಹಡಿ, ಆರ್‌ಟಿಓ ರಸ್ತೆ, ಶಿವಮೊಗ್ಗ-577201 ಇಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಉದ್ಘಾಟಿಸಿದರು. ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯು 2005ನೇ ಸಾಲಿನಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಉತ್ತಮ ಸೌಹಾರ್ದ ಸಹಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಸಹಕಾರಿಯು 8807 ಸದಸ್ಯರನ್ನು, 10 ಶಾಖೆಗಳನ್ನು, ರೂ.36.01 ಲಕ್ಷ ಶೇರು ಬಂಡವಾಳವನ್ನು, ರೂ.38.27 ಕೋಟಿ ದುಡಿಯುವ ಬಂಡವಾಳವನ್ನು ಹೊಂದಿದ್ದು, ರೂ.37.24 ಕೋಟಿ ಠೇವಣಿಗಳನ್ನು ಸಂಗ್ರಹಿಸಿ, ರೂ.25.69 ಕೋಟಿ ಸಾಲಗಳನ್ನು ವಿತರಿಸಿದ್ದು, ರೂ.33 ಲಕ್ಷ ಲಾಭವನ್ನು ಗಳಿಸಿದೆ. ಶ್ರೀ ಎ.ಆರ್.ಪ್ರಸನ್ನಕುಮಾರ್‌ರವರು ಸಹಕಾರಿಯ ಅಧ್ಯಕ್ಷರಾಗಿದ್ದು, ಮುಖ್ಯಕಾರ್ಯನಿರ್ವಾಹಕರಾಗಿ ಶ್ರೀ ನಾರಾಯಣ ಮೂರ್ತಿಯವರು ಕಾರ್ಯನಿರ್ವಹಿಸುತ್ತಿದ್ದಾರೆ. ಸಹಕಾರಿಯ ಆಡಳಿತ ಮಂಡಲಿಯಲ್ಲಿ 13 ಜನ ಸದಸ್ಯರಿದ್ದಾರೆ" ಎಂದು ಸೇರಿಸಿಕೊಂಡು ಓದಿಕೊಳ್ಳಲು ಕೋರಿದೆ.

### ಸಂಯುಕ್ತ ಸಹಕಾರಿಯ ಮುಂಬರುವ ಕಾರ್ಯಕ್ರಮಗಳು

- ದಿನಾಂಕ 20 ಮತ್ತು 21 ಏಪ್ರಿಲ್ 2018ರಂದು ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ 2 ದಿನಗಳ "ಆಡಳಿತ ಪರಿಣಿತಿ ಅಭಿವೃದ್ಧಿ" ತರಬೇತಿಯನ್ನು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿದೆ.
- ದಿನಾಂಕ 23 ಮತ್ತು 24 ಏಪ್ರಿಲ್ 2018 ಸೌಹಾರ್ದ ಸಹಕಾರಿಗಳ ಮಹಿಳಾ ನಿರ್ದೇಶಕಿಯರುಗಳಿಗಾಗಿ 2 ದಿನಗಳ "ಆಡಳಿತ ಪರಿಣಿತಿ ಅಭಿವೃದ್ಧಿ" ತರಬೇತಿಯನ್ನು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿದೆ.
- ದಿನಾಂಕ 27 ಮತ್ತು 28 ಏಪ್ರಿಲ್ 2018ರಂದು ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ 2 ದಿನಗಳ "ಆಡಳಿತ ಪರಿಣಿತಿ ಅಭಿವೃದ್ಧಿ" ತರಬೇತಿಯನ್ನು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿದೆ.

### ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯದ ಕಾರ್ಯನಿರ್ವಹಣೆ ಸ್ಥಳಾಂತರ

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯದ ಕಾರ್ಯನಿರ್ವಹಣೆಯನ್ನು ಈ ಮೊದಲು ಕಾರ್ಯನಿರ್ವಹಿಸುತ್ತಿದ್ದ ಕಟ್ಟಡದ ಎದುರುಗಡೆ ಇರುವ ಕಟ್ಟಡಕ್ಕೆ "# 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ, (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055" ಇಲ್ಲಿಗೆ ಸ್ಥಳಾಂತರಿಸಲಾಗಿದೆ. ಸೌಹಾರ್ದ ಸಹಕಾರಿಗಳು ವಿಳಾಸ ಬದಲಾವಣೆಯನ್ನು ಗಮನಿಸಲು ಕೋರಿದೆ.

## ಲೆಕ್ಕಪರಿಶೋಧನಾ ವರದಿ ಸಲ್ಲಿಸದೇ ಇರುವ ಸಹಕಾರಿಗಳಿಗೆ ನೋಟೀಸ್

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 34ರಡಿಯ ಎಲ್ಲಾ ಮಾಹಿತಿಗಳನ್ನು ಸಂಯುಕ್ತ ಸಹಕಾರಿಗೆ ಸಲ್ಲಿಸದೇ ಇರುವ ಮತ್ತು ಸಹಕಾರಿಯು ಸಾಮಾನ್ಯ ಸಭೆ ನಡೆಸಿರುವ ಕುರಿತು ಹಾಗೂ ಲೆಕ್ಕಪರಿಶೋಧನೆ ನಡೆಸಿರುವ ಕುರಿತಾದ ಮಾಹಿತಿ ಮತ್ತು ದಾಖಲೆಯನ್ನು ಸಂಯುಕ್ತ ಸಹಕಾರಿಗೆ ಸಲ್ಲಿಸದೇ ಇರುವ ಸಹಕಾರಿಗಳ ಎಲ್ಲಾ ನಿರ್ದೇಶಕರುಗಳು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 25(2)(ಎ–1), (ಬಿ) ಮತ್ತು (ಸಿ) ರಡಿ ಅನರ್ಹತೆಗೆ ಒಳಪಡುತ್ತಾರೆ. ಅದರಂತೆ ಬೆಳಗಾವಿ ವಿಭಾಗದ 386 ಸೌಹಾರ್ದ ಸಹಕಾರಿಗಳು, ಕಲಬುರಗಿ ವಿಭಾಗದ 64 ಸೌಹಾರ್ದ ಸಹಕಾರಿಗಳು, ಬೆಂಗಳೂರು ವಿಭಾಗದ 44 ಸೌಹಾರ್ದ ಸಹಕಾರಿಗಳು ಮತ್ತು ಮೈಸೂರು ವಿಭಾಗದ 13 ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯಿಂದ ಕಾರಣ ಕೇಳಿ ನೋಟೀಸನ್ನು ನೀಡಲಾಗಿದೆ.

ಈಗಾಗಲೇ ಲೆಕ್ಕಪರಿಶೋಧನಾ ಕಾರ್ಯ ಮತ್ತು ಸಾಮಾನ್ಯ ಸಭೆಗಳನ್ನು ನಡೆಸಿದ್ದು, ವರದಿಗಳನ್ನು ಸಲ್ಲಿಸದೇ ಇರುವ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 34ರಡಿಯ ಎಲ್ಲಾ ಮಾಹಿತಿಗಳನ್ನು ಸಲ್ಲಿಸದೇ ಇರುವ ಸೌಹಾರ್ದ ಸಹಕಾರಿಗಳು ಆದಷ್ಟು ಶೀಘ್ರವಾಗಿ ಸಂಯುಕ್ತ ಸಹಕಾರಿಗೆ ಮಾಹಿತಿಗಳನ್ನು ಸಲ್ಲಿಸಲು ಈ ಮೂಲಕ ಸೂಚಿಸಿದೆ.

ಲೆಕ್ಕಪರಿಶೋಧನಾ ಕಾರ್ಯ ಮತ್ತು ಸಾಮಾನ್ಯ ಸಭೆಗಳನ್ನು ನಡೆಸದೇ ಇರುವ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 34ರಡಿಯ ಎಲ್ಲಾ ಮಾಹಿತಿಗಳನ್ನು ಸಲ್ಲಿಸದೇ ಇರುವ ಸೌಹಾರ್ದ ಸಹಕಾರಿಗಳ ಮೇಲೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಪ್ರಕಾರ ಮುಂದಿನ ಸೂಕ್ತ ಕಾನೂನು ಕ್ರಮವಿಡಲಾಗುವುದು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 2260 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 1522 ಪ್ರಕರಣಗಳು ಸೇರಿದಂತೆ ಒಟ್ಟು 3782 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 2313 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 573 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 26 ಪ್ರಕರಣಗಳು ಇತ್ಯರ್ಥಗೊಂಡಿದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 890 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು, 13 ಪ್ರಕರಣಗಳು ಇತ್ಯರ್ಥಗೊಂಡಿವೆ.

## ಸೌಹಾರ್ದ ಸಹಕಾರಿಗಳು ಗಮನಿಸಬೇಕಾದ ಶಾಸನಬದ್ಧ ಕಾರ್ಯಗಳು

- **ವಾರ್ಷಿಕ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ :** ಆರ್ಥಿಕ ವರ್ಷ 2017–18 ಮುಕ್ತಾಯವಾಗಿದ್ದು, ರಾಜ್ಯದ ಸೌಹಾರ್ದ ಸಹಕಾರಿಗಳ ವಾರ್ಷಿಕ ಲೆಕ್ಕಪತ್ರಗಳನ್ನು ಅಂತಿಮಗೊಳಿಸಿ, ಲೆಕ್ಕಪರಿಶೋಧನೆಗಾಗಿ ಸಿದ್ಧತೆಯನ್ನು ಮಾಡಿಕೊಳ್ಳಬೇಕಿದೆ. ಅಂತಿಮಗೊಂಡ ವಾರ್ಷಿಕ ಲೆಕ್ಕಪತ್ರಗಳನ್ನು ಆಡಳಿತ ಮಂಡಲಿಗೆ ಮಂಡಿಸಿ, ಅನುಮೋದನೆ ಪಡೆದುಕೊಂಡು ಏಪ್ರಿಲ್ 30ರೊಳಗಾಗಿ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ನೇಮಕವಾಗಿರುವ ಲೆಕ್ಕಪರಿಶೋಧಕರಿಗೆ ಸಲ್ಲಿಸಿ, ಲೆಕ್ಕಪರಿಶೋಧನೆಯ ಕಾರ್ಯ ನಡೆಸಬೇಕಿದೆ.
- ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ಇರುವ ಒಬ್ಬರು ಲೆಕ್ಕಪರಿಶೋಧಕರನ್ನು ಮುಂದಿನ ವರ್ಷದ ಲೆಕ್ಕಪರಿಶೋಧನೆಗಾಗಿ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಆಯ್ಕೆ ಮಾಡಿಕೊಂಡು, ಸದರಿಯವರಿಂದ ಲೆಕ್ಕಪರಿಶೋಧನೆ ಮಾಡಿಸಲು ಕ್ರಮ ಇಡುವುದು ಅಗತ್ಯ.
- **ವರ್ಷದ ಅರ್ಹ ಮತದಾರರ ಪಟ್ಟಿ ಪ್ರಕಟಣೆ :** ಅ) ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಕಲಂ 32 (1) (ಡಿ) ಅಡಿ ಪ್ರಸಕ್ತ ವರ್ಷದ ಅರ್ಹ ಮತದಾರರ ಪಟ್ಟಿಯನ್ನು ಪ್ರಕಟಿಸುವುದು ಮುಖ್ಯಕಾರ್ಯನಿರ್ವಾಹಕರ ಜವಾಬ್ದಾರಿಯಾಗಿರುತ್ತದೆ. ಏಪ್ರಿಲ್ 30ರೊಳಗೆ ಅಂತಹ ಪಟ್ಟಿಯನ್ನು ಪ್ರಕಟಿಸಲು ಸೂಚಿಸಲಾಗಿದೆ. ಆ) ಹಿಂದಿನ ಮೂರು ಸಾಮಾನ್ಯ ಸಭೆಗಳಲ್ಲಿ ಕನಿಷ್ಠ ಒಂದು ಸಾಮಾನ್ಯ ಸಭೆಗೆ ಹಾಜರಾಗದ ಹಾಗೂ ಉಪವಿಧಿಗಳಲ್ಲಿ ನಿಗದಿಪಡಿಸಿದ ಕನಿಷ್ಠ ವ್ಯವಹಾರವನ್ನು ಮಾಡದ ಸದಸ್ಯರನ್ನು ಆಯಾ ವರ್ಷವೇ ತೆಗೆದು ಹಾಕಲು ಕ್ರಮ ಕೈಗೊಳ್ಳಲು ಈ ಮೂಲಕ ಸೂಚಿಸಲಾಗಿದೆ.
- **ವರ್ಷಾಂತ್ಯದ ಆರ್ಥಿಕ ಮಾಹಿತಿ ಸಲ್ಲಿಕೆ :** ಸಂಯುಕ್ತ ಸಹಕಾರಿಯು ಕಳುಹಿಸುವ ವರ್ಷಾಂತ್ಯದ ಆರ್ಥಿಕ ಮಾಹಿತಿ ನಮೂನೆಯು ತಲುಪಿದ ಕೂಡಲೇ ಭರ್ತಿ ಮಾಡಿ ಆದಷ್ಟು ಶೀಘ್ರವಾಗಿ ಕಳುಹಿಸಲು ಕ್ರಮವಿಡುವುದು. ಹಾಗೆಯೇ ವಾರ್ಷಿಕ ಶುಲ್ಕ ಹಾಗೂ ಸಹಕಾರ ಶಿಕ್ಷಣ ನಿಧಿಗಳನ್ನು ಪಾವತಿಸಲು ಸೂಕ್ತ ಗಮನ ನೀಡಲು ಕೋರಲಾಗಿದೆ. ನಿಗದಿತ ಸಮಯದಲ್ಲಿ ವಾರ್ಷಿಕ ಶುಲ್ಕ ಹಾಗೂ ಸಹಕಾರ ಶಿಕ್ಷಣ ನಿಧಿಗಳನ್ನು ಪಾವತಿಸಿ ಮುಂದಿನ ದಿನಗಳಲ್ಲಿ ತಮ್ಮ ಸಹಕಾರಿಯು ವಿವಿಧ ಅನರ್ಹತೆಗೊಳಗಾಗುವುದನ್ನು ತಪ್ಪಿಸಿ. ಈಗಾಗಲೇ ಹಿಂದಿನ ವರ್ಷಗಳಲ್ಲಿ ಪಾವತಿಸಿರದ ಸಹಕಾರಿಗಳು ಆದಷ್ಟು ಶೀಘ್ರವಾಗಿ ಪಾವತಿಸಲು ಸೂಕ್ತ ಕ್ರಮವಿಡುವುದು.

## 10 ದಿನಗಳ ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿಯ 19ನೇ ತಂಡದ ತರಬೇತಿ ಕಾರ್ಯಕ್ರಮ

### ತರಬೇತಿ ಕಾರ್ಯಕ್ರಮದ ವಿವರಗಳು

| | |
|---|---|
| ತರಬೇತಿಯ ದಿನಾಂಕ | 06 ರಿಂದ 15 ಜೂನ್ 2018ರವರೆಗೆ |
| ತರಬೇತಿಯ ಸ್ಥಳ | ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು |
| ಭಾಗವಹಿಸುವ ವರ್ಗ | ಕಾರ್ಯದರ್ಶಿಗಳು, ಮುಖ್ಯಕಾರ್ಯನಿರ್ವಾಹಕರು, ಅಧಿಕಾರಿಗಳು ಹಾಗೂ ಸಿಬ್ಬಂದಿಗಳು |
| ತರಬೇತಿಯ ಅವಧಿ | 6 ದಿನ ಒಳಾಂಗಣ, 2 ದಿನ ಪ್ರಾಯೋಗಿಕ, 2 ದಿನ ಅಧ್ಯಯನ ಪ್ರವಾಸ – ಒಟ್ಟು 10 ದಿನ |
| ನಿರ್ವಹಣಾ ವೆಚ್ಚ | ರೂ.5000/– ತಲಾ ಒಬ್ಬರಿಗೆ (ಊಟ, ವಸತಿ ಹಾಗೂ ಇತರೆ ವ್ಯವಸ್ಥೆಗಳಿಗಾಗಿ) |
| | (ತರಬೇತಿಯ ನೋಂದಣಿ ಶುಲ್ಕವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಈ ಹೆಸರಿನಲ್ಲಿ ಚೆಕ್/ ಡಿಡಿಯನ್ನು ಕಳುಹಿಸುವ ಮೂಲಕ ಪಾವತಿಸುವುದು) |
| ಅಭ್ಯರ್ಥಿಗಳ ಸಂಖ್ಯೆ | 50 ಮಾತ್ರ |
| ತರಬೇತಿ ಸೌಲಭ್ಯ | ಊಟ, ಉಪಹಾರ, ವಸತಿ, ಅಧ್ಯಯನ ಸಾಹಿತ್ಯ, ಯೋಗ ತರಬೇತಿ, ಆರೋಗ್ಯ ತಪಾಸಣೆ ಹಾಗೂ ಉತ್ತಮ ಸಹಕಾರಿ/ ಸಂಸ್ಥೆಗಳಿಗೆ ಅಧ್ಯಯನ ಭೇಟಿ. ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ. |
| ನೋಂದಣಿಗೆ ಕೊನೆಯ ದಿನಾಂಕ | 25.05.2018 |

### ತರಬೇತಿ ವಿಷಯಗಳು :

- ಸಹಕಾರ ಚಳುವಳಿಯ ಹುಟ್ಟು, ಬೆಳವಣಿಗೆ – ಸಹಕಾರ ತತ್ವಗಳು – ಸಹಕಾರ ಕಾಯ್ದೆ – ಸೌಹಾರ್ದ ಸಹಕಾರಿ ಕಾಯ್ದೆ ಆಶಯ – ಹುಟ್ಟು, ಬೆಳವಣಿಗೆ – ಕಾಯ್ದೆಯ ಮುಖ್ಯಾಂಶಗಳು.
- ಸಹಕಾರ ಕಾಯ್ದೆ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆ ವ್ಯತ್ಯಾಸಗಳು – ಸೌಹಾರ್ದ ಸಹಕಾರಿಗಳ ಉಪವಿಧಿಗಳು, ತಿದ್ದುಪಡಿ ವಿಧಾನ – ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು – ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳು.
- ಕಛೇರಿ ಆಡಳಿತ ನಿರ್ವಹಣೆ – ಕಡತಗಳ ನಿರ್ವಹಣೆ – ಸಮಯ ಪಾಲನೆ.
- ಸಭೆಗಳು – ಆಡಳಿತ ಮಂಡಲಿ ಸಭೆ – ವಾರ್ಷಿಕ ಸಾಮಾನ್ಯ ಸಭೆ – ವಿಶೇಷ ಸಭೆ – ಪ್ರಾಯೋಗಿಕ–01.
- ಸೌಹಾರ್ದ ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆ – ಜಮಾ ಖರ್ಚು – ಲಾಭ ನಷ್ಟ ತಃಖ್ತೆ – ಆಸ್ತಿ ಜವಾಬ್ದಾರಿ ತಃಖ್ತೆ – ಸಮನ್ವಯ ಪಟ್ಟಿ ಸಿದ್ಧಪಡಿಸುವುದು ಹಾಗೂ ವಿಶ್ಲೇಷಿಸುವುದು – ಪ್ರಾಯೋಗಿಕ–02.
- ಹಣಕಾಸಿನ ನಿರ್ವಹಣೆ – ಸಂಪನ್ಮೂಲಗಳ ಕ್ರೋಢೀಕರಣ – ಲಾಭದಾಯಕ ಹೂಡಿಕೆ – ಬಡ್ಡಿಯೇತರ ಆದಾಯಗಳು.
- ಸಾಲಗಳ ನಿರ್ವಹಣೆ – ಗುಣಮಟ್ಟ ಸಾಲ ನೀಡಿಕೆ – ಸಾಲ ವಸೂಲಾತಿ ಕ್ರಮಗಳು – ಮಾರಾಟಗಾರನ ಕರ್ತವ್ಯಗಳು – ದಾವಾ ದಾಖಲಾತಿ ವಿಧಾನ, ಅಮಲ್ಜಾರಿ ಕ್ರಮಗಳು.
- ಸಾಲ ಪತ್ರ ದಾಖಲಾತಿ & ದಾವಾ ದಾಖಲಾತಿ – ಪ್ರಾಯೋಗಿಕ 03 & 04.
- ಗ್ರಾಹಕ ಸೇವೆಗಳ ನಿರ್ವಹಣೆ – ವ್ಯವಹಾರ ಅಭಿವೃದ್ಧಿ ಯೋಜನೆ – ಡಿಜಿಟಲ್ ಬ್ಯಾಂಕಿಂಗ್ – ನಗದು ರಹಿತ ಆರ್ಥಿಕತೆ – ಆದಾಯ ತೆರಿಗೆ ಕಾಯ್ದೆ ತಿದ್ದುಪಡಿ ವಿವರಗಳ ಬಗ್ಗೆ ಮಾಹಿತಿ.
- ಒತ್ತಡ ನಿರ್ವಹಣೆ – ವ್ಯಕ್ತಿತ್ವ ವಿಕಸನ – ಮಾನವೀಯ ಮೌಲ್ಯಗಳ ನಿರ್ವಹಣೆ – ಆಂತರಿಕ ಸಂಬಂಧಗಳ ನಿರ್ವಹಣೆ ಹಾಗೂ ಇತರೆ ಮಹತ್ವದ ಅಗತ್ಯ ವಿಷಯಗಳು.
- ಯೋಗ – ಧ್ಯಾನ – ಪ್ರಾಣಾಯಾಮ – ಆರೋಗ್ಯ ಕಾರ್ಯ ಯೋಜನೆಯ ರಚನೆ.
- SWOT Analysis – ಮೌಲ್ಯಮಾಪನ – ಅನೌಪಚಾರಿಕ ಅವಧಿಗಳು – ಯಶಸ್ವಿ ಸಹಕಾರಿ ಸಂಸ್ಥೆಗಳೊಂದಿಗೆ ಸಂವಾದ ಇತ್ಯಾದಿ.

ತರಬೇತಿಗೆ ಮೊದಲು ಅರ್ಜಿಯನ್ನು ಸಲ್ಲಿಸಿದವರಿಗೆ ಆದ್ಯತೆ ನೀಡಲಾಗುವುದು. ಭಾಗವಹಿಸುವವರ ಸಂಖ್ಯೆ ನಿಗದಿತ ಸಂಖ್ಯೆಗಿಂತ ಹೆಚ್ಚಾದಲ್ಲಿ ಡಿಸೆಂಬರ್ 2018ರಲ್ಲಿ ಜರುಗುವ 20ನೇ ತಂಡದ ತರಬೇತಿಗೆ ಅವಕಾಶ ಮಾಡಿಕೊಡಲಾಗುವುದು. ತರಬೇತಿ ಪಡೆದಿರುವುದಕ್ಕೆ ಪ್ರಮಾಣ ಪತ್ರ ನೀಡಲಾಗುವುದು. ಸೌಹಾರ್ದ ಸಹಕಾರಿಗಳು ತಮ್ಮ ಸಹಕಾರಿಯಿಂದ ತರಬೇತಿಗೆ ಕಳುಹಿಸುವ ಅಭ್ಯರ್ಥಿಗಳ ತರಬೇತಿ ಶುಲ್ಕ ಹಾಗೂ ಪ್ರಯಾಣ ವೆಚ್ಚವನ್ನು ಭರಿಸಬೇಕು. ಸೌಹಾರ್ದ ಸಹಕಾರಿಗಳ ಅಭಿವೃದ್ಧಿಯ ದೃಷ್ಟಿಯಿಂದ ಇಂತಹ ವಿಶೇಷ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅಭ್ಯರ್ಥಿಗಳನ್ನು ಕಳುಹಿಸುವುದು ಅಗತ್ಯವೆನಿಸುತ್ತದೆ. ಆದ್ದರಿಂದ, ಈ ತರಬೇತಿ ಸೌಹಾರ್ದ ಸಹಕಾರಿಗಳು ತಮ್ಮ ಸಹಕಾರಿಯ ಸಿಬ್ಬಂದಿಯವರನ್ನು ಕಳುಹಿಸಿ ಕೊಡಲು ಕೋರಿದೆ.

## ವಿಶೇಷಾಧಿಕಾರಿಗಳ ನೇಮಕ

- ಶ್ರೀ ಸ್ವಯಂಭೂ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಕರ್ಲೆ, ಬೆಳಗಾವಿ (ಬಿಜಿಎಂ–271) ಸಹಕಾರಿಗೆ ನೂತನ ಮಂಡಲಿಯು ರಚನೆಯಾಗಿಲ್ಲದಿರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ ಶ್ರೀ ವೆಂಕಟೇಶ ರಾಠೋಡ, ಸಹಾಯಕ, ಬೆಳಗಾವಿ ವಿಭಾಗೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಇವರನ್ನು ವಿಶೇಷಾಧಿಕಾರಿಯಾಗಿ ನೇಮಿಸಿ ದಿನಾಂಕ 01 ಮಾರ್ಚ್ 2018ರಂದು ಆದೇಶಿಸಲಾಗಿದೆ.
- ಲಕ್ಷ್ಯ ಮಹಿಳಾ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಬೀಡಿ, ಖಾನಾಪೂರ, ಬೆಳಗಾವಿ (ಬಿಜಿಎಂ–645) ಸಹಕಾರಿಗೆ ನೂತನ ಆಡಳಿತ ಮಂಡಲಿಯು ರಚನೆಯಾಗಿಲ್ಲದಿರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ ಶ್ರೀ ವೆಂಕಟೇಶ ರಾಠೋಡ, ಸಹಾಯಕ, ಬೆಳಗಾವಿ ವಿಭಾಗೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಇವರನ್ನು ವಿಶೇಷಾಧಿಕಾರಿಯಾಗಿ ನೇಮಿಸಿ ದಿನಾಂಕ 01 ಮಾರ್ಚ್ 2018ರಂದು ಆದೇಶಿಸಲಾಗಿದೆ.
- ಶ್ರೀ ನಿಧಿ ಪತ್ತಿನ ಸೌಹಾರ್ದ ಸಹಕಾರಿ ನಿ., ಔರಾದ(ಬಿ), ಬೀದರ (ಬಿಡಿಆರ್–070) ಸಹಕಾರಿಗೆ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾಗಿದ್ದು, ನೂತನ ಆಡಳಿತ ಮಂಡಲಿಯು ರಚನೆಯಾಗಿಲ್ಲದಿರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ ಶ್ರೀ ರಾಜಶೇಖರ್.ಹೆಚ್, ಕಿರಿಯ ಅಧಿಕಾರಿ, ಕಲಬುರಗಿ ವಿಭಾಗೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಇವರನ್ನು ವಿಶೇಷಾಧಿಕಾರಿಯಾಗಿ ನೇಮಿಸಿ ದಿನಾಂಕ 12 ಮಾರ್ಚ್ 2018ರಂದು ಆದೇಶಿಸಲಾಗಿದೆ.
- ಮುನ್ನಿಸುವ್ರತ್ ಶ್ರೀ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು (ಬಿಜಿಯು–081) ಸಹಕಾರಿಗೆ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾಗಿದ್ದು, ನೂತನ ಮಂಡಲಿಯು ರಚನೆಯಾಗಿಲ್ಲದಿರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ ಶ್ರೀ ವೃಷಭನಾಥ ಪರಪ್ಪನವರ, ಕಿರಿಯ ಅಧಿಕಾರಿ, ಬೆಂಗಳೂರು ವಿಭಾಗೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಇವರನ್ನು ವಿಶೇಷಾಧಿಕಾರಿಯಾಗಿ ನೇಮಿಸಿ ದಿನಾಂಕ 17 ಮಾರ್ಚ್ 2018ರಂದು ಆದೇಶಿಸಲಾಗಿದೆ.
- ಲಕ್ಷ್ಯ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಮತಗಲ್ಲಿ, ಬೆಳಗಾವಿ (ಬಿಜಿಎಂ–571) ಸಹಕಾರಿಗೆ ನೂತನ ಆಡಳಿತ ಮಂಡಲಿಯು ರಚನೆಯಾಗಿಲ್ಲದಿರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ ಶ್ರೀ ಬಸವರಾಜ ಹೊಂಗಲ, ಕಿರಿಯ ಅಧಿಕಾರಿ, ಬೆಳಗಾವಿ ವಿಭಾಗೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಇವರನ್ನು ವಿಶೇಷಾಧಿಕಾರಿಯಾಗಿ ನೇಮಿಸಿ ದಿನಾಂಕ 20 ಮಾರ್ಚ್ 2018ರಂದು ಆದೇಶಿಸಲಾಗಿದೆ.
- ಶಿವತೇಜ ಮಲ್ಟಿಪರಪಜ್ ಸೌಹಾರ್ದ ಸಹಕಾರಿ ನಿ., ಕಡೋಲಿ, ಬೆಳಗಾವಿ (ಬಿಜಿಎಂ–681) ಸಹಕಾರಿಗೆ ನೂತನ ಆಡಳಿತ ಮಂಡಲಿಯು ರಚನೆಯಾಗಿಲ್ಲದಿರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ ಶ್ರೀ ಗಂಗಾರಾಮ್ ಸಗ್ಗು ಕೊಳಪಾಟೆ, ಕಿರಿಯ ಸಹಾಯಕ, ಬೆಳಗಾವಿ ವಿಭಾಗೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಇವರನ್ನು ವಿಶೇಷಾಧಿಕಾರಿಯಾಗಿ ನೇಮಿಸಿ ದಿನಾಂಕ 20 ಮಾರ್ಚ್ 2018ರಂದು ಆದೇಶಿಸಲಾಗಿದೆ.
- ಜಯ ಹಿಂದುಸ್ತಾನ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಸಂತಿಬಸ್ತವಾಡ, ಬೆಳಗಾವಿ (ಬಿಜಿಎಂ–699) ಸಹಕಾರಿಗೆ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾಗಿದ್ದು, ನೂತನ ಆಡಳಿತ ಮಂಡಲಿಯು ರಚನೆಯಾಗಿಲ್ಲದಿರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ ಶ್ರೀ ವೆಂಕಟೇಶ ರಾಠೋಡ, ಸಹಾಯಕ, ಬೆಳಗಾವಿ ವಿಭಾಗೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಇವರನ್ನು ವಿಶೇಷಾಧಿಕಾರಿಯಾಗಿ ನೇಮಿಸಿ ದಿನಾಂಕ 20 ಮಾರ್ಚ್ 2018ರಂದು ಆದೇಶಿಸಲಾಗಿದೆ.
- ಶ್ರೀ ತುಳಜಾ ಭವಾನಿ ಮಲ್ಟಿಪರ್ಪಜ್ ಸೌಹಾರ್ದ ಸಹಕಾರಿ ನಿ., ವಡಗಾವ್, ಬೆಳಗಾವಿ (ಬಿಜಿಎಂ–717) ಸಹಕಾರಿಗೆ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾಗಿದ್ದು, ನೂತನ ಆಡಳಿತ ಮಂಡಲಿಯು ರಚನೆಯಾಗಿಲ್ಲದಿರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ ಶ್ರೀ ವೆಂಕಟೇಶ ರಾಠೋಡ, ಸಹಾಯಕ, ಬೆಳಗಾವಿ ವಿಭಾಗೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಇವರನ್ನು ವಿಶೇಷಾಧಿಕಾರಿಯಾಗಿ ನೇಮಿಸಿ ದಿನಾಂಕ 20 ಮಾರ್ಚ್ 2018ರಂದು ಆದೇಶಿಸಲಾಗಿದೆ.
- ಶ್ರೀ ಸಮರ್ಥ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ವಿಜಯಪುರ (ಬಿಜೆಪಿ–045) ಸಹಕಾರಿಗೆ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾಗಿದ್ದು, ನೂತನ ಮಂಡಲಿಯು ರಚನೆಯಾಗಿಲ್ಲದಿರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ ಶ್ರೀ ಬಸವರಾಜ.ಎಸ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಳಗಾವಿ ವಿಭಾಗೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಇವರನ್ನು ವಿಶೇಷಾಧಿಕಾರಿಯಾಗಿ ನೇಮಿಸಿ ದಿನಾಂಕ 20 ಮಾರ್ಚ್ 2018ರಂದು ಆದೇಶಿಸಲಾಗಿದೆ.
- ಜಗಜ್ಯೋತಿ ಶ್ರೀ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಶಹಾಪೂರ, ಯಾದಗಿರಿ (ವೈಡಿಜಿ–027) ಸಹಕಾರಿಗೆ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾಗಿದ್ದು, ನೂತನ ಆಡಳಿತ ಮಂಡಲಿಯು ರಚನೆಯಾಗಿಲ್ಲದಿರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ ಶ್ರೀ ಸಂಜಯ ಕೋರಟಕರ, ವಿಭಾಗೀಯ ಅಧಿಕಾರಿ, ಕಲಬುರಗಿ ವಿಭಾಗೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಇವರನ್ನು ವಿಶೇಷಾಧಿಕಾರಿಯಾಗಿ ನೇಮಿಸಿ ದಿನಾಂಕ 21 ಮಾರ್ಚ್ 2018ರಂದು ಆದೇಶಿಸಲಾಗಿದೆ.
- ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಬನ್ನಿಕಟ್ಟೆ, ಕುಷ್ಟಗಿ, ಕೊಪ್ಪಳ (ಕೆಪಿಎಲ್–039) ಸಹಕಾರಿಗೆ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾಗಿದ್ದು, ನೂತನ ಆಡಳಿತ ಮಂಡಲಿಯು ರಚನೆಯಾಗಿಲ್ಲದಿರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ ಶ್ರೀ ವಿಜಯ್.ಬಿ.ಎಸ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಕಲಬುರಗಿ ವಿಭಾಗೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಇವರನ್ನು ವಿಶೇಷಾಧಿಕಾರಿಯಾಗಿ ನೇಮಿಸಿ ದಿನಾಂಕ 22 ಮಾರ್ಚ್ 2018ರಂದು ಆದೇಶಿಸಲಾಗಿದೆ.
- ಶ್ರೀ ಹೊಳೆಹುಚ್ಚೇಶ್ವರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಚಳಗೇರಾ, ಕುಷ್ಟಗಿ, ಕೊಪ್ಪಳ (ಕೆಪಿಎಲ್–104) ಸಹಕಾರಿಗೆ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾಗಿದ್ದು, ನೂತನ ಆಡಳಿತ ಮಂಡಲಿಯು ರಚನೆಯಾಗಿಲ್ಲದಿರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ ಶ್ರೀ ವಿಜಯ್.ಬಿ.ಎಸ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಕಲಬುರಗಿ ವಿಭಾಗೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಇವರನ್ನು ವಿಶೇಷಾಧಿಕಾರಿಯಾಗಿ ದಿನಾಂಕ 22 ಮಾರ್ಚ್ 2018ರಂದು ಆದೇಶಿಸಲಾಗಿದೆ.
- ಶ್ರೀ ಗುರು ಎಡೆಯೂರ ಸಿದ್ಧಲಿಂಗೇಶ್ವರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕುಷ್ಟಗಿ, ಕೊಪ್ಪಳ (ಕೆಪಿಎಲ್–105) ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾಗಿದ್ದು, ನೂತನ ಆಡಳಿತ ಮಂಡಲಿಯು ರಚನೆಯಾಗಿಲ್ಲದಿರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ ಶ್ರೀ ವಿಜಯ್.ಬಿ.ಎಸ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಕಲಬುರಗಿ ವಿಭಾಗೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಇವರನ್ನು ವಿಶೇಷಾಧಿಕಾರಿಯಾಗಿ ನೇಮಿಸಿ ದಿನಾಂಕ 22 ಮಾರ್ಚ್ 2018ರಂದು ಆದೇಶಿಸಲಾಗಿದೆ.

# ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರ ಭೇಟಿ



**ಕಲಬುರಗಿ :** ದಿನಾಂಕ : 04.03.2018ರಂದು ಶ್ರೀ ಶರಣ ಶಬರೀಶ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ನಿಕಟಪೂರ್ವ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ, ಕಲಬುರಗಿ ವಿಭಾಗೀಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಕಲಬುರಗಿ ವಿಭಾಗೀಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಶಹಾಪೂರ :** ದಿನಾಂಕ 04.03.2018ರಂದು ಶಹಾಪೂರ ಪಟ್ಟಣ ಸೌಹಾರ್ದ ಪತ್ತಿನ ಸಹಕಾರಿ ನಿ., ಶಹಾಪೂರ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ನಿಕಟಪೂರ್ವ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ, ಕಲಬುರಗಿ ವಿಭಾಗೀಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಕಲಬುರಗಿ ವಿಭಾಗೀಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬಳ್ಳಾರಿ :** ದಿನಾಂಕ : 09.03.2018ರಂದು ಶಾಂತಿ ಸೌಹಾರ್ದ ಪತ್ತಿನ ಸಹಕಾರಿ ನಿ., ಬಳ್ಳಾರಿ ಸಹಕಾರಿಗೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಕೆ.ಸುನೀಲ್‌ಕುಮಾರ್ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬಳ್ಳಾರಿ :** ದಿನಾಂಕ : 09.03.2018ರಂದು ಮಿಲನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬಳ್ಳಾರಿ ಸಹಕಾರಿಗೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




**ತೋರಣಗಲ್ಲು :** ದಿನಾಂಕ 09.03.2018ರಂದು ತೋರಣಗಲ್ಲು ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ತೋರಣಗಲ್ಲು ಸಹಕಾರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ. ಹಿರೇಮಠ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಕಲಬುರಗಿ :** ದಿನಾಂಕ 19.03.2018ರಂದು ಕಲಬುರಗಿ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಸಹಕಾರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ, ಸಹಕಾರಿಯ ಬೆಳವಣಿಗೆಯ ಬಗ್ಗೆ ಮಾರ್ಗದರ್ಶನ ಮಾಡಿದರು.



ಓಂ ಸ್ಪಂದನಾ ಸೌಹಾರ್ದ ಪತ್ತಿನ ಸಹಕಾರಿ ನಿ., ಮುಧೋಳ ಸಹಕಾರಿಗೆ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ವತಿಯಿಂದ ಶ್ರೀಯುತರನ್ನು ಸನ್ಮಾನಿಸಲಾಯಿತು.



**ಚಿಕ್ಕಮಗಳೂರು** : ದಿನಾಂಕ 23.03.2018ರಂದು ಶ್ರೀ ವಾಸವಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಚಿಕ್ಕಮಗಳೂರು ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಮೈಸೂರು ವಿಭಾಗೀಯ ಅಧಿಕಾರಿಯಾದ ಶ್ರೀ ವೈ.ಕುಮಾರ್ ಹಾಗೂ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರಾಜೇಶ್.ಕೆ.ಎಂ.ರವರು ಉಪಸ್ಥಿತರಿದ್ದರು.



**ಕೊಪ್ಪ** : ದಿನಾಂಕ : 23.03.2018ರಂದು ಸಹಕಾರ ಸಾರಿಗೆ, ಕೊಪ್ಪ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಮೈಸೂರು ವಿಭಾಗೀಯ ಅಧಿಕಾರಿಯಾದ ಶ್ರೀ ವೈ.ಕುಮಾರ್ ಹಾಗೂ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರಾಜೇಶ್.ಕೆ.ಎಂ.ರವರು ಉಪಸ್ಥಿತರಿದ್ದರು.




ಸಮ್ಮಿಲನ ಕೃಷಿ ಸಂಸ್ಕರಣ ಸೌಹಾರ್ದ ಸಹಕಾರಿ ನಿ., ಕೋಟೆಗದ್ದೆ ಸಹಕಾರಿಯ ಪ್ರಥಮ ಸಾಮಾನ್ಯ ಸಭೆಯ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎ.ಆರ್.ಪ್ರಸನ್ನ ಕುಮಾರ್‌ರವರು ಉಪಸ್ಥಿತರಿದ್ದರು.



**ಕೊಪ್ಪ** : ದಿನಾಂಕ 23.03.2018ರಂದು ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಮೈಸೂರು ವಿಭಾಗೀಯ ಅಧಿಕಾರಿಯಾದ ಶ್ರೀ ವೈ.ಕುಮಾರ್ ಹಾಗೂ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರಾಜೇಶ್ ಕೆ.ಎಂ. ಮತ್ತು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಜಿ.ಎಸ್.ಮಹಾಬಲ ಮತ್ತು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಎನ್.ವಿಶ್ವನಾಥ್ ಹಾಗೂ ಉಪಾಧ್ಯಕ್ಷರಾದ ಶ್ರೀಮತಿ ಮಂಗಳಾ ಪ್ರವೀಣ್ ಹಾಗೂ ಎಲ್ಲಾ ನಿರ್ದೇಶಕರುಗಳು ಉಪಸ್ಥಿತರಿದ್ದರು.



**ಕೊಪ್ಪ** : ದಿನಾಂಕ 23.03.2018ರಂದು ಯಡಗೆರೆ ಸೌಹಾರ್ದ ಪತ್ತಿನ ಸಹಕಾರಿ ನಿ., ಕೊಪ್ಪ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಮೈಸೂರು ವಿಭಾಗೀಯ ಅಧಿಕಾರಿಯಾದ ಶ್ರೀ ವೈ.ಕುಮಾರ್ ಹಾಗೂ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರಾಜೇಶ್.ಕೆ.ಎಂ.ರವರು ಉಪಸ್ಥಿತರಿದ್ದರು.



ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಹೊಸದುರ್ಗ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರ ಭೇಟಿ.



**ಕಲಬುರಗಿ** : ದಿನಾಂಕ : 19.03.2018ರಂದು ಸಿರಿ ಸಂಪದ ಸೌಹಾರ್ದ ಕೋ-ಆಪರೇಟಿವ್ ಲಿ., ಕಲಬುರಗಿ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರು ಹಾಗೂ ಸಿಬ್ಬಂದಿಗಳು ಸಂಯುಕ್ತ ಸಹಕಾರಿಯ ಕಲಬುರಗಿ ವಿಭಾಗೀಯ ಕಛೇರಿಯಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರನ್ನು ಭೇಟಿ ಮಾಡಿದ್ದ ಸಂದರ್ಭದಲ್ಲಿ ಅವರಿಗೆ ಸಹಕಾರಿಯ ಪರವಾಗಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಕಲಬುರಗಿ ವಿಭಾಗೀಯ ಅಧಿಕಾರಿಗಳು ಉಪಸ್ಥಿತರಿದ್ದರು.

# ದಿನಾಂಕ : 31.03.2018ಕ್ಕೆ ಅಂತ್ಯಗೊಂಡಿರುವ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳ ಮತ್ತು ಸೌಹಾರ್ದ ಸಹಕಾರಿ ಬ್ಯಾಂಕುಗಳ ಆರ್ಥಿಕ ಪ್ರಗತಿಯ ಅಂಕಿ ಅಂಶಗಳ ವಿವರಗಳು

## ವಿಕಾಸ್ ಸೌಹಾರ್ದ ಕೋ ಆಪರೇಟಿವ್ ಬ್ಯಾಂಕ್ ಲಿ., ಹೊಸಪೇಟೆ



| ವಿಕಾಸ್ ಸೌಹಾರ್ದ ಕೋ ಆಪರೇಟಿವ್ ಬ್ಯಾಂಕ್ ಲಿ., ಹೊಸಪೇಟೆ | |
|---|---|
| ಠೇವಣಿಗಳು | ರೂ.336.93 ಕೋಟಿ |
| ಸಾಲಗಳು | ರೂ.200.19 ಕೋಟಿ |
| ಒಟ್ಟು ಲಾಭ | ರೂ.6.48 ಕೋಟಿ |
| ನಿವ್ವಳ ಲಾಭ | ರೂ.3.85 ಕೋಟಿ |
| Gross NPA | ಶೇ. 2.81 |
| Net NPA | ಶೇ. 0.91 |
| ಒಟ್ಟು ವ್ಯವಹಾರ | ರೂ. 537.12 ಕೋಟಿ |

**ಹೊಸಪೇಟೆ :** ವಿಕಾಸ ಸೌಹಾರ್ದ ಕೋ ಆಪರೇಟಿವ್ ಬ್ಯಾಂಕ್ ಪ್ರಸಕ್ತ 2017-18ನೇ ಆರ್ಥಿಕ ವರ್ಷದಲ್ಲಿ ರೂ. 6.48 ಕೋಟಿ ಲಾಭ ಗಳಿಸಿದೆ ಎಂದು ಮತ್ತು ಅಂಕಿ-ಅಂಶಗಳ ವಿವರಗಳನ್ನು ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ವಿಶ್ವನಾಥ ಚ. ಹಿರೇಮಠರವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

**ಸಹಕಾರಿ ಬ್ಯಾಂಕ್ ವಿಲೀನ :** ಈಗಾಗಲೇ ಹುಬ್ಬಳ್ಳಿಯ ಅಭಿನಂದನಾ ಕೋ-ಆಪರೇಟಿವ್ ಬ್ಯಾಂಕ್ ಅನ್ನು ವಿಲೀನ ಮಾಡಿಕೊಂಡು ಅತ್ಯಂತ ಲಾಭದಾಯಕ ಹೆಜ್ಜೆಗಳ ಮೂಲಕ ವಿಕಾಸ ಹೊಂದಿರುವ ಬ್ಯಾಂಕ್ ಶೀಘ್ರದಲ್ಲಿಯೇ ಮುಧೋಳದ ದಿ ಮುಧೋಳ ಕೋ-ಆಪರೇಟಿವ್ ಬ್ಯಾಂಕ್‌ನ್ನು ವಿಲೀನಗೊಳಿಸಿಕೊಂಡು ಮತ್ತೊಂದು ವಿಕ್ರಮ ಸಾಧಿಸಲು ಮುಂದಾಗಲಿದೆ.

## ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿಗೆ ರೂ.1.03 ಕೋಟಿ ನಿವ್ವಳ ಲಾಭ

ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿ ನಿ., ಗಂಗೊಳ್ಳಿ ಸಹಕಾರಿಯು ದಿನಾಂಕ : 31.03.2018ರಂದು ಅಂತ್ಯವಾಗುವ 2017-18ನೇ ಸಾಲಿನ ಸಹಕಾರಿ ವರ್ಷದಲ್ಲಿ ಒಟ್ಟು ರೂ.1,03,30,546/-ಗಳ ನಿವ್ವಳ ಲಾಭ ಗಳಿಸಿದ್ದು, ಉಡುಪಿ ಜಿಲ್ಲೆಯಲ್ಲಿ ರೂ.1 ಕೋಟಿ ನಿವ್ವಳ ಲಾಭ ಗಳಿಸಿದ ಪ್ರಥಮ ಸೌಹಾರ್ದ ಸಹಕಾರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಸಹಕಾರಿಯು ವರದಿ ವರ್ಷಾಂತ್ಯದಲ್ಲಿ ಒಟ್ಟು ರೂ.32.14 ಕೋಟಿ ಠೇವಣಿ, ರೂ.30.92 ಕೋಟಿ ಹೊರಬಾಕಿ ಸಾಲ, ರೂ.1.99 ಕೋಟಿ ಪಾಲು ಬಂಡವಾಳ, ರೂ.2.43 ಕೋಟಿ ಕ್ಷೇಮ ನಿಧಿಯನ್ನು ಹೊಂದಿದ್ದು, ಬರುವ 2020ನೇ ಸಾಲಿನಲ್ಲಿ ಸಂಸ್ಥೆಯು ಶತಮಾನೋತ್ಸವವನ್ನು ಆಚರಿಸಲಿದೆ.

| ಸಿದ್ಧಿ ವಿನಾಯಕ ಸೌಹಾರ್ದ ಸಹಕಾರಿ ನಿ., ಕಲಬುರಗಿ | |
|---|---|
| ಶೇರು ಬಂಡವಾಳ | ರೂ. 90 ಲಕ್ಷ |
| ಒಟ್ಟು ಠೇವಣಿ | ರೂ. 15.7 ಕೋಟಿ |
| ದುಡಿಯುವ ಬಂಡವಾಳ | ರೂ. 9.9 ಕೋಟಿ |
| ನಿಧಿಗಳು | ರೂ. 1.53 ಕೋಟಿ |
| NPA | ಶೇ. 4 |
| ಹೂಡಿಕೆಗಳು | ರೂ. 5.7 ಕೋಟಿ |
| ಲಾಭ | ರೂ. 84.55 ಲಕ್ಷ |

| ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ | |
|---|---|
| ಶೇರು ಬಂಡವಾಳ | ರೂ.2 ಕೋಟಿ 92 ಲಕ್ಷ |
| ಠೇವಣಿಗಳು | ರೂ.138 ಕೋಟಿ 49 ಲಕ್ಷ |
| ಸಾಲ & ಮುಂಗಡಗಳು | ರೂ.100 ಕೋಟಿ 72 ಲಕ್ಷ |
| ಕಾಯ್ದಿಟ್ಟ ನಿಧಿಗಳು | ರೂ.16 ಕೋಟಿ 70 ಲಕ್ಷ |
| ದುಡಿಯುವ ಬಂಡವಾಳ | ರೂ.158 ಕೋಟಿ |
| ಒಟ್ಟು ವ್ಯವಹಾರ (DEPOSIT & LOANS) | ರೂ.239 ಕೋಟಿ |
| Gross NPA | ಶೇ.4.34 |
| Net NPA | ಶೇ.0 |
| CD RATIO | ಶೇ.72 |
| ನಿವ್ವಳ ಲಾಭ | ರೂ.3 ಕೋಟಿ 11 ಲಕ್ಷ |

| ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ | |
|---|---|
| ಬಂಡವಾಳ | ರೂ.1.43 ಕೋಟಿ |
| ಠೇವಣಿಗಳು | ರೂ.87.92 ಕೋಟಿ |
| ನಿಧಿಗಳು | ರೂ.24.43 ಕೋಟಿ |
| ಸಾಲಗಳು | ರೂ.56.48 ಕೋಟಿ |
| ದುಡಿಯುವ ಬಂಡವಾಳ | ರೂ.118.24 ಕೋಟಿ |
| ಲಾಭ | ರೂ.2.92 ಕೋಟಿ |
| ಸ್ವಂತ ನಿಧಿ | ರೂ. 25.87 ಕೋಟಿ |
| NPA | ರೂ.0.69 ಕೋಟಿ |
| Gross NPA | ಶೇ.1.22 |

| ಶುಶೃತಿ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಬೆಂಗಳೂರು | |
|---|---|
| ಒಟ್ಟು ಠೇವಣಿಗಳು | ರೂ.135 ಕೋಟಿ |
| ಒಟ್ಟು ಮುಂಗಡಗಳು | ರೂ.104 ಕೋಟಿ |
| ತೆರಿಗೆ ಮುಂಚಿನ ಲಾಭ | ರೂ.175 ಲಕ್ಷ |
| ತೆರಿಗೆ ನಂತರ ಲಾಭ | ರೂ.102 ಲಕ್ಷ |
| NPA | ಶೇ.4 |

| ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಂಗಳೂರು | |
|---|---|
| ಸದಸ್ಯರು | 8,488 |
| ಶೇರು ಬಂಡವಾಳ | ರೂ.1,379.87 ಲಕ್ಷ |
| ಠೇವಣಿಗಳು | ರೂ.20,541.67 ಲಕ್ಷ |
| ಹೂಡಿಕೆಗಳು | ರೂ.8,645.43 ಲಕ್ಷ |
| ಸಾಲಗಳು ಮತ್ತು ಮುಂಗಡಗಳು | ರೂ.13,814.30 ಲಕ್ಷ |
| ದುಡಿಯುವ ಬಂಡವಾಳ | ರೂ.23,929.28 ಲಕ್ಷ |
| ನಿವ್ವಳ ಲಾಭ (ಅನ್ ಆಡಿಟೆಡ್) | ರೂ.365.08 ಲಕ್ಷ |
| CD Ration | ಶೇ.67.25 |
| ನಿಧಿಗಳು | ರೂ.1,521.58 ಲಕ್ಷ |
| Gross NPA | ಶೇ.0.20 |
| Net NPA | ಶೇ.0 |

# ಸುಕೋ ಬ್ಯಾಂಕಿನಿಂದ 5 ನೂತನ ಶಾಖೆಗಳ ಪ್ರಾರಂಭ

**ರಾಜ್ಯದ ಅಗ್ರಣಿ ಬ್ಯಾಂಕ್ ಆಗಿರುವ ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ತನ್ನ ನೂತನ 5 ಶಾಖೆಗಳನ್ನು ಬೆಳಗಾವಿ, ರಾಣೆಬೆನ್ನೂರು, ಹಾವೇರಿ, ಬಳ್ಳಾರಿ ಹಾಗೂ ಕಲಬುರಗಿಯಲ್ಲಿ ಆರಂಭಿಸಿದೆ. ರಿಸರ್ವ್ ಬ್ಯಾಂಕಿನಿಂದ ಈ ವರ್ಷ 10 ಶಾಖೆಗಳನ್ನು ತೆರೆಯಲು ಲೈಸೆನ್ಸ್ ದೊರೆತಿದ್ದು, ಈಗ 10 ಶಾಖೆಗಳನ್ನೂ ಆರಂಭಿಸಲಾಗಿದೆ.**

**ಬೆಳಗಾವಿ :** ದಿನಾಂಕ 19.02.2018ರಂದು ಬ್ಯಾಂಕಿನ 24ನೇ ಶಾಖೆಯನ್ನು ಕರ್ನಾಟಕದ 2ನೇಯ ರಾಜಧಾನಿ ಬೆಳಗಾವಿಯಲ್ಲಿ ಆರಂಭಿಸಲಾಯಿತು. ಶ್ರೀ ಶಿವಕುಮಾರ್ ಖಿಡಬಡಿ, ಚಾರ್ಟೆರ್ಡ್ ಅಕೌಂಟೆಂಟ್ ಹಾಗೂ ಅಧ್ಯಕ್ಷರು, SIRC-ICAI, ಮುಖ್ಯ ಅತಿಥಿಗಳಾದ ಶ್ರೀ ಮನೋಹರ ಮಸ್ಕಿ, ಸುಕೋ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರು, ಶ್ರೀ ಜಗದೀಶ ಕವಟಗಿಮಠ, ಉಪಾಧ್ಯಕ್ಷರು, ಕ.ರಾ. ಸೌ. ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಶ್ರೀ ಬಸವರಾಜ ಸುಲ್ತಾನಪುರೆ, ಅಧ್ಯಕ್ಷರು, ಬೆಳಗಾವಿ ಜಿಲ್ಲಾ ಸಹಕಾರಿ ಯೂನಿಯನ್, ಶ್ರೀ ರಾವ್ ಸಾಹೇಬ್, ಸಹಕಾರಿ ಧುರೀಣರು, ಬೆಳಗಾವಿ ಮತ್ತು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೋಹಿತ್ ಮಸ್ಕಿರವರು ಶಾಖೆಯನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಬ್ಯಾಂಕಿನ ಎ.ಟಿ.ಎಂ. ಅನ್ನು ಉದ್ಘಾಟಿಸಲಾಯಿತು.






**ರಾಣೆಬೆನ್ನೂರು :** ದಿನಾಂಕ : 10.03.2018ರಂದು ಬ್ಯಾಂಕಿನ 25ನೇ ಶಾಖೆಯನ್ನು ರಾಣೆಬೆನ್ನೂರಿನಲ್ಲಿ ಶ್ರೀ ಮನೋಹರ ಮಸ್ಕಿ, ಸಂಸ್ಥಾಪಕ ಅಧ್ಯಕ್ಷರು, ಸುಕೋ ಬ್ಯಾಂಕ್, ಶ್ರೀ ಬಸವರಾಜ್ ಎನ್. ಪಾಟೀಲ್, ಕಾರ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ಮೆಕ್ಕೆಜೋಳ ವ್ಯಾಪಾರಸ್ಥರ ಸಂಘ, ಶ್ರೀ ಗದಿಗೆಪ್ಪ ಜಿ. ಹೊಟ್ಟೆಗೌಡರು, ಕಾರ್ಯದರ್ಶಿಗಳು, ವರ್ತಕರ ಮಾರುಕಟ್ಟೆ ಸಂಘ, ಡಾ. ಸಂಜೀವ್ ಎಮ್. ಮುದ್ರಿ, ಖ್ಯಾತ ವೈದ್ಯರು ಹಾಗೂ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೋಹಿತ್ ಮಸ್ಕಿರವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.

**ಹಾವೇರಿ :** ದಿನಾಂಕ 10.03.2018ರಂದು ಬ್ಯಾಂಕಿನ 26ನೇ ಶಾಖೆಯನ್ನು ಹಾವೇರಿಯಲ್ಲಿ ಮಾನ್ಯ ಮಾಜಿ ಸಚಿವರಾದ ಶ್ರೀ ಸಿ.ಎಮ್.ಉದಾಸಿ, ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಮನೋಹರ ಮಸ್ಕಿ, ಶ್ರೀ ಶೇಕಪ್ಪ ಗದಿಗೆಪ್ಪ ಗಚ್ಚಿನ, ಅಧ್ಯಕ್ಷರು, ವರ್ತಕರ ಸಂಘ, ಶ್ರೀ ರಾಚಪ್ಪ ಸಂಗಪ್ಪ ಮಾಗನೂರು, ಅಧ್ಯಕ್ಷರು, ಚೇಂಬರ್ ಆಫ್ ಕಾಮರ್ಸ್, ಹಾವೇರಿ, ಶ್ರೀ ಎಮ್.ಬಿ.ಕಲಾಲ್, ಸಹಕಾರಿ ಧುರೀಣರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರು ಮತ್ತು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೋಹಿತ್ ಮಸ್ಕಿರವರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.





**ಬಳ್ಳಾರಿ :** ದಿನಾಂಕ : 12.03.2018ರಂದು ಬ್ಯಾಂಕಿನ 27ನೇ ಶಾಖೆಯನ್ನು ಬಳ್ಳಾರಿಯಲ್ಲಿ ಆರಂಭಿಸಲಾಯಿತು. ಇದು ಬಳ್ಳಾರಿಯಲ್ಲಿ ಸುಕೋ ಬ್ಯಾಂಕಿನ ಮೂರನೆಯ ಶಾಖೆಯಾಗಿರುತ್ತದೆ. ಬಳ್ಳಾರಿಯ ಖ್ಯಾತ ಚಾರ್ಟೆರ್ಡ್ ಅಕೌಂಟೆಂಟ್ ಹಾಗೂ ಶಬರಿ ಅಯ್ಯಪ್ಪ ಸ್ವಾಮಿ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಜಯ ಪ್ರಕಾಶ್ ಜಿ. ಗುಪ್ತಾ, ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೋಹಿತ್ ಮಸ್ಕಿ, ಉಪಾಧ್ಯಕ್ಷರಾದ ಶ್ರೀ ಮುರಳೀಧರ ರೆಡ್ಡಿ ಪಿ, ನಿರ್ದೇಶಕರಾದ ಶ್ರೀಮತಿ ಸಾವಿತ್ರಿ ಅವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.



ಕರ್ನಾಟಕದಲ್ಲಿ ಶೀಘ್ರ ಗತಿಯಲ್ಲಿ ಬೆಳೆಯುತ್ತಿರುವ ಸೌಹಾರ್ದ ಸಹಕಾರಿ ಬ್ಯಾಂಕ್ ಆಗಿರುವ 'ಸುಕೋ ಬ್ಯಾಂಕ್' ರೂ.806 ಕೋಟಿ ದಾಖಲೆಯ ವಹಿವಾಟು ದಾಟಿದೆ ಹಾಗೂ ಹಲವು ವಿಶೇಷತೆಗಳನ್ನು ಒಳಗೊಂಡಿದೆ ಎಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೋಹಿತ್ ಮಸ್ಕಿಯವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

**ದಾಖಲೆಯ ವ್ಯವಹಾರ ತಲುಪಿದ ಸುಕೋ ಬ್ಯಾಂಕ್**

| | | | |
|---|---|---|---|
| ಒಟ್ಟು ವ್ಯವಹಾರ | ರೂ.806 ಕೋಟಿ | ಲಾಭ | ರೂ.7.9 ಕೋಟಿ |
| ಸಾಲಗಳು | ರೂ.316 ಕೋಟಿ | NPA | ಶೇ.1.40 |
| ಠೇವಣಿಗಳು | ರೂ.490 ಕೋಟಿ | | |

## ಬ್ಯಾಂಕಿನ ಹಲವು ವಿಶೇಷತೆಗಳು

- U.P.I (Unified Payment Interface)ನಲ್ಲಿ ನೋಂದಣಿಗೊಂಡ ರಾಜ್ಯದ ಪ್ರಥಮ ಸಹಕಾರಿ ಬ್ಯಾಂಕ್ ಸುಕೋ ಬ್ಯಾಂಕ್ ಆಗಿದ್ದು, ಭೀಮ್ ಆ್ಯಪ್, ಫೋನ್‌ಪೇ, ತೇಜ್ ಹಾಗೂ ಪೇಟಿಎಮ್‌ಗಳಲ್ಲೂ ವ್ಯವಹರಿಸುವ ಸೌಲಭ್ಯವನ್ನು ಮೇ.1 ರಿಂದ ಆರಂಭಿಸಲಿದೆ.
- ಟೆಕ್ನೋ-ಸೇವೀ ಬ್ಯಾಂಕ್ ಆಗಿರುವ ಸುಕೋ ಬ್ಯಾಂಕ್ ಈಗಾಗಲೇ S-Pay, POS ಹಾಗೂ ಇ-Commerce ಸೇವೆಗಳನ್ನು ಈಗಾಗಲೇ ತನ್ನ ಗ್ರಾಹಕರಿಗೆ ನೀಡುತ್ತಿದೆ.
- ರಿಸರ್ವ್ ಬ್ಯಾಂಕಿನಿಂದ ಸ್ವಂತ IFSC ಕೋಡ್ ಪಡೆಯುವ ಮೂಲಕ ಸ್ವಂತ IFSC ಕೋಡ್ ಪಡೆದ ಉತ್ತರ ಕರ್ನಾಟಕದ ಪ್ರಥಮ ಸಹಕಾರಿ ಬ್ಯಾಂಕ್ ಆಗಿ ಸುಕೋ ಬ್ಯಾಂಕ್ ಹೊರಹೊಮ್ಮಿದೆ.
- ಸುಕೋ ಬ್ಯಾಂಕ್ ರಾಷ್ಟ್ರದ ATM ಜಾಲಕ್ಕೆ ಸೇರಿದ ರಾಜ್ಯದ ಪ್ರಥಮ ಸಹಕಾರಿ ಬ್ಯಾಂಕ್ ಆಗಿದ್ದು, ತನ್ನ ಗ್ರಾಹಕರಿಗೆ ಭಾವಚಿತ್ರ ಸಹಿತದ ಡೆಬಿಟ್ ಕಾರ್ಡ್‌ಗಳನ್ನು ಕಳೆದ 4 ವರ್ಷಗಳಿಂದ ನೀಡುತ್ತಿದೆ. ಮೊಬೈಲ್ ಬ್ಯಾಂಕಿಂಗ್ ಸೇವೆಯನ್ನು ಕಳೆದ 2 ವರ್ಷಗಳಿಂದ ತನ್ನ ಗ್ರಾಹಕರಿಗೆ ನೀಡುತ್ತಿದೆ.

**ಕಲಬುರಗಿ :** ದಿನಾಂಕ : 14.03.2018ರಂದು ಬ್ಯಾಂಕಿನ 28ನೇ ಶಾಖೆಯನ್ನು ಕಲಬುರಗಿಯಲ್ಲಿ ಆರಂಭಿಸಲಾಯಿತು. ಕಲಬುರಗಿಯ ಮಹಾ ದಾಸೋಹ ಪೀಠಾಧಿಕಾರಿಗಳು, ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಹಾಗೂ ಅಖಿಲ ಭಾರತ ಅನುಭವ ಮಂಟಪ, ಕಲಬುರಗಿಯ ಅಧ್ಯಕ್ಷರೂ ಆಗಿರುವ ಪರಮಪೂಜ್ಯ ಡಾ. ಶರಣಬಸವಪ್ಪ ಅಪ್ಪ, ಸುಕೋ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಮನೋಹರ ಮಸ್ಕಿ, ಕಲಬುರಗಿಯ ಹಿರಿಯ ಸಾಹಿತಿಗಳಾದ ಡಾ. ಸ್ವಾಮೀರಾವ್ ಕುಲಕರ್ಣಿ ಹಾಗೂ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೋಹಿತ್ ಮಸ್ಕಿರವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಡಾ. ಶರಣ ಬಸವಪ್ಪ ಅಪ್ಪ ಅವರು ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಮನೋಹರ ಮಸ್ಕಿಯವರನ್ನು ಸನ್ಮಾನಿಸಿದರು.



ಈ ಐದು ಶಾಖೆಗಳ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕರಾದ ಪರಿಮಳಾಚಾರ್ಯ ಎಸ್. ಅಗ್ನಿಹೋತ್ರಿ, ಶಾಖಾ ವ್ಯವಸ್ಥಾಪಕರು ಹಾಗೂ ಸಿಬ್ಬಂದಿಗಳು ಹಾಜರಿದ್ದರು.

## ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕಿನ 4ನೇ ಶಾಖೆಯ ಉದ್ಘಾಟನೆ

**ರಘುವನಹಳ್ಳಿ :** ಕನಕಪುರ ರಸ್ತೆಯ ರಘುವನಹಳ್ಳಿಯಲ್ಲಿ ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಂಗಳೂರು ಬ್ಯಾಂಕಿನ 4ನೇ ಶಾಖೆಯನ್ನು ದಿನಾಂಕ 11.03.2018ರಂದು ಬೆಂಗಳೂರು ಪ್ರಾಂತದ ಜಂಟಿ ನಿಬಂಧಕರಾದ ಶ್ರೀ ಎಂ.ಡಿ.ನರಸಿಂಹ ಮೂರ್ತಿರವರು ಉದ್ಘಾಟಿಸಿ, ಮಾತನಾಡಿದ ಅವರು ವಾಣಿಜ್ಯ ಹಾಗೂ ಬಹು ರಾಷ್ಟ್ರೀಯ ಬ್ಯಾಂಕುಗಳು ತಲುಪದೇ ಇರುವ ಸಾಮಾನ್ಯ ಜನ ವರ್ಗವನ್ನು ಇಂದು ಸಹಕಾರಿ ಬ್ಯಾಂಕುಗಳು ತಲುಪುತ್ತಿವೆ, ಶ್ರೀ ನಿಧಿ ಸೌಹಾರ್ದ ಸಹಕಾರಿ ಬ್ಯಾಂಕು ಉತ್ತಮ ಸಹಕಾರಿ ಬ್ಯಾಂಕುಗಳಲ್ಲಿ ಒಂದಾಗಿದ್ದು, ಅದರ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರ ಪ್ರಾಮಾಣಿಕತೆ ಹಾಗೂ ಗ್ರಾಹಕರೊಂದಿಗಿನ ಉತ್ತಮ ಬಾಂಧವ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸದಾಶಿವರೆಡ್ಡಿಯವರು ಉದ್ಘಾಟನಾ ಸಮಾರಂಭಕ್ಕೆ ಆಗಮಿಸಿದ ಎಲ್ಲಾ ಗಣ್ಯರಿಗೂ ಸ್ವಾಗತ ಕೋರಿದರು. ನಂತರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಫೆಬ್ರವರಿ 2018ರ ಅಂತ್ಯಕ್ಕೆ ಬ್ಯಾಂಕು 8433 ಸದಸ್ಯರುಗಳನ್ನು ಹೊಂದಿದ್ದು, ರೂ.13 ಕೋಟಿ ಶೇರು ಬಂಡವಾಳವನ್ನು ಕ್ರೋಢೀಕರಿಸಿದೆ. ರೂ.194 ಕೋಟಿಗೂ ಅಧಿಕ ಠೇವಣಿ ಸಂಗ್ರಹಿಸಿ, ರೂ.134 ಕೋಟಿಗೂ ಹೆಚ್ಚು ಸಾಲ ಸೌಲಭ್ಯಗಳನ್ನು ನೀಡಿದೆ ಹಾಗೂ ಬ್ಯಾಂಕಿನ ವ್ಯವಹಾರವು ರೂ.330 ಕೋಟಿಗೂ ಅಧಿಕವಾಗಿದ್ದು, ಕಳೆದ ಆರ್ಥಿಕ ವರ್ಷದಲ್ಲಿ ಕೊಟ್ಟ ಸಾಲಗಳನ್ನು ಪರಿಣಾಮಕಾರಿಯಾಗಿ ವಸೂಲಿ ಮಾಡಿ, ಸತತವಾಗಿ ಎರಡು ವರ್ಷಗಳಿಂದ ಶೂನ್ಯ ಎನ್.ಪಿ.ಎ. ಪ್ರಮಾಣವನ್ನು ಕಾಪಾಡಿಕೊಂಡು ಬಂದಿದ್ದು, ಕಳೆದ ಆರ್ಥಿಕ ವರ್ಷದಲ್ಲಿ ರೂ.314 ಕೋಟಿ ಲಾಭ ಗಳಿಸಿ, ಸದಸ್ಯರಿಗೆ ಶೇ.14 ಲಾಭಾಂಶವನ್ನು ನೀಡಿದೆ ಎಂದು ಹೇಳಿದರು.

ಮುಂದುವರೆದು ಮಾತನಾಡಿದ ಅವರು ಬ್ಯಾಂಕಿನಲ್ಲಿ ಗ್ರಾಹಕರುಗಳಿಗೆ



ಇತ್ತೀಚಿನ ಆಧುನಿಕ ಸೌಲಭ್ಯಗಳಾದ RTGS/ NEFT/ IMPS/ POS/ E-Commerce/ Demand Draft/ Pay Orderಗಳನ್ನು ನೀಡುವ ಮೂಲಕ ನಗದು ರಹಿತ ವ್ಯವಹಾರಕ್ಕೆ ಉತ್ತೇಜನ ನೀಡಲಾಗುತ್ತಿದೆ ಮತ್ತು ಗ್ರಾಹಕರಿಗೆ ATM ಹಾಗೂ POS Machineಗಳ ಸೌಲಭ್ಯವನ್ನು ಸಹ ಒದಗಿಸಲಾಗುತ್ತಿದೆ. ಬ್ಯಾಂಕು ಈಗಾಗಲೇ ನಾಲ್ಕು ಶಾಖೆಗಳನ್ನು ಹೊಂದಿದ್ದು, ಶೀಘ್ರದಲ್ಲಿ ನಗರದ ಬನ್ನೇರು ಘಟ್ಟ ರಸ್ತೆಯ ಅರಕೆರೆಯಲ್ಲಿ 5ನೇ ಶಾಖೆಯನ್ನು ತೆರೆಯುವುದಾಗಿ ತಿಳಿಸಿದರು ಹಾಗೂ ವಿ.ವಿ.ಪುರಂನ ಸ್ವಂತ ಕಟ್ಟಡದಲ್ಲಿ ಆಡಳಿತ ಕಛೇರಿ ಮತ್ತು ಶಾಖೆಯನ್ನು ಹೊಂದಿದ್ದು, ಅದೇ ಆವರಣದಲ್ಲಿ ಈಗ ಸ್ವಂತ ಎ.ಟಿ.ಎಂ.ನ್ನು ತೆರೆಯಲಾಗುವುದು ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರಾದ ಶ್ರೀಮತಿ ಗೀತಾ ಆನಂದ್ ಹಾಗೂ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ವಿ.ಶಂಕರ ರೆಡ್ಡಿ, ನಿರ್ದೇಶಕರುಗಳು ಮತ್ತು ಬ್ಯಾಂಕಿನ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



## ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್‌ನ 29ನೇ ಶಾಖೆಯ ಉದ್ಘಾಟನೆ

**ಬೆಂಗಳೂರು :** ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಲಿ., ಕೋಲಾರ ಸಹಕಾರಿಯ 29ನೇ ಶಾಖೆಯನ್ನು ಬೆಂಗಳೂರಿನ ಮಾಗಡಿ ರಸ್ತೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ಸಹಕಾರಿಯ ಅಧ್ಯಕ್ಷರೂ ಆದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ಉದ್ಘಾಟಿಸಿದರು.

# ಶ್ರೀ ಶ್ರೀಶೈಲ ಸೌಹಾರ್ದ ಪತ್ತಿನ ಸಹಕಾರಿಯ ದಶಮಾನೋತ್ಸವ ಕಾರ್ಯಕ್ರಮ

**ಕಲಬುರಗಿ :** ಶ್ರೀ ಶ್ರೀಶೈಲ ಸೌಹಾರ್ದ ಪತ್ತಿನ ಸಹಕಾರಿ ನಿ., ರಾಜಾಪೂರ, ಕಲಬುರಗಿ ಸಹಕಾರಿಯ ದಶಮಾನೋತ್ಸವ ಕಾರ್ಯಕ್ರಮವು ದಿನಾಂಕ 04.03.2018ರಂದು ಸಹಕಾರಿಯ ಆವರಣದಲ್ಲಿ ಜರುಗಿತು.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಕಲಬುರಗಿ ದಕ್ಷಿಣ ಮತ ಕ್ಷೇತ್ರದ ಶಾಸಕರಾದ ಶ್ರೀ ದತ್ತಾತ್ರೇಯ ಪಾಟೀಲ ರೇವೂರರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ವಹಿಸಿದ್ದರು.

ಅತಿಥಿಗಳಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ, ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಕಲಬುರಗಿ–ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಸೋಮಶೇಖರ ಗಣನಾಯಕ, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ನಿರ್ದೇಶಕರಾದ ಶ್ರೀ ಎಸ್.ಎಸ್.ಪಾಟೀಲ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ



ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಹಿರಿಯ ಲೆಕ್ಕಪರಿಶೋಧಕರಾದ ಶ್ರೀ ವೀರಣ್ಣಾ ಜಿ. ಮಹಾಂತಗೋಳರವರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಸಹಕಾರಿಯನ್ನು 10 ವರ್ಷ ಯಶ್ವಸಿಯಾಗಿ ಮುನ್ನಡೆಸಿಕೊಂಡು ಬಂದ ಹಿನ್ನೆಲೆಯಲ್ಲಿ ಸದಸ್ಯರು ಸಹಕಾರಿಯ ಅಧ್ಯಕ್ಷರಾದ ಶ್ರೀ ಸಿದ್ಧರಾಮ ಮಹಾಂತಗೋಳ ಹಾಗೂ ಉಪಾಧ್ಯಕ್ಷರಾದ ಶ್ರೀ ಪ್ರಕಾಶ ಪಂಚಾಳರವರನ್ನು ಸನ್ಮಾನಿಸಿದರು. ಈ ಕಾರ್ಯಕ್ರಮದಲ್ಲಿ ಸಹಕಾರಿಯ ಸದಸ್ಯರು, ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಪಾಲ್ಗೊಂಡಿದ್ದು ಸಂತೋಷ ಎಂದು ಸಹಕಾರಿಯ ಅಧ್ಯಕ್ಷರು ಹರ್ಷ ವ್ಯಕ್ತಪಡಿಸಿದರು.



## ಜನಸೇವಾ ಪತ್ತಿನ ಸೌಹಾರ್ದ ಸಹಕಾರಿಯ ಉದ್ಘಾಟನೆ

**ತೋರಣಗಲ್ಲು :** ದಿನಾಂಕ : 09.03.2018ರಂದು ನೂತನವಾಗಿ ಪ್ರಾರಂಭವಾದ ಜನಸೇವಾ ಪತ್ತಿನ ಸೌಹಾರ್ದ ಸಹಕಾರಿ ನಿ., ತೋರಣಗಲ್ಲು ಸಹಕಾರಿಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ. ಹಿರೇಮಠರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಮತ್ತು ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಎಂ.ಶಿವಶಂಕರಯ್ಯ ಸ್ವಾಮಿ ಹಾಗೂ ಆಡಳಿತ ಮಂಡಲಿಯ ಸದಸ್ಯರು ಉಪಸ್ಥಿತರಿದ್ದರು.

## ದಕ್ಷಿಣ ಕನ್ನಡ ಮಿತ್ರವೃಂದ ಪತ್ತಿನ ಸೌಹಾರ್ದ ಸಹಕಾರಿಯ ಉದ್ಘಾಟನೆ

**ತುಮಕೂರು :** ದಿನಾಂಕ : 11.03.2018ರಂದು ದಕ್ಷಿಣ ಕನ್ನಡ ಮಿತ್ರವೃಂದ ಪತ್ತಿನ ಸೌಹಾರ್ದ ಸಹಕಾರಿ ನಿ., ತುಮಕೂರು ಸಹಕಾರಿಯ ಉದ್ಘಾಟನೆಯನ್ನು ಶ್ರೀ ಶಂಕರಮಠದ ಸಭಾಂಗಣದಲ್ಲಿ ಮುಖ್ಯ ಅತಿಥಿಗಳಾದ ಶ್ರೀ ಸಂತೋಷ ಹೆಗ್ಡೆಯವರೊಂದಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಮಾಜಿ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರ, ನಿರ್ದೇಶಕರಾದ ಶ್ರೀ ಬಿ.ಗಂಗಾಧರಯ್ಯರವರು ಉದ್ಘಾಟಿಸಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಟಿ.ವಾಸುದೇವ ತವಳ ಹಾಗೂ ಉಪಾಧ್ಯಕ್ಷರಾದ ಶ್ರೀ ಶಿವರಾಮ ಶೆಟ್ಟಿ.ಕೆ.ರವರು



ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ಹಿರಿಯರಾದ 5 ಜನ ಸದಸ್ಯರಿಗೆ ಸಾಂಕೇತಿಕವಾಗಿ ಶೇರ್ ಸರ್ಟಿಫಿಕೇಟ್ ಅನ್ನು ನೀಡಲಾಯಿತು.



ಶ್ರೀ ಗುರುಮಾತೆಯರ ಮಹಿಳಾ ಸೌಹಾರ್ದ ಸಹಕಾರಿ ನಿ., ವಿಜಯಪುರ ಸಹಕಾರಿಗೆ ರಾಜ್ಯ ಮಟ್ಟದ ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ ನೀಡಿ, ಪುರಸ್ಕರಿಸಲಾಗಿದೆ.



ಶ್ರೀ ಉದಯೋನ್ಮುಖ ಪತ್ತಿನ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿಯ ಉದ್ಘಾಟನೆ.

## ಸೌಂದರ್ಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್‌ನ 3ನೇ ಶಾಖೆಯ ಉದ್ಘಾಟನೆ



**ಬೆಂಗಳೂರು :** ಸೌಂದರ್ಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಬೆಂಗಳೂರು ಸಹಕಾರಿಯ 3ನೇ ಶಾಖೆಯನ್ನು ಪೀಣ್ಯದ ರಾಜಗೋಪಾಲನಗರದ ಮುಖ್ಯರಸ್ತೆಯ ಗಣಪತಿ ನಗರದಲ್ಲಿ ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿಯವರು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ಗ್ರಾಹಕರಿಗೆ ಶೀಘ್ರವಾಗಿ ಸಾಲ ಸೌಲಭ್ಯ ಸಿಗುವುದು ಸಹಕಾರಿ ಸಂಸ್ಥೆಗಳಿಂದ ಮಾತ್ರ ಸಾಧ್ಯ. ಆದ್ದರಿಂದ, ಸಾಲ ದುರುಪಯೋಗ ಮಾಡಿಕೊಳ್ಳದೇ ಅವಕಾಶವನ್ನು ಬಳಸಿಕೊಂಡು ಬೆಳವಣಿಗೆಯ ಕಡೆ ಗಮನ ನೀಡಿದರೆ ಪ್ರಗತಿ ಹೊಂದಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಂಜಪ್ಪ ಹಾಗೂ ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ಕುಮಾರ್‌ರವರು ಉಪಸ್ಥಿತರಿದ್ದರು.

## ದಿ ಜುಮನಾಳ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿಯಿಂದ ಶುದ್ಧ ಕುಡಿಯುವ ನೀರಿನ ಘಟಕ

**ಜುಮನಾಳ :** ದಿನಾಂಕ : 12.03.2018ರಂದು ದಿ ಜುಮನಾಳ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಜುಮನಾಳ ಸಹಕಾರಿಯಿಂದ ಗ್ರಾಮದ ಕುಡಿಯುವ ನೀರಿನ ಅಭಾವವನ್ನು ತಗ್ಗಿಸಲು ಸಹಕಾರಿಯಿಂದ ಶುದ್ಧ ಕುಡಿಯುವ ನೀರಿನ ಘಟಕ "ಕೃಷ್ಣಾ ಜಲ"ವನ್ನು ಗ್ರಾಮಕ್ಕೆ ಸಮರ್ಪಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಜೆ.ಡಿ.ಎಸ್. ಧುರೀಣರಾದ ಶ್ರೀ ದೇವಾನಂದ ಎಫ್. ಚವ್ಹಾಣ ಮತ್ತು ಶ್ರೀ ಶ್ರೀ ಸಂಗನ ಬಸವ ಶಿವಯೋಗಿಗಳು ವಿರಕ್ತಮಠ ಯರನಾಳ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಯಮನಪ್ಪ ಯ. ಸಾತಿಹಾಳರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಶಿ. ಉಪ್ಪಿನ, ಜುಮನಾಳ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ರತ್ನಾಬಾಯಿ, ವಿಜಯಪುರದ ಸಿದ್ಧಸಿರಿ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಮುತ್ತುರಾಜ ಸಿ. ಜಂಗಮಶೆಟ್ಟಿ, ಜುಮನಾಳದ ಅದೃಶ್ಯಕಾಡ ಸಿದ್ಧೇಶ್ವರ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಭೀ. ಸಂಕಗೊಂಡ, ಜುಮನಾಳದ ಪ್ರಾ.ಕೃ.ಪ.ಸ. ಸಂಘದ ಅಧ್ಯಕ್ಷರಾದ ಶ್ರೀ ರಮೇಶ ಭೀ. ವಗ್ಗರ, ಹಿಟ್ಟಿನಹಳ್ಳಿಯ ಪ್ರಾ.ಕೃ.ಪ.ಸ.ಸಂಘದ ನಿರ್ದೇಶಕರಾದ ಶ್ರೀ ಶ್ರೀಕಾಂತ ಹ. ಚೌಧರಿ, ಜುಮನಾಳದ ಅಂಜುಮನ್ ಇಸ್ಲಾಮ್ ಕಮಿಟಿಯ ಅಧ್ಯಕ್ಷರಾದ ಶ್ರೀ ರಮಜಾನ್ ಎಮ್. ಮುಲ್ಲಾ, ವಿಜಯಪುರದ ಅಪ್ಪಾಜಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸವರಾಜ ಜಿ. ಸಾಲಿಮಠರವರು



ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಈ ಕಾರ್ಯಕ್ರಮದಲ್ಲಿ ಜುಮನಾಳ ಗ್ರಾಮದಲ್ಲಿ ಕೃಷಿಯಲ್ಲಿ ಸಾಧನೆ ಮಾಡಿದ, ಕೃಷಿಯನ್ನೇ ಬಂಡವಾಳ ಮಾಡಿಕೊಂಡ ರೈತರಿಗೆ "ಕೃಷಿ ಮಿತ್ರ" ಪ್ರಶಸ್ತಿ ನೀಡಿ ಗೌರವಿಸಲಾಯಿತು ಮತ್ತು ಗ್ರಾಮದ ಯುವ ಮಿತ್ರರು ತಮ್ಮ ತಮ್ಮ ಉದ್ಯೋಗದಲ್ಲಿ ಮುಂಚೂಣಿಯಲ್ಲಿರುವ ಮತ್ತು ಪ್ರಗತಿ ಹೊಂದಿರುವವರನ್ನು ಆಯ್ದು "ಉದ್ಯೋಗ ಮಿತ್ರ" ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರುಗಳು ಉಪಸ್ಥಿತರಿದ್ದರು.

## ಪಟ್ಟಣ ಸಹಕಾರಿ ಬ್ಯಾಂಕುಗಳಿಗಾಗಿ ತರಬೇತಿಗಳು

1. **ಹೂಡಿಕೆ, ಆಸ್ತಿ ಮತ್ತು ಜವಾಬ್ದಾರಿಗಳ ನಿರ್ವಹಣೆ ತರಬೇತಿ :** ದಿನಾಂಕ 23 ರಿಂದ 25 ಮೇ 2018ರವರೆಗೆ ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಹಾಗೂ ಕ್ರೆಡಿಟ್ ಸಹಕಾರ ಸಂಸ್ಥೆಗಳ ಫೆಡರೇಶನ್ ಮೂಲಕ ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ, ವ್ಯವಸ್ಥಾಪಕರು, ಹಿರಿಯ ವ್ಯವಸ್ಥಾಪಕರು, ಹಿರಿಯ ಅಧಿಕಾರಿಗಳಿಗಾಗಿ 3 ದಿನಗಳ ತರಬೇತಿ ಕಾರ್ಯಕ್ರಮವನ್ನು ವೈಂಕುಠ ಮೆಹ್ತಾ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್, ಪುಣೆ ಇಲ್ಲಿ ಏರ್ಪಡಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಭಾಗವಹಿಸುವ ಪ್ರತಿಯೊಬ್ಬರಿಗೆ ವಸತಿ ಸಹಿತಕ್ಕೆ ರೂ.7,900 + 18% ಜಿಎಸ್‌ಟಿ, ವಸತಿ ರಹಿತಕ್ಕೆ ರೂ.6,900 + 18% ಜಿಎಸ್‌ಟಿ ಶುಲ್ಕವಿರುತ್ತದೆ. ಇದಕ್ಕೆ ನೋಂದಾಯಿಸಲು ಕೊನೆಯ ದಿನಾಂಕ 05 ಮೇ 2018.
2. **ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಡಿಜಿಟಲ್ ಬ್ಯಾಂಕಿಂಗ್ – ಸವಾಲುಗಳು ಮತ್ತು ಅವಕಾಶಗಳು ಕುರಿತಂತೆ ವಿಚಾರಗೋಷ್ಠಿ :** ದಿನಾಂಕ 04 ಮೇ 2018ರಂದು ಹೋಟೆಲ್ ದಿ ಲಲಿತ್, ಸಹಾರ ಏರ್‌ಪೋರ್ಟ್ ರಸ್ತೆ, ಅಂದೇರಿ (ಈಸ್ಟ್), ಮುಂಬಯಿ ಇಲ್ಲಿ ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಹಾಗೂ ಕ್ರೆಡಿಟ್ ಸಹಕಾರ ಸಂಸ್ಥೆಗಳ ಫೆಡರೇಶನ್ ಮೂಲಕ ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ, ವ್ಯವಸ್ಥಾಪಕರು, ಹಿರಿಯ ವ್ಯವಸ್ಥಾಪಕರು, ಹಿರಿಯ ಅಧಿಕಾರಿಗಳಿಗಾಗಿ ವಿಚಾರಗೋಷ್ಠಿಯನ್ನು ಏರ್ಪಡಿಸಲಾಗಿದೆ. ಭಾಗವಹಿಸುವವರಿಗೆ ಶುಲ್ಕ ಇರುವುದಿಲ್ಲ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ – ಶ್ರೀ ಯೋಗೇಶ್ ಶರ್ಮಾ, ಡೈರೆಕ್ಟರ್, ಎನ್‌ಎಎಫ್‌ಸಿಯುಬಿ, ಮೊಬೈಲ್ ಸಂಖ್ಯೆ 09810805695, ಇ-ಮೇಲ್ ವಿಳಾಸ nafcubtrainings@gmail.com, nafcubtraining@rediffmail.com

# ಮತದಾನದ ಮಹತ್ವ ಅರಿತು, ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಿ : ಮತದಾನದ ಹಕ್ಕು ಚಲಾಯಿಸಿ



ನಮ್ಮ ಸಂವಿಧಾನವು ಜನ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಹಕ್ಕನ್ನು ನಮಗೆ ನೀಡಿದೆ. ಎಲ್ಲರೂ ಪ್ರಜಾಪ್ರಭುತ್ವದ ಭದ್ರ ಬುನಾದಿ ಹಾಗೂ ದೇಶದ ಸಮಗ್ರ ಅಭಿವೃದ್ಧಿಗಾಗಿ ಮತದಾನದ ಮಹತ್ವ ಅರಿತು, ಮತದಾನದ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ತಪ್ಪದೇ ಮತದಾನದ ಹಕ್ಕನ್ನು ಚಲಾಯಿಸುವುದರ ಮೂಲಕ ಆಡಳಿತ ಸುಧಾರಣೆಯಲ್ಲಿ ಮಹತ್ವದ ಪಾತ್ರ ವಹಿಸಬಹುದಾಗಿರುತ್ತದೆ.

ಪ್ರತಿ ಪ್ರಜೆಯೂ ತನ್ನನ್ನು ಆಳುವ ಪ್ರತಿನಿಧಿಯನ್ನು ಆಯ್ಕೆ ಮಾಡಲು ಇರುವ ವ್ಯವಸ್ಥೆಯೇ ಮತದಾನ. ಇದು ಪ್ರಜಾತಂತ್ರ ದೇಶದ ಪ್ರಜೆಗಳ ಪ್ರಮುಖ ಹಕ್ಕು. ಮತದಾನದ ಪ್ರಾಮುಖ್ಯತೆ ಮತ್ತು ಪ್ರಜೆಗಳ ಮೇಲಿರುವ ಹೊಣೆಯನ್ನರಿತು ತಮ್ಮ ಒಳಿತನ್ನು ಬಯಸುವ ಮತ್ತು ದೇಶಕ್ಕೆ ಒಳಿತನ್ನು ಮಾಡುವ ಜನಪರ ನಾಯಕರನ್ನು ತಾವೇ ಆಯ್ಕೆ ಮಾಡಿ ಕಳುಹಿಸಲು ಇರುವ ಸದಾವಕಾಶ. ಮುಂದಿನ ಮೇ ಮಾಹೆಯಲ್ಲಿ ನಡೆಯಲಿರುವ ನಮ್ಮ ರಾಜ್ಯದ ಚುನಾವಣೆಯಲ್ಲಿ ಯಾವುದೇ ಆಮಿಷಗಳಿಗೆ ಒಳಗಾಗದೇ ಗೌಪ್ಯತೆಯನ್ನು ಕಾಪಾಡಿಕೊಂಡು ಆತ್ಮಸಾಕ್ಷಿಗೆ ಅನುಗುಣವಾಗಿ ನಿಮ್ಮ ಅಮೂಲ್ಯವಾದ ಮತದಾನದ ಹಕ್ಕನ್ನು ತಪ್ಪದೇ ಚಲಾಯಿಸುವುದರ ಮೂಲಕ ಕಡ್ಡಾಯವಾಗಿ ಮತದಾನ ಮಾಡಬೇಕೆಂದು ಈ ಮೂಲಕ ವಿನಂತಿಸಿದೆ.

## ಕರ್ನಾಟಕ ವಿಧಾನಸಭೆ ಚುನಾವಣೆಯ ಮುಖ್ಯ ದಿನಾಂಕಗಳು



ಕರ್ನಾಟಕ ವಿಧಾನಸಭಾ ಚುನಾವಣೆಗೆ ದಿನಾಂಕ ಘೋಷಣೆ ಆಗಿದೆ. ಮುಖ್ಯ ಚುನಾವಣೆ ಆಯುಕ್ತ ಓಂ ಪ್ರಕಾಶ್ ರಾವತ್ ನವದೆಹಲಿಯಲ್ಲಿ ದಿನ ಘೋಷಣೆ ಮಾಡಿದ್ದು, ಮೇ 12ರಂದು ಒಂದೇ ಹಂತದಲ್ಲಿ 224 ಕ್ಷೇತ್ರಗಳಲ್ಲೂ ಚುನಾವಣೆ ನಡೆಯಲಿದೆ. ಮಾರ್ಚ್ 27 ನೀತಿ ಸಂಹಿತೆ ಜಾರಿ, ಏಪ್ರಿಲ್ 17 ಚುನಾವಣಾ ಅಧಿಸೂಚನೆ ಪ್ರಕಟ, ಏಪ್ರಿಲ್ 24 ನಾಮಪತ್ರ ಸಲ್ಲಿಸಲು ಕೊನೆಯ ದಿನ, ಏಪ್ರಿಲ್ 25 – ನಾಮಪತ್ರಗಳ ಪರಿಶೀಲನೆ, ಏಪ್ರಿಲ್ 27 ನಾಮಪತ್ರ ಹಿಂಪಡೆಯಲು ಕೊನೆಯ ದಿನ.

ಸಾರ್ವಜನಿಕರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇರುವುದನ್ನು ಚುನಾವಣಾ ಆಯೋಗದ ವೆಬ್ ಸೈಟ್‌ನಲ್ಲಿ ಖಚಿತಪಡಿಸಿಕೊಳ್ಳಬೇಕು. ತಪ್ಪುಗಳಿದ್ದಲ್ಲಿ ಏಪ್ರಿಲ್ 14 ರೊಳಗಾಗಿ ಸರಿಪಡಿಸಿಕೊಳ್ಳಲು ಅರ್ಜಿ ಸಲ್ಲಿಸಬಹುದು.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

### ಶ್ರೀ ಶುಭಧನಲಕ್ಷ್ಮೀ ಸೌಹಾರ್ದ ವಿವಿಧೋದ್ದೇಶ ಸಹಕಾರಿ ನಿ., ಹೊಸಪೇಟೆ



ಶ್ರೀ ಶೇಷಾಚಲ ಶೆಟ್ಟಿ ಕೊಣ್ಣೂರು
ಮಾನ್ಯ ಅಧ್ಯಕ್ಷರು



ಶ್ರೀ ಗೋವರ್ಧನ ಶೆಟ್ಟಿ ಚೆಲ್ಲೂರು
ಮಾನ್ಯ ಉಪಾಧ್ಯಕ್ಷರು

### ದಕ್ಷಿಣ ಕನ್ನಡ ಮಿತ್ರವೃಂದ ಪತ್ತಿನ ಸೌಹಾರ್ದ ಸಹಕಾರಿ ನಿ., ತುಮಕೂರು



ಶ್ರೀ ಟಿ.ವಾಸುದೇವ ತವಳ
ಮಾನ್ಯ ಅಧ್ಯಕ್ಷರು



ಶ್ರೀ ಶಿವರಾಮ ಶೆಟ್ಟಿ ಕೆ.
ಮಾನ್ಯ ಉಪಾಧ್ಯಕ್ಷರು

### ಮಾರ್ಗದರ್ಶಿ ಸೌಹಾರ್ದ ಸಹಕಾರಿ ನಿ., ವಿಜಯಪುರ



ಶ್ರೀ ಶರಣಕುಮಾರ ಶಿವಪ್ಪ ಮಲ್ಲಪ್ಪಗೋಳ
ಮಾನ್ಯ ಅಧ್ಯಕ್ಷರು



ಶ್ರೀ ಮಲ್ಲಿಕಾರ್ಜುನ ಶಿವಪ್ಪ ಹಳಿಮನಿ, ವಕೀಲರು
ಮಾನ್ಯ ಉಪಾಧ್ಯಕ್ಷರು



ಜಂಗಮ ಸೌಹಾರ್ದ ಸಹಕಾರಿ ನಿ., ದಾವಣಗೆರೆ ಸಹಕಾರಿಯ ಅಧ್ಯಕ್ಷರಾಗಿ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಪ್ರೋ. ಎಸ್.ಎಂ.ವೀರಯ್ಯ ನವರ ಅವಿರೋಧ ಆಯ್ಕೆಯಾಗಿದ್ದಾರೆ.

### ಶ್ರೀ ಕಾರ್ತಿಕೇಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಸಂಡೂರು



ಶ್ರೀ ಎನ್.ಉಜ್ಜಿನಪ್ಪ, ವಕೀಲರು
ಮಾನ್ಯ ಅಧ್ಯಕ್ಷರು



ಶ್ರೀ ಅಮ್ಮನಕೇರಿ ಶಿವಪ್ಪ
ಮಾನ್ಯ ಉಪಾಧ್ಯಕ್ಷರು



# "ತಿಂದ ನಿನ್ನನ್ನ ಋಣ ತೀರುತಲೆ ಪಯಣ"

▶▶ ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

"ಜಾತಸ್ಯ ಮರಣಂ ಧೃವಂ" ಎನ್ನುವ ಸರ್ವವ್ಯಾಪಕ ಲೋಕೋಕ್ತಿಯು ಹುಟ್ಟನ್ನು ಪಡೆದ ಪ್ರತಿ ಜೀವಿಗೂ, ವಸ್ತುವಿಗೂ ನಾಶವಿದ್ದೇ ಇದೆಯೆಂಬ ಕಠೋರ ಸತ್ಯವನ್ನು ಸಾರುತ್ತದೆ. ಇಂತಹ ಸಾವು ಅಥವಾ ನಾಶ ವಿಧಿಯಿಂದ ಪೂರ್ವ ನಿಶ್ಚಿತವಾಗಿರುತ್ತದೆಯೇ ಹೊರತು ತನ್‌ತಾನೇ ವ್ಯಕ್ತಿ ಬಯಸಿದಾಗ ನಿಗದಿಯಾದ ಕ್ಷಣಕ್ಕಿಂತ ಮೊದಲಾಗಲೀ, ಬಹುಕಾಲದ ನಂತರವಾಗಲೀ ಮರಣ ಹೊಂದುವ ಅವಕಾಶವಿರುವುದಿಲ್ಲ ಎಂಬುದು ಸತ್ಯಾಂಶ. ಈ ಅಂಶವನ್ನೇ ಹೋಲುವ ಘಟನೆ ನನ್ನ ಜೀವನದಲ್ಲಿ ನಡೆದಿದ್ದು, ಈ ಕೆಳಗಿನಂತಿದೆ :

ಇತ್ತೀಚಿಗೆ ಒಂದು ದಿನ ಕಛೇರಿಯಿಂದ ಬೇಗ ಬಂದ ನಾನು ಸಾಯಂಕಾಲದ ಕಾಫಿಯನ್ನು ಮುಗಿಸಿ, ಐದು ನಿಮಿಷ ವಾಕಿಂಗ್ ಹೋಗಿ ವಾಪಾಸ್ಸು ಬರುತ್ತಿದ್ದಾಗ, ಅಲ್ಲೇ ಇದ್ದ ತೆಂಗಿನ ಮರದಿಂದ ಒಂದು ತೆಂಗಿನಕಾಯಿ ದೊಪ್ಪನೆ ಬಿದ್ದಿದ್ದು ಎಷ್ಟು ಸಮೀಪಕ್ಕೆಂದರೆ ಇನ್ನೇನು ಸ್ವಲ್ಪದರಲ್ಲಿ ನನ್ನ ತಲೆಯ ಮೇಲೆಯೇ ಬೀಳಬೇಕಾದದ್ದು ತಪ್ಪಿ ಕಿರು ಅಂತರದಲ್ಲಿ ಬಿದ್ದು ನನ್ನನ್ನು ಪ್ರಾಣಾಪಾಯದಿಂದ ಪಾರು ಮಾಡಿತ್ತು. ಇನ್ನೂ ಸ್ವಲ್ಪ ಕಾಲದ ಜೀವಿತಾವಧಿಯಿರುವ ಕಾರಣ ಪಾರಾಗಿದ್ದೆ ಎನಿಸುತ್ತದೆ.

ನನ್ನ ಸಮೀಪದ ಸಂಬಂಧಿಯೊಬ್ಬರು ಈಗ್ಗೆ 3 ವರ್ಷಗಳ ಹಿಂದೆ ತೀವ್ರ ಅಸ್ವಸ್ಥರಾಗಿದ್ದು, ಇನ್ನೇನು ಉಳಿಯುವುದಿಲ್ಲವೆಂಬ ಸುದ್ಧಿಯನ್ನು ಅದೇ ಊರಿನ ನನ್ನ ಪರಿಚಿತರ ಮೂಲಕ ಸುದ್ಧಿ ಪಡೆದಿದ್ದೆ. ಈ ಮಧ್ಯದ ಸುದೀರ್ಘ ಅವಧಿಯ ನಂತರ ನಾನು ಕಡೂರಿಗೆ ರೈಲಿನಲ್ಲಿ ಪಯಣಿಸುವ ಬಗ್ಗೆ ದೂರವಾಣಿ ಮೂಲಕ ಮಾಹಿತಿ ನೀಡಿ ತೀವ್ರ ಅಸ್ವಸ್ಥರಾಗಿದ್ದ ವ್ಯಕ್ತಿಗೆ ಮಾತನಾಡಿದಾಗ, ಅವರ ಬಾಯಿಂದ ಬಂದ ಮಾತೆಂದರೆ, "ನೀವು ರೈಲ್ವೇ ಸ್ಟೇಷನ್‌ಗೆ ಬನ್ನಿ. ನಾನು ಬೈಕಿನಲ್ಲಿ ಬಂದು ನಿಮ್ಮನ್ನು ಸ್ಟೇಷನ್‌ನಿಂದ ಮನೆಗೆ ಬೈಕಿನಲ್ಲಿ ಕೊಂಡೊಯ್ಯುತ್ತೇನೆ" ಎಂದಾಗ ನನಗೆ ಸಖೇದಾಶ್ಚರ್ಯವಾಯಿತು.

ನಿಜಕ್ಕೂ ಕಡೂರಿಗೆ ಹೋದಾಗ ಅದೇ ವ್ಯಕ್ತಿ ಬೈಕಿನಲ್ಲಿ ಬಂದು ನನ್ನನ್ನು ಅವರ ಮನೆಗೆ ಕೊಂಡೊಯ್ದಾಗ ಅವರ ದೇಹಸ್ಥಿತಿ ಮೊದಲಿನಂತೆಯೇ ಸುಧಾರಿತಗೊಂಡು ದೈನಂದಿನ ಎಲ್ಲಾ ಚಟುವಟಿಕೆಗಳನ್ನು ಉತ್ತಮವಾಗಿ ನಿರ್ವಹಿಸುತ್ತಿದ್ದರು. ತೆಂಗಿನಕಾಯಿ ಬೀಳುವಿಕೆಯಿಂದ ಪಾರಾದ ನನ್ನ ಹಾಗೂ ತೀವ್ರ ಅಸ್ವಸ್ಥರಾಗಿದ್ದ ನನ್ನ ಬಂಧುಗಳ ಆರೋಗ್ಯ ಚೇತರಿಕೆಯ ಅಂಶವು ಈ ಕೆಳಗಿನ ಪದ್ಯದ ನೆನಪನ್ನು ಕೊಟ್ಟಿತು.

**"ಒಂದಗಳು ಹೆಚ್ಚಿರದು ಒಂದಗಳು ಕೊರೆಯಿರದು**
**ತಿಂದು ನಿನ್ನನ್ನ ಋಣ ತೀರುತಲೆ ಪಯಣ**
**ಹಿಂದಾಗದೊಂದು ಚಣ ಮುಂದಕುಂ ಕಾದಿರದು**
**ಸಂದ ಲೆಕ್ಕವದೆಲ್ಲ ಮಂಕುತಿಮ್ಮ"**

ಶ್ರೀ ಮದ್ಭಾಗವತವನ್ನು ಅಭ್ಯಸಿಸಿದ ನನಗೆ ಒಂದು ಘಟನೆ ನಮ್ಮೆಲ್ಲರ ಕಣ್ಮನಗಳನ್ನು ತೆರೆಸುವಂತಾದ್ದು ಗಮನಕ್ಕೆ ಬಂತು. ಪಾಂಡುವಂಶದ ರಾಜ ಪರೀಕ್ಷಿತ ಮಹಾರಾಜನು ಸದ್ಭಕ್ತನೂ, ಧರ್ಮಾತ್ಮನೂ, ಪುಣ್ಯಶೀಲನೂ ಆಗಿದ್ದು, ಆಕಸ್ಮಿಕವಾಗಿ ಘಟಿಸಿದ ಒಂದು ತಪ್ಪಿನಿಂದಾಗಿ ಶಮಿಕ ಮುನಿಯ ಮಗ ಭೃಂಗಯಿಂದ ಶಾಪಕ್ಕೆ ತುತ್ತಾಗಿ ಪಕ್ಷಿ ಸರ್ಪವೊಂದರ ಕಡಿತದಿಂದಾಗಿ ಏಳು ದಿವಸಗಳೊಳಗಾಗಿ ಮರಣ ಸಂಭವಿಸುತ್ತದೆಂಬ ಪೂರ್ವಸೂಚನೆ ಪಡೆಯುವಷ್ಟು ಭಾಗ್ಯಶಾಲಿಯಾಗುತ್ತಾನೆ.

ಅವನು ಬ್ರಾಹ್ಮಣನ ಶಾಪವನ್ನು ಅವಿವೇಕತನದ್ದಾದರೂ, ಅನುಗ್ರಹವೆಂದೇ ಭಾವಿಸಿಕೊಂಡನು ಹಾಗೂ ಮರಣವನ್ನು ನಗುನಗುತ್ತಾ ಯೋಗ್ಯ ರೀತಿಯಲ್ಲಿ ಎದುರಿಸಲು ಸ್ವಯಂ ಸಿದ್ಧತೆ ಮಾಡಿಕೊಂಡನು. ಸಾವಿನ ಆಗಮನದ ಸುದ್ಧಿ ದೊರೆತೊಡನೆ ಅತಿ ಸಂತೋಷದಿಂದ ಮುಂದಿನ ತನ್ನ ಬದುಕನ್ನು ಗಂಗಾನದಿಯ ತಟದಲ್ಲಿ ಶುಕಮುನಿಗಳಿಂದ ಭಗವದ್ಗೀತೆ ಹಾಗೂ ಭಾಗವತಾಧ್ಯಾಯನಗಳಿಗೆ ತನ್ನ ಜೀವನದ ಅತ್ಯಲ್ಪ ಶೇಷಾವಧಿಯನ್ನು ಮೀಸಲಿರಿಸುತ್ತಾನೆ. ಇಂದಿನ ನಾವುಗಳಾಗಿದ್ದರೆ ಸಾವಿನ ದಿನಾಂಕ ಪ್ರಕಟಗೊಳ್ಳುತ್ತಿದ್ದಂತೆ ಹೊರ ದೇಶದ ಪ್ರಸಿದ್ಧ ಆಸ್ಪತ್ರೆಗಳಿಗೆ ಹೋಗಿ ಜೀವ ಉಳಿಸಿಕೊಳ್ಳಲು ಚಿಕಿತ್ಸಾ ಕ್ರಮಕ್ಕೆ ಶತಾಯಗತಾಯ ಪ್ರಯತ್ನಿಸುತ್ತಿದ್ದೆವು.

ತತ್ಕಾರಣ ಜೀವಿತದ ಕ್ಷಣಬಂಗುರತೆಯನ್ನು ಅರಿತು ಭಗವದ್ಧಾಮಕ್ಕೆ ತೆರಳುವ ಪೂರ್ವ ನಮ್ಮ ಬದುಕಿನ ಗುಣಮಟ್ಟವನ್ನು ಸುಧಾರಿಸಿಕೊಳ್ಳಬೇಕಾದ್ದು ನಮ್ಮೆಲ್ಲರ ಕರ್ತವ್ಯ. "ನಿನಗಾಗಿ ಬದುಕಿದ್ದಲ್ಲಿ ಅಂತಹ ಬದುಕು ನಿನ್ನೊಂದಿಗೆ ಅಂತ್ಯ ಹಾಗೂ ಇತರರಿಗಾಗಿ ಬದುಕಿದಲ್ಲಿ ಕಾಲಕಾಲಕ್ಕೂ ನಿನ್ನ ಹೆಸರು ನಿಲ್ಲುತ್ತದೆ" ಎಂಬುದನ್ನರಿತು ಸರ್ವಾತ್ಮಗಳ ಸೇವಾ ಕ್ಷೇತ್ರವಾದ "ಸಹಕಾರ"ವನ್ನು ನಿನ್ನ ಜೀವಿತದಲ್ಲಿ ತಂದುಕೋ ಹಾಗೂ ಸ್ವಾರ್ಥಯುತ ಬದುಕನ್ನು ಬಿಟ್ಟು ಸರ್ವರಿಗಾಗಿ ಬದುಕಲು ಕಲಿ ಎಂಬುದೇ ಈ ಪದ್ಯದ ಸಾರಾಂಶ.

## ಅಭಿನಂದನೆ



ಶ್ರೀ ಗಂಗಣ್ಣ ಎಸ್.
ಅಧ್ಯಕ್ಷರು



ಶ್ರೀ ಚಂದ್ರಪ್ಪ ಎಸ್.
ಉಪಾಧ್ಯಕ್ಷರು

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನೂತನ ಅಧ್ಯಕ್ಷರಾಗಿ ಶ್ರೀ ಎಸ್.ಗಂಗಣ್ಣ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಎಸ್. ಚಂದ್ರಣ್ಣರವರು ಆಯ್ಕೆಯಾಗಿದ್ದು, ಶ್ರೀಯುತರುಗಳಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಲಿಯವರು ಶುಭ ಕೋರಿದ್ದಾರೆ.

# ಐ.ಸಿ.ಎ. ನೀಲಿನಕ್ಷೆ : ಸುಸ್ಥಿರ ಅಭಿವೃದ್ಧಿ - ಸಹಕಾರ ಸಂಸ್ಥೆಗಳು

# I.C.A. Blue Print : Sustainable Development and Cooperatives



▸▸ ಪ್ರೊ. ಯಶವಂತ ಡೊಂಗ್ರೆ

ಸುಸ್ಥಿರ ಅಭಿವೃದ್ಧಿ (Sustainable Development) ಇಂದು ಎಲ್ಲರೂ ಅಪೇಕ್ಷಿಸುತ್ತಿರುವ ಅಭಿವೃದ್ಧಿ ಮಾದರಿ. ಕೆಲವು ಮಾದರಿಗಳಿಂದ ನಿರೀಕ್ಷಿತ ಅಭಿವೃದ್ಧಿ ಸಾಧ್ಯವಾಗಿಲ್ಲವೆಂಬ ಸಮಸ್ಯೆ ಇದ್ದರೆ ಇನ್ನೂ ಕೆಲವು ಮಾದರಿಗಳ ಅಭಿವೃದ್ಧಿಯ ಹೆಸರಿನಲ್ಲಿ ಎಲ್ಲಾ ರೀತಿಯ ಸಂಪನ್ಮೂಲಗಳನ್ನೂ ಅವೈಜ್ಞಾನಿಕವಾಗಿ ಬಳಸುತ್ತವೆ. ಇದರಿಂದ ಆರ್ಥಿಕ, ಸಾಮಾಜಿಕ, ಪರಿಸರ ಅಸಮತೋಲನಗಳು ಹೆಚ್ಚುತ್ತಿವೆ. ಆದುದರಿಂದ ಸಂಪನ್ಮೂಲಗಳ ಸಮರ್ಪಕ ಬಳಕೆ ಮಾಡಬಲ್ಲ (Optimal Utilization) ಅಥವಾ ಎಲ್ಲಾ ರೀತಿಯ ಸಮತೋಲನೆಗೆ ಆದ್ಯತೆ ನೀಡುವ ಮತ್ತು ಈ ದಿಸೆಯಲ್ಲಿ ನಾಯಕತ್ವ ವಹಿಸಬಲ್ಲ ಮಾದರಿಯೊಂದರ ಅಗತ್ಯವಿದೆ. ಸಹಕಾರ ಕ್ಷೇತ್ರಕ್ಕೆ ಈ ಸಾಮರ್ಥ್ಯವಿದೆ. ಹಾಗೆಯೇ ಜನತೆ ಸರಕಾರ ಮತ್ತು ಖಾಸಗಿ ಮಾದರಿಗಳೆರಡರ ಮೇಲೂ ವಿಶ್ವಾಸ ಕಳೆದುಕೊಳ್ಳುತ್ತಿರುವುದರಿಂದ, ಜನತೆಗೆ ಆಪ್ತವಾಗಬಲ್ಲ, ಜನರು ವಿಶ್ವಾಸವಿರಿಸಬಲ್ಲ ಮಾದರಿಯೊಂದರ ಅಗತ್ಯವಿದೆ. ಸಹಕಾರ ಕ್ಷೇತ್ರವು ಈ ಮಾದರಿಯಾಗಬೇಕಾದರೆ, ಇಡೀ ಕ್ಷೇತ್ರ ತನ್ನ ಬೆಳವಣಿಗೆಯ ವೇಗವನ್ನು ವೃದ್ಧಿಸಿಕೊಳ್ಳಬೇಕಿದೆ. ಒಟ್ಟಾರೆ ಜಾಗತಿಕ, ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಗಳು ಪರಿಸರವೂ ಸೇರಿದಂತೆ ಯಾವುದೇ ಅಸಮತೋಲನವನ್ನು ಸೃಷ್ಟಿಸದಿರುವಂತೆ ಮುಂದುವರೆಯಬೇಕಾದರೆ ಉದ್ದಿಮೆಗಳು ಜನರು ಸಹಭಾಗಿತ್ವದಲ್ಲಿರಬೇಕು. ಉದ್ಧಿಮೆಗಳಿಂದ ಹಣಕಾಸಿನ ಲಾಭ ಗಳಿಸಬೇಕೆನ್ನುವುದಕ್ಕಿಂತಲೂ, ಅವುಗಳು ಜನರ ಅಗತ್ಯಗಳ ಅನುಸಾರ ಉತ್ಪಾದನೆ ಮತ್ತು ವಿತರಣೆಯನ್ನು ನಡೆಸಬೇಕು ಎನ್ನುವ ಆಶಯವಿರಬೇಕು. ಇವೆಲ್ಲ ಇರುವುದು ಸಹಕಾರ ಮಾದರಿಯಲ್ಲಿ ಮಾತ್ರ. ಆದರೆ ಜಗತ್ತಿನಾದ್ಯಂತ ಸಹಕಾರಿ ಸಂಘಟನೆಗಳು ಒಂದೇ ಸಮನಾಗಿ ಬೆಳೆದಿಲ್ಲ. ಎಷ್ಟೋ ಕಡೆಗಳಲ್ಲಿ ಜನರು ಸಹಕಾರಿ ಉದ್ಧಿಮೆಗಳ ಬಗ್ಗೆಯೂ ಭ್ರಮನಿರಸನ ಹೊಂದಿದ್ದಾರೆ. ಆದುದರಿಂದ ಸಹಕಾರಿ ಉದ್ದಿಮೆಗಳು ಶಕ್ತಿಯುತವಾಗಿ ಬೆಳೆಯುವಂತೆ ಮಾಡುವ ಉದ್ದೇಶವನ್ನು ಹೊಂದಿರುವ ಈ ನೀಲಿನಕ್ಷೆ, ಈ ಉದ್ದೇಶ ಸಾಧನೆಗಾಗಿ ಸಹಕಾರ ಕ್ಷೇತ್ರ ಏನು ಮಾಡಬೇಕೆನ್ನುವುದಕ್ಕೆ ಕಾರ್ಯವಿಧಾನವೊಂದನ್ನು ನೀಡಿದೆ.

**ಕಾರ್ಯನೀತಿ :** ಐಸಿಎ ನೀಲಿನಕ್ಷೆ ಸಹಕಾರಿ ಉದ್ಧಿಮೆಗಳನ್ನು ಅವುಗಳ ಮೂಲಭೂತ ಅಗತ್ಯಗಳ ಆಧಾರದಲ್ಲಿ ಗಮನಿಸಿದೆ. ಈ ಅಗತ್ಯಗಳು ಒಂದೆಡೆಯಿಂದ ಸಂಪನ್ಮೂಲಗಳನ್ನೂ ಇನ್ನೊಂದೆಡೆಯಿಂದ ಸಂಸ್ಥೆಗಳ ಆಡಳಿತದ ರೂಪುರೇಷೆಗಳನ್ನೂ ಒಳಗೊಂಡಿದೆ. ನೀಲಿನಕ್ಷೆಯು ನೀಡಿರುವ ಕಾರ್ಯನೀತಿಗಳನ್ನು ಈ ಕೆಳಗಿನಂತೆ ವಿವರಿಸಿದೆ.

1. ವ್ಯವಹಾರ ಮತ್ತು ನಿರ್ವಹಣೆಯಲ್ಲಿನ ಸದಸ್ಯರ ಭಾಗವಹಿಸುವಿಕೆಯನ್ನು ಹೊಸ ಎತ್ತರಕ್ಕೆ ಏರಿಸಬೇಕು.
2. ಸಹಕಾರಿ ಉದ್ದಿಮೆಗಳನ್ನು ಸುಸ್ಥಿರತೆಯ ಚಿಹ್ನೆಗಳಾಗಿ ಪ್ರತಿಷ್ಠಾಪಿಸಬೇಕು.
3. ಸಹಕಾರಿ ಸಂಹಿತೆಯನ್ನು ಬೆಳೆಸಿ ಸಹಕಾರಿ ಅನನ್ಯತೆಯನ್ನು ಗಳಿಸಿ ಬಲಗೊಳಿಸಬೇಕು.
4. ಸಹಕಾರಿ ಉದ್ದಿಮೆಗಳ ಬೆಳವಣಿಗೆಗೆ ಸಹಕಾರಿಯಾಗುವಂತೆ ಕಾನೂನುಗಳ ರಚನೆ/ ತಿದ್ದುಪಡಿ ಆಗಬೇಕು.
5. ಸದಸ್ಯರ ನಿಯಂತ್ರಣಕ್ಕೆ ಧಕ್ಕೆ ಬಾರದಂತೆ, ಉತ್ತಮ ಮತ್ತು ನಂಬಲರ್ಹ ಮೂಲಗಳಿಂದ ಬಂಡವಾಳ ಸಂಗ್ರಹಿಸಬೇಕು.

ಸಹಕಾರಿ ಸಂಸ್ಥೆಗಳ ಕಾರ್ಯನೀತಿಯ ಕೇಂದ್ರ ಬಿಂದು ಸಹಕಾರಿ ಅನನ್ಯತೆ (Co-operative identity). ಸಹಕಾರಿ ಸಂಸ್ಥೆಗಳು/ ಉದ್ದಿಮೆಗಳು ತಮ್ಮ ಅನನ್ಯತೆಯನ್ನು ಉಳಿಸಿಕೊಳ್ಳುವುದು, ಗಟ್ಟಿಗೊಳಿಸುವುದು ಬಹು ಮುಖ್ಯ. ತನ್ನ ಅನನ್ಯತೆಯನ್ನು ಪಣಕ್ಕಿಟ್ಟು ಮಾರುಕಟ್ಟೆಯಲ್ಲಿ ಉಳಿಯಲು ಪ್ರಯತ್ನಿಸುವುದು ಸಹಕಾರಿ ಸಂಸ್ಥೆಗಳ ಮಾದರಿಯಲ್ಲ. ಸಹಕಾರಿ ಉದ್ದಿಮೆಗಳು ಪರ್ಯಾಯ ಮಾರ್ಗವಾಗುವುದು, ಬದಲಿ ಆಯ್ಕೆಯಾಗುವುದು ತಮ್ಮ ಈ ಅನನ್ಯತೆಯಿಂದಲೇ. ಆದುದರಿಂದ ಸಹಕಾರಿ ಆಂದೋಲನವು ಜಗತ್ತಿಗೆ ಮಾದರಿಯಾಗಿ ಬೆಳೆಯಬೇಕಾದರೆ ತನ್ನ ಅನನ್ಯತೆಯನ್ನು ಉಳಿಸಿಕೊಂಡೇ ವ್ಯವಹಾರ ನಡೆಸಬೇಕು.

ಈ ಅನನ್ಯತೆಯ ಮೂಲ ಸದಸ್ಯರ ಭಾಗವಹಿಸುವಿಕೆ, ಸದಸ್ಯರಿಗೆ ಸಂಸ್ಥೆಯ ಒಡೆತನವನ್ನು ನೀಡುವುದರ ಜೊತೆಗೆ, ಅವರಿಗೆ ಭಾಗವಹಿಸುವಿಕೆಯ ಅವಕಾಶಗಳನ್ನು ನೀಡುವುದರಿಂದಲೇ ಸಹಕಾರಿ ಉದ್ದಿಮೆಗಳು ಇತರ ಉದ್ದಿಮೆಗಳಿಗಿಂತ ಭಿನ್ನವಾಗುತ್ತವೆ. ಸದಸ್ಯರು ಸಂಸ್ಥೆಗೆ ಸಹಾಯ ಮಾಡುತ್ತಲೇ, ತಾವೂ ಬೆಳೆಯುವ ಅವಕಾಶ ಹೊಂದಿರುತ್ತಾರೆ. ಸದಸ್ಯರ ಭಾಗವಹಿಸುವಿಕೆ ಮತ್ತು ಬಳಕೆದಾರರೆ ನೇರವಾಗಿ ತಮ್ಮ ಅಗತ್ಯಗಳನ್ನು ಸಾಂಸ್ಥಿಕ ನೆಲೆಯಲ್ಲಿ ಪಡೆದುಕೊಳ್ಳುವ ಅವಕಾಶ ಸಹಕಾರಿ ಸಂಘಟನೆಗಳಲ್ಲಿ ಮಾತ್ರ ಕಾಣವಂತಹುದು. ಆದುದರಿಂದ ಸಹಕಾರಿ ಉದ್ದಿಮೆ ಸದಸ್ಯರ ಭಾಗವಹಿಸುವಿಕೆಗೆ ಹೊಸ ಚೈತನ್ಯ ನೀಡುವತ್ತ ಕಾರ್ಯನಿರತವಾಗಬೇಕು.

ಸದಸ್ಯರ ಭಾಗವಹಿಸುವಿಕೆಯಲ್ಲಿ ಗುಣಾತ್ಮಕ ಬದಲಾವಣೆ ತರುವ ನಿಟ್ಟಿನಲ್ಲಿ ಯುವ ಸದಸ್ಯರನ್ನು ಆಕರ್ಷಿಸುವತ್ತ ಗಮನಹರಿಸಬೇಕು ಮತ್ತು ಮಹಿಳಾ ಸದಸ್ಯರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಸದಸ್ಯರು ಸಹಕಾರಿ ಸಂಸ್ಥೆಯನ್ನು ತಮ್ಮ ಜೀವನದ ಅವಿಭಾಜ್ಯ ಅಂಗವೆಂಬಂತೆ ನೋಡುವಂತಾಗಬೇಕು.

ಕ್ರಿಯಾತ್ಮಕ ಮತ್ತು ಗುಣಾತ್ಮಕ ಸದಸ್ಯರ ಭಾಗವಹಿಸುವಿಕೆಯು ಸಹಕಾರಿ ಉದ್ದಿಮೆಗಳು ಸುಸ್ಥಿರ ಬೆಳವಣಿಗೆಗೆ ಪೂರಕವಾಗುತ್ತದೆ. ಇಲ್ಲಿ ಸುಸ್ಥಿರತೆಯ ಪರಿಕಲ್ಪನೆಯು ಎರಡು ಮುಖಗಳನ್ನು ಹೊಂದಿದೆ. ಮೊದಲನೆಯದು ನಮ್ಮ ಸಮಾಜ, ಆರ್ಥಿಕತೆ ಮತ್ತು ಪರಿಸರದ ಸುಸ್ಥಿರತೆಯಾದರೆ ಇನ್ನೊಂದು ಸಹಕಾರಿ ಚಳುವಳಿಯ ಸುಸ್ಥಿರತೆ. ಸದಸ್ಯ ಸಮುದಾಯವು ಜವಾಬ್ದಾರಿಯುತವಾಗಿ ತಮ್ಮ ಅಗತ್ಯಗಳನುಸಾರ ಸಹಕಾರಿ ಉದ್ದಿಮೆಯು ವ್ಯವಹರಿಸಿದರೆ, ಸುಸ್ಥಿರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ತಾನಾಗಿಯೇ ಸಾಧ್ಯವಾಗುತ್ತದೆ. ಬೇಡಿಕೆಗಳನ್ನು ಆಧರಿಸಿ ಉತ್ಪಾದನಾ ಮತ್ತು ಸೇವಾ ಚಟುವಟಿಕೆಗಳನ್ನು ನಡೆಸುವುದರಿಂದ ಪರಿಸರದ ಮೇಲಿನ ಒತ್ತಡವೂ ಕಡಿಮೆಯಾಗುತ್ತದೆ.

ಇವೆಲ್ಲ ಒಂದೆಡೆಯಿಂದ ಸದಸ್ಯರ ಅಗತ್ಯಗಳನ್ನು ಪೂರೈಸುತ್ತಾ ಸಹಕಾರಿ ಸಂಸ್ಥೆಯು ತಮ್ಮ ಪ್ರಮುಖ ಅಗತ್ಯಗಳಲ್ಲೊಂದು ಎಂಬ ಭಾವನೆಯನ್ನು ಸದಸ್ಯ

ಸಮುದಾಯದಲ್ಲಿ ಮೂಡಿಸುತ್ತದೆ. ಹಾಗೆಯೇ, ಸಮುದಾಯದ ಒಳಗಿನ ಸಂಬಂಧ ಗಟ್ಟಿಯಾಗುತ್ತದೆ. ಇವು ಸಹಕಾರಿ ಚಳುವಳಿಯ ಅಡಿಪಾಯವನ್ನು ಬಲಗೊಳಿಸುವುದರಿಂದಾಗಿ, ಸಹಕಾರಿ ಉದ್ದಿಮೆಗಳು ಸುಸ್ಥಿರವಾಗುತ್ತವೆ. ಒಟ್ಟಾರೆಯಾಗಿ ನೋಡಿದರೆ ಉತ್ತಮ ಸಹಕಾರಿ ಉದ್ದಿಮೆಗಳು ಸದಸ್ಯ ಸಮುದಾಯದ ಸಾಮಾಜಿಕ ಬಂಡವಾಳವನ್ನು ವೃದ್ಧಿಸುತ್ತವೆ ಮತ್ತು ಶಕ್ತಿಯುತವಾಗಿಸುತ್ತವೆ, ಯಾವುದೇ ಸಂಪನ್ಮೂಲದ ಹೂಡಿಕೆ ಫಲ ನೀಡಬೇಕಾದರೆ, ಉತ್ತಮ ಸಾಮಾಜಿಕ ಬಂಡವಾಳದ ಪಾತ್ರ ಬಹುಮುಖ್ಯವೆನ್ನುವುದನ್ನು ಅರ್ಥಶಾಸ್ತ್ರಜ್ಞರೆಲ್ಲ ಒಪ್ಪುತ್ತಾರೆ. ಅಂತೆಯೇ ಸುಸ್ಥಿರ ಅಭಿವೃದ್ಧಿ ಮತ್ತು ಸುಸ್ಥಿರ ಸಹಕಾರಿ ಉದ್ದಿಮೆಗಳೆರಡೂ ಸಾಧ್ಯವಾಗುತ್ತದೆ.

ಸಹಕಾರಿ ಉದ್ದಿಮೆಗಳ ಒಂದು ಪ್ರಮುಖ ಅಗತ್ಯ ಹಣಕಾಸಿನ ಬಂಡವಾಳ. ಯಾವುದೇ ಸಹಕಾರಿ ತನಗೆ ಬೇಕಾದ ಬಂಡವಾಳವನ್ನೆಲ್ಲಾ ತನ್ನ ಸದಸ್ಯರು ಹೂಡುವ ಶೇರು ಬಂಡವಾಳದ ಮೂಲಕವೇ ಸಂಗ್ರಹಿಸುವುದು ಸಾಧ್ಯವಾಗುವುದಾದರೆ ಅದು ಅತ್ಯಂತ ಉತ್ತಮ. ಆದರೆ ಹೆಚ್ಚಿನ ಸಹಕಾರಿ ಉದ್ದಿಮೆಗಳಿಗೆ ಇದು ಸಾಧ್ಯವಾಗಲಾರದು. ಉದ್ದಿಮೆ ಬೆಳದಂತೆಲ್ಲಾ, ಹೊಸ ತಂತ್ರಜ್ಞಾನ ಇತ್ಯಾದಿಗಳು ಅಗತ್ಯವಾದಂತೆಲ್ಲ. ಬಂಡವಾಳದ ಅಗತ್ಯವೂ ಅಧಿಕವಾಗುತ್ತದೆ.

ಈ ಬಂಡವಾಳವನ್ನು ಯಾವ ಮೂಲಗಳಿಂದ ಸಂಗ್ರಹಿಸುತ್ತೇವೆನ್ನುವುದು ಮತ್ತು ಈ ಬಂಡವಾಳ ಸಂಗ್ರಹಣೆಗೆ ಯಾವ ಮಾರ್ಗ ಅನುಸರಿಸುತ್ತೇವೆನ್ನುವುದು, ನಮ್ಮ ಸಹಕಾರಿ ಸಂಸ್ಥೆಯ ಭವಿಷ್ಯವನ್ನು ನಿರ್ಧರಿಸುತ್ತದೆ. ಹೊರ ಮೂಲಗಳಿಂದ ಬಂಡವಾಳ ಸಂಗ್ರಹಿಸುವಾಗ ಪ್ರಮುಖವಾಗಿ ಗಮನಿಸಬೇಕಿರುವುದು, ಅದು ಸದಸ್ಯರ ನಿಯಂತ್ರಣದ ಮೇಲೆ ಯಾವುದೇ ನಕಾರಾತ್ಮಕ ಪ್ರಭಾವ ಬೀರದಂತಿರುವುದು. ಬಂಡವಾಳದ ವೆಚ್ಚ ಮತ್ತು ಬಂಡವಾಳದ ರೂಪದಲ್ಲಿ ಬರುವ ಹಣ ಯಾವ ಮೂಲದ್ದು ಮತ್ತು ಯಾವ ಮಾರ್ಗದಿಂದ ಗಳಿಸಿದ್ದು ಎನ್ನುವುದೂ ಅಷ್ಟೇ ಮುಖ್ಯ.

ಸಹಕಾರಿ ಉದ್ದಿಮೆಗಳ ಬಂಡವಾಳ ಸಂಗ್ರಹಣೆಯು ಸಹಕಾರಿಯ ಅನನ್ಯತೆ ಮತ್ತು ಸಮಗ್ರತೆಗೆ ಯಾವುದೇ ಧಕ್ಕೆ ತರಬಾರದು ಮತ್ತು ಯಾವುದೇ ಕಾನೂನು ವಿರೋಧಿ ಚಟುವಟಿಕೆಗಳನ್ನು ಉತ್ತೇಜಿಸಬಾರದು. ಸಹಕಾರಿ ಸಂಘಟನೆಗಳು ಒಂದಕ್ಕೊಂದು ಸಹಾಯ ನೀಡುವುದು, ತಮ್ಮ ತಮ್ಮೊಳಗಿನ ವ್ಯಾಪಾರ ವಹಿವಾಟು ಹೆಚ್ಚಿಸಿಕೊಳ್ಳುವುದು ಮತ್ತು ಸಹಕಾರ ಬಂಡವಾಳ ನಿಧಿಗಳನ್ನು ಸ್ಥಾಪಿಸಿಕೊಂಡು ಅದರ ಮೂಲಕ ಬಂಡವಾಳ ಪಡೆಯುವುದು ಮುಂತಾದವುಗಳ ಕಡೆಗೆ ಹೆಚ್ಚಿನ ಗಮನಹರಿಸಬೇಕು.

ಕೊನೆಯದಾಗಿ ಸಹಕಾರಿ ಉದ್ದಿಮೆಗಳು ಮುಖ್ಯವಾಹಿನಿಗೆ ಬರಲು ಬೇಕಾದ ಪ್ರಮುಖ ಪರಿಕರವೆಂದರೆ ಕಾನೂನಿನ ಚೌಕಟ್ಟು. ಹಲವಾರು ದೇಶಗಳಲ್ಲಿ ಸಹಕಾರಿ ಚಳುವಳಿಗೆ ಪೂರಕವಾದ ಕಾನೂನಿನ ವಾತಾವರಣವಿಲ್ಲ. ಸಹಕಾರಿ ಉದ್ದಿಮೆಗಳಿಗೆ ಅಗತ್ಯವಿರುವುದು ಉದಾರತೆಯಾಗಲಿ, ನಿರ್ಬಂಧವಾಗಲಿ ಅಲ್ಲ. ಬದಲಿಗೆ ಇತರೆ ಉದ್ದಿಮೆಗಳಿಗೆ ಸಮನಾಗಿ ವ್ಯವಹಾರ ಸಂಘಟಿಸಲು ಸಾಧ್ಯವಾಗುವ ಕಾನೂನಿನ ಸಂರಚನೆ.

ಕಾನೂನುಗಳನ್ನು ರಚಿಸುವುದು ಸರಕಾರವಾಗಿರುವುದರಿಂದ, ನೀಲಿನಕ್ಷೆಯಲ್ಲಿ ತಿಳಿಸಿದ ವಿಷಯಗಳಲ್ಲಿ ಸಹಕಾರಿ ಸಂಸ್ಥೆಗಳಿಗೆ ಬಾಹ್ಯವಾಗಿರುವುದು ಮತ್ತು ನಿಯಂತ್ರಣವಿಲ್ಲದಿರುವುದು ಈ ಒಂದು ಅಂಶದ ಮೇಲೆ ಮಾತ್ರ. ಆದುದರಿಂದ ಸಹಕಾರಿ ಮಹಾಮಂಡಳಗಳೂ, ಸಂಶೋಧನಾ ಸಂಸ್ಥೆಗಳೂ ಮತ್ತು ಮುಖ್ಯವಾಗಿ ಸಹಕಾರ ಕ್ಷೇತ್ರದಲ್ಲಿ ಆಸಕ್ತಿ ಇರುವ ಸಂಸದರು ಮತ್ತು ಶಾಸಕರು ಈ ವಿಷಯವನ್ನು ಕೈಗೆತ್ತಿಕೊಳ್ಳಬೇಕು.

ಸಹಕಾರಿ ಉದ್ದಿಮೆಗಳಿಗೆ ಸದಸ್ಯರು ಬಯಸುವ ಎಲ್ಲಾ ರೀತಿಯ ಉದ್ದಿಮೆಗಳಲ್ಲಿ ತೊಡಗಲು ಅವಕಾಶ, ತಮ್ಮ ಎಲ್ಲಾ ಆಂತರಿಕ ಚಟುವಟಿಕೆಗಳನ್ನು ತಾವೇ ನಿರ್ಧರಿಸಿ, ನಿರ್ವಹಿಸಲು ಕಾರ್ಯ ಸ್ವಾತಂತ್ರ್ಯ, ಯಾವುದೇ ರೀತಿಯ ವ್ಯಾಜ್ಯಗಳನ್ನು ಇತರೆ ಉದ್ದಿಮೆಗಳಂತೆಯೇ ದೇಶದ ಸಾಮಾನ್ಯ ಕಾನೂನಿನ್ವಯ ನಿರ್ಧರಿಸಿಕೊಳ್ಳುವ ಅವಕಾಶ ಇವುಗಳನ್ನೆಲ್ಲಾ ಒದಗಿಸುವಂತಹ ಕಾನೂನಿನ ರಚನೆ ಇಂದಿನ ತುರ್ತು ಅಗತ್ಯ. ಸಂಯುಕ್ತ ರಾಷ್ಟ್ರ ಸಂಸ್ಥೆಯ ಎಲ್ಲಾ ಸದಸ್ಯ ರಾಷ್ಟ್ರಗಳ ಸರಕಾರಗಳೂ ತಮ್ಮ ದೇಶದಲ್ಲಿ ಸಹಕಾರಿ ಉದ್ದಿಮೆಗಳಿಗೆ ತಮ್ಮ ಚಟುವಟಿಕೆಗಳನ್ನು ನಡೆಸಲು ಪೂರಕ ವಾತಾವರಣ ಸೃಷ್ಟಿ ಮಾಡುತ್ತೇವೆಂಬ ನಿರ್ಣಯವನ್ನು ಒಪ್ಪಿಕೊಂಡಿವೆ. ಈ ನಿರ್ಣಯದ ಅನುಸಾರ ನಡೆಯುವಂತೆ ಸರಕಾರಗಳ ಮನವೊಲಿಸುವ ಕೆಲಸ ತುರ್ತಾಗಿ ನಡೆಯಬೇಕಿದೆ.

ಮೇಲಿನ ಐದೂ ಸ್ತರಗಳಲ್ಲಿ ನಿರೀಕ್ಷಿತ ಪ್ರಯತ್ನಗಳು ನಡೆದರೆ 2020ರ ಹೊತ್ತಿಗೆ ಸಹಕಾರ ಕ್ಷೇತ್ರವೂ ಜಗತ್ತಿನಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಕ್ಷೇತ್ರವಾಗುತ್ತದೆ ಎಂದು ಐಸಿಎ ನೀಲಿನಕ್ಷೆಯು ಪರಿಭಾವಿಸಿದೆ.

## ಪ್ರಗತಿ ಪಥದಲ್ಲಿ ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿ

ಗ್ರಾಮೀಣ ಪ್ರದೇಶದಲ್ಲಿ ಅಗ್ರಮಾನ್ಯ ಬ್ಯಾಂಕು ಎಂದು ಹೆಸರು ಪಡೆದಿರುವ ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕು 2017–18ನೇ ವರ್ಷದಲ್ಲಿ ರೂ.301.14 ಲಕ್ಷ ಒಟ್ಟು ಲಾಭ ಗಳಿಸುವುದರೊಂದಿಗೆ ಶೇ.99.69ರಷ್ಟು ಸಾಲ ವಸೂಲಿ ಮಾಡಿ ದಾಖಲೆ ನಿರ್ಮಿಸಿದೆ. ಆದಾಯ ತೆರಿಗೆ ಮತ್ತು ಇತರ ಅನುವುಗಳನ್ನು ತೆಗೆದಿರಿಸಿ, ರೂ.130.04 ಲಕ್ಷ ನಿವ್ವಳ ಲಾಭ ಹೊಂದಿದೆ.

ಗ್ರಾಮೀಣ ಜನತೆಯ ಅದರಲ್ಲೂ ರೈತ ಬಾಂಧವರ ಆರ್ಥಿಕ ಸ್ಥಿತಿ ಉತ್ತಮಗೊಳಿಸುವ ದೃಢಸಂಕಲ್ಪದೊಂದಿಗೆ ಸೇವೆ ಸಲ್ಲಿಸುತ್ತಾ ಅಭಿವೃದ್ಧಿ ಹೊಂದುತ್ತಿದೆ. ಬ್ಯಾಂಕು ರೂ.27 ಕೋಟಿ 06 ಲಕ್ಷ ಸ್ವಂತ ಬಂಡವಾಳ ಹೊಂದಿದ್ದು, ರೂ.239 ಕೋಟಿ 79 ಲಕ್ಷ ದುಡಿಯುವ ಬಂಡವಾಳ ಹೊಂದಿದೆ. ರೂ.208 ಕೋಟಿ 61 ಲಕ್ಷ ಠೇವು ಸಂಗ್ರಹಿಸಲಾಗಿದ್ದು, ರೂ.120 ಕೋಟಿ 25 ಲಕ್ಷ ಸಾಲ ವಿತರಿಸಲಾಗಿದೆ. ಬೆಲ್ಲದ ಬಾಗೇವಾಡಿಯಲ್ಲಿ ಪ್ರಧಾನ ಕಛೇರಿ ಹೊಂದಿದ್ದು, ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಒಟ್ಟು 16 ಶಾಖೆಗಳು ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಾ ಗ್ರಾಹಕರಿಗೆ ತ್ವರಿತ ಗತಿಯಲ್ಲಿ ಸೇವೆ ಸಲ್ಲಿಸುತ್ತಿವೆ.

ಬ್ಯಾಂಕಿನ ಪ್ರಗತಿಗೆ ಬ್ಯಾಂಕಿನ ಸದಸ್ಯರೂ ಹಾಗೂ ಮಾಜಿ ಕೃಷಿ ಸಚಿವರು ಹಾಗೂ ಮಾನ್ಯ ಹುಕ್ಕೇರಿ ಶಾಸಕರಾದ ಶ್ರೀ ಉಮೇಶ ಕತ್ತಿ, ಮಾನ್ಯ ಮಾಜಿ ಸಂಸದರಾದ ಶ್ರೀ ರಮೇಶ ಕತ್ತಿ ಇವರ ಮಾರ್ಗದರ್ಶನ, ನಿರ್ದೇಶಕ ಮಂಡಲಿಯ ನಿಸ್ವಾರ್ಥ ಸೇವೆ, ಸದಸ್ಯರ, ಗ್ರಾಹಕರ ಅಭಿಮಾನ ಮತ್ತು ಸಿಬ್ಬಂದಿ ಸೇವಾ ಮನೋಭಾವವೇ ಕಾರಣವೆಂದು ಪ್ರಧಾನ ವ್ಯವಸ್ಥಾಪಕರಾದ ಶ್ರೀ ಸುಜೀತ ಮ. ಕತ್ತಿ ಇವರು ತಿಳಿಸಿದ್ದಾರೆ. ಬ್ಯಾಂಕಿನ ಪ್ರಗತಿಗಾಗಿ ಸಹಕರಿಸಿದ ಎಲ್ಲಾ ಸದಸ್ಯರಿಗೂ ಹಾಗೂ ಠೇವುದಾರರಿಗೂ ಕೃತಜ್ಞತೆಯನ್ನು ಸಲ್ಲಿಸಿರುತ್ತಾರೆ.

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ. – ಸಂಪಾದಕರು

ನಿಮ್ಮ ಪ್ರಶ್ನೆ



ನಮ್ಮ ಉತ್ತರ

– ಶ್ರೀಕಾಂತ ಬರುವೆ
ವಿಭಾಗೀಯ ಅಧಿಕಾರಿ, ಬೆಳಗಾವಿ

## ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 18 ರನ್ವಯವೇ ಹೂಡಿಕೆ

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಅಡಿಯಲ್ಲಿ ನೋಂದಣಿಗೊಂಡ ಸೌಹಾರ್ದ ಸಹಕಾರಿಗಳು ತಮ್ಮಲ್ಲಿನ ಹೆಚ್ಚುವರಿ ನಿಧಿಗಳನ್ನು ಕಾಯ್ದೆ ಅನುಸಾರ ಹೂಡಿಕೆ ಮಾಡದಿರುವುದು, ತತ್ಪರಿಣಾಮವಾಗಿ ತೊಂದರೆಗಳನ್ನು ಎದುರಿಸುತ್ತಿರುವುದು ಕಂಡುಬಂದಿದೆ. ಅದಕ್ಕಾಗಿ ಈ ಶಾಸನಾತ್ಮಕ ಮಾಹಿತಿಯನ್ನು ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

**ಹೂಡಿಕೆ ಎಂದರೇನು? :** ಸಹಕಾರಿಯು ತನ್ನ ಅಗತ್ಯಕ್ಕಿಂತ ಹೆಚ್ಚುವರಿಯಾಗಿರುವ ಮತ್ತು ಶಾಸನಬದ್ಧವಾಗಿ ಕಾಯ್ದಿರಿಸಬೇಕಾದ ಮೊತ್ತವನ್ನು ಕಾಯ್ದೆಯ ವ್ಯಾಪ್ತಿಯೊಳಗಡೆ ಲಾಭದಾಯಕವಾಗಿ ತೊಡಗಿಸಿರುವುದಾಗಿರುತ್ತಾರೆ. ಸಾಮಾನ್ಯವಾಗಿ ಸಹಕಾರಿಯು ಹೆಚ್ಚು ಠೇವಣಿಗಳನ್ನು ಹೊಂದಿದ್ದು, ಸಾಲಕ್ಕೆ ಹೆಚ್ಚಿನ ಬೇಡಿಕೆ ಇರದಿದ್ದ ಸಂದರ್ಭದಲ್ಲಿ ಸದರಿ ಮೊತ್ತಗಳನ್ನು ಅನಿವಾರ್ಯವಾಗಿ ಬೇರೆಡೆಗೆ ಹೂಡಿಕೆ ಮಾಡಬೇಕಾಗಿರುತ್ತದೆ. ಅದೇ ರೀತಿ ಸಹಕಾರಿಯು ಈ ಕೆಳಕಂಡ ಶಾಸನಬದ್ಧ ಹೂಡಿಕೆಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 18 ರನ್ವಯ ಮಾಡಬೇಕಾಗಿರುತ್ತದೆ. ಅವುಗಳೆಂದರೆ:

1. ಸಹಕಾರಿಯು ತಾನು ಗಳಿಸುವ ನಿವ್ವಳ ಲಾಭದ ಶೇಕಡಾ 25 ಪ್ರತಿಶತ ಮೀಸಲು ನಿಧಿಯ ಹೂಡಿಕೆ.
2. ನಿವ್ವಳ ಲಾಭದ ಶೇಕಡಾ 5 ಪ್ರತಿಶತ ಸಾಮಾನ್ಯ ಕ್ಷೇಮನಿಧಿಯ ಹೂಡಿಕೆ.
3. ನಿವ್ವಳ ಲಾಭದ ಶೇಕಡಾ 20 ಪ್ರತಿಶತ ಸಾದಿಲ್ವಾರು ಮತ್ತು ಅನಿರೀಕ್ಷಿತ ನಷ್ಟವನ್ನು ಭರಿಸುವ ನಿಧಿಯ ಹೂಡಿಕೆ.
4. ಸಹಕಾರಿಯು ತಾನು ಸ್ವೀಕರಿಸುವ ಠೇವಣಿಗಳ ಶೇಕಡಾ 20 ಪ್ರತಿಶತ ದ್ರವ್ಯಾಸ್ತಿ ನಿರ್ವಹಣೆ ನಿಧಿಯ ಹೂಡಿಕೆ.

**ಹೂಡಿಕೆ ವಿಧಾನ :** ಪ್ರತಿಯೊಂದು ಸೌಹಾರ್ದ ಸಹಕಾರಿಯು ಸಹ ಈ ಮೇಲೆ ತಿಳಿಸಿದ ಎಲ್ಲಾ ನಿಧಿಗಳನ್ನು ಕಡ್ಡಾಯವಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 18 ರನ್ವಯ ಹೂಡಿಕೆ ಮಾಡತಕ್ಕದ್ದು. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 18 ರನ್ವಯ ಸಹಕಾರಿಗಳು ನಿಧಿಗಳನ್ನು ಈ ಕೆಳಕಂಡಂತೆ ಹೂಡಿಕೆ ಮಾಡಬೇಕಿರುತ್ತದೆ.

1. ಸರಕಾರದಿಂದ ಅನುಮೋದಿತವಾದ ಯಾವುದೇ ಭದ್ರತೆಗಳು.
2. ಯಾವುದೇ ಸಹಕಾರಿ ಬ್ಯಾಂಕ್ ಅಥವಾ ಅನುಸೂಚಿತ ಬ್ಯಾಂಕಿನಲ್ಲಿ ಹೂಡಿಕೆ ಮಾಡಬಹುದಾಗಿರುತ್ತದೆ.

**ಎಲ್ಲಿ ಹೂಡಿಕೆ ಮಾಡುವಂತಿಲ್ಲ :** ಯಾವುದೇ ಸೌಹಾರ್ದ ಸಹಕಾರಿಯು ಈ ಕೆಳಕಂಡಂತೆ ಹೂಡಿಕೆ ಮಾಡತಕ್ಕದ್ದಲ್ಲ.

1. ಒಂದು ಸೌಹಾರ್ದ ಸಹಕಾರಿಯು ಇನ್ನೊಂದು ಸೌಹಾರ್ದ ಸಹಕಾರಿಯಲ್ಲಿ ಅಥವಾ ಒಂದು ಸೌಹಾರ್ದ ಸಹಕಾರಿಯು ಇನ್ನೊಂದು ಸಹಕಾರ ಸಂಘದಲ್ಲಿ ಹೂಡಿಕೆ ಮಾಡುವಂತಿಲ್ಲ.
2. ಯಾವುದೇ ಕಂಪನಿಯ ಶೇರುಗಳಲ್ಲಿ, ಡಿಬೆಂಚರುಗಳಲ್ಲಿ ಹೂಡಿಕೆ ಮಾಡುವಂತಿಲ್ಲ.
3. ಯಾವುದೇ ಮ್ಯುಚುವಲ್ ಫಂಡ್‌ಗಳಲ್ಲಿ ಹಾಗೂ ಇಕ್ವಿಟಿ ಫಂಡ್‌ಗಳಲ್ಲಿ ಹೂಡಿಕೆ ಮಾಡುವಂತಿಲ್ಲ.
4. ಬಿಟ್ ಕಾಯ್ನ್‌ಗಳಲ್ಲಿ, ಕ್ರಿಪ್ಟೊ ಕರೆನ್ಸಿಗಳಲ್ಲಿ ಹೂಡಿಕೆ ಮಾಡುವಂತಿಲ್ಲ.
5. ಸಕ್ಕರೆ ಕಾರ್ಖಾನೆಗಳಲ್ಲಿ, ರಿಯಲ್ ಎಸ್ಟೇಟ್‌ಗಳಲ್ಲಿ ಹೂಡಿಕೆ ಮಾಡುವಂತಿಲ್ಲ.

**ಕಾನೂನು ಬಾಹಿರ ಹೂಡಿಕೆಯ ಪರಿಣಾಮಗಳು :** ಈ ಮೇಲೆ ತಿಳಿಸಿದಂತೆ ಕಾನೂನು ಬಾಹಿರವಾಗಿ ಹೂಡಿಕೆ ಮಾಡಿದ್ದಲ್ಲಿ ಮತ್ತು ಅಂತಹ ಹೂಡಿಕೆಯಿಂದ ಸಹಕಾರಿಗೆ ಯಾವುದೇ ನಷ್ಟ ಸಂಭವಿಸಿದಲ್ಲಿ ಸಹಕಾರಿಯ ಆಡಳಿಯ ಮಂಡಲಿಯ ಎಲ್ಲ ಸದಸ್ಯರು ಸಾಮೂಹಿಕವಾಗಿ ಹಾಗೂ ವೈಯಕ್ತಿಕವಾಗಿ ಹೊಣೆಗಾರರಾಗುತ್ತಾರೆ ಮತ್ತು ಸದರಿ ನಷ್ಟದ ಮೊತ್ತವನ್ನು ಆಡಳಿತ ಮಂಡಲಿಯ ಸದಸ್ಯರು ಭರಿಸಬೇಕಾಗಿರುತ್ತದೆ. ಇಷ್ಟೇ ಅಲ್ಲದೇ ಕಾನೂನು ಬಾಹಿರವಾಗಿ ಹೂಡಿಕೆ ಮಾಡಿರುವ ಕಾರಣ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 68 ರನ್ವಯ ಕ್ರಿಮಿನಲ್ ವ್ಯವಹರಣೆಗೆ ಗುರಿಯಾಗುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸೌಹಾರ್ದ ಸಹಕಾರಿಗಳು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 18 ರನ್ವಯವೇ ಹೂಡಿಕೆ ಮಾಡಬೇಕಿರುತ್ತದೆ.

## 'ಎಂಸಿಎಲ್‌ಆರ್'ಗೆ ಜೋಡಣೆ : ಗ್ರಾಹಕರಿಗೆ ಪ್ರಯೋಜನ – ಹೊಸ ಬಡ್ಡಿದರ : ಗೃಹ ಸಾಲ ಅಗ್ಗ

**ನವದೆಹಲಿ :** 2016ರ ಏಪ್ರಿಲ್ ಮುಂಚೆ ಪಡೆದಿರುವ ಗೃಹ ಸಾಲಗಳು ಇನ್ನು ಮುಂದೆ ಅಗ್ಗವಾಗಲಿವೆ. ಈ ಸಾಲಗಳಿಗೆ ವಿಧಿಸುವ ಬಡ್ಡಿ ದರ ನಿಗದಿಪಡಿಸಲು ವಾಣಿಜ್ಯ ಬ್ಯಾಂಕ್‌ಗಳು ಏಪ್ರಿಲ್ 1 ರಿಂದ ಹೊಸ ವಿಧಾನ ಅಳವಡಿಸಿಕೊಳ್ಳಲಿವೆ. ಹೊಸ ವ್ಯವಸ್ಥೆಯಡಿ, ಬದಲಾಗುವ ಬಡ್ಡಿ ದರದ ಸಾಲಗಳನ್ನು, ನಿಧಿಗಳ ಮೇಲಿನ ಹೆಚ್ಚುವರಿ ವೆಚ್ಚ ಆಧರಿಸಿದ ಬಡ್ಡಿ ದರಕ್ಕೆ (ಎಂಸಿಎಲ್‌ಆರ್) ಜೋಡಿಸಲಾಗುತ್ತಿದೆ. ಬ್ಯಾಂಕ್‌ಗಳು ಈ ಮೊದಲು ಅನುಸರಿಸುತ್ತಿದ್ದ ಮೂಲ ದರಕ್ಕೆ ಹೋಲಿಸಿದರೆ ಈ ಹೊಸ ದರಗಳು ಶೇ 0.50ರಷ್ಟರವರೆಗೆ ಕಡಿಮೆಯಾಗುವ ಸಾಧ್ಯತೆ ಇದೆ. ಹೀಗಾಗಿ ಈ ಗೃಹ ಸಾಲಗಳ ಕಂತಿನ ಪ್ರಮಾಣವೂ ಇಳಿಕೆಯಾಗಲಿದೆ.

ಮಾರುಕಟ್ಟೆ ದರಗಳಿಗೆ ತಕ್ಕಂತೆ ಗೃಹ ಸಾಲಗಳನ್ನು ಪರಿಷ್ಕರಿಸದ ಬ್ಯಾಂಕ್‌ಗಳು ಈಗ ಹೊಸ ಬಡ್ಡಿ ದರ ಅನ್ವಯಿಸಬೇಕಾಗಿದೆ. ಆರ್‌ಬಿಐ ತನ್ನ ಅಲ್ಪಾವಧಿ ಬಡ್ಡಿ ದರಗಳನ್ನು ಕಡಿತ ಮಾಡಿದಾಗಲೆಲ್ಲ ಬ್ಯಾಂಕ್‌ಗಳು ಅದರ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸುತ್ತಿರಲಿಲ್ಲ. ಈ ಕಾರಣಕ್ಕೆ ಕೇಂದ್ರೀಯ ಬ್ಯಾಂಕ್ 2016ರ ಏಪ್ರಿಲ್‌ನಿಂದ 'ಎಂಸಿಎಲ್‌ಆರ್' ವ್ಯವಸ್ಥೆ ಜಾರಿಗೆ ತಂದಿತ್ತು. ಮೂಲ ದರ ಆಧರಿಸಿ ಮಂಜೂರು ಮಾಡಿದ ಸಾಲಗಳು 'ಎಂಸಿಎಲ್‌ಆರ್' ವ್ಯವಸ್ಥೆಗೆ ಬದಲಾಗಬೇಕಿತ್ತು. ಆದರೆ, ಬ್ಯಾಂಕ್‌ಗಳು ಇದನ್ನು ಪಾಲಿಸಿರಲಿಲ್ಲ.



# ವೃತ್ತಿಪರತೆಯ ನಿರ್ಲಕ್ಷತೆ ಹಾಗೂ ಅಭಾವ ಮತ್ತು ಹಿತಾಸಕ್ತಿಗಳ ಪ್ರಭಾವ, ಬ್ಯಾಂಕುಗಳಲ್ಲಿ ವಂಚನೆ ಪ್ರಕರಣಗಳ ಹೆಚ್ಚಳಕ್ಕೆ ಕಾರಣ. ಇದು ಸಹಕಾರ ಕ್ಷೇತ್ರಕ್ಕೂ ಎಚ್ಚರಿಕೆಯ ಗಂಟೆ

▶▶ ಎಂ.ಬಿ. ಕಲಾಲ, ನಿರ್ದೇಶಕರು, ಕರಾಸೌಸಂಸನಿ.,

ದಿನಾಂಕ 02-04-2018ರಂದು ವಿಜಯವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ರಮಾನಂದ ಶರ್ಮಾರವರ ಲೇಖನವನ್ನು ಓದಿದಾಗ ಸಾರ್ವಜನಿಕ ಬ್ಯಾಂಕುಗಳಲ್ಲಿ ಸಾವಿರಾರು ಕೋಟಿ ರೂಪಾಯಿಗಳ ವಂಚನೆ ಪ್ರಕರಣಗಳು ಬೆಳಕಿಗೆ ಬಂದು ಬ್ಯಾಂಕಿಂಗ್ ಉದ್ಯಮ ತಲ್ಲಣಗೊಂಡಿದೆ. ಕಳೆದ 3 ವರ್ಷಗಳಲ್ಲಿ ಸಾರ್ವಜನಿಕ ಬ್ಯಾಂಕುಗಳು 22743 ಕೋಟಿ ರೂ.ಗಳನ್ನು ಕಳೆದುಕೊಂಡಿವೆ. 17504 ವಂಚನೆ ಪ್ರಕರಣಗಳು ದಾಖಲೆಯಾಗಿವೆ. 5200 ಸಿಬ್ಬಂದಿಯವರ ವಿರುದ್ಧ ಕ್ರಮ ಜರುಗಿಸಲಾಗಿದೆ ಎಂಬ ವಿವರಗಳು ಬ್ಯಾಂಕುಗಳಲ್ಲಿ ಹಣಕಾಸಿನ ವ್ಯವಹಾರ ಮಾಡುವವರಿಗೆ ತುಂಬಾ ಕಳವಳಕಾರಿ ಎನಿಸುತ್ತದೆ.

ಇದಕ್ಕೆಲ್ಲ ಮೂಲ ಕಾರಣ ಬ್ಯಾಂಕುಗಳ ನಿರ್ದೇಶಕ ಮಂಡಳಿಯಲ್ಲಿ ವೃತ್ತಿಪರರ, ತಜ್ಞರ, ಅನುಭವಿಗಳ ಕೊರತೆ ಮತ್ತು ಅಲ್ಲಿರುವ ಹಿತಾಸಕ್ತಿಗಳೇ ಕಾರಣ ಎಂದು ವಿಶ್ಲೇಷಿಸಿದ್ದಾರೆ. ಈ ಬ್ಯಾಂಕುಗಳಲ್ಲಿ ಮುಂಬರುವ ದಿನಗಳಲ್ಲಿ ಸಾಲ ಪಡೆಯುವುದು ತುಂಬ ಕಷ್ಟದ ಕೆಲಸ. ಸಾರ್ವಜನಿಕ ಬ್ಯಾಂಕುಗಳು ಎಚ್ಚೆತ್ತುಕೊಂಡಿದ್ದು, ಅಲ್ಲಿ ನಡೆಯುವ ಪ್ರತಿ ವ್ಯವಹಾರವೂ ಅಂತಿಮವಾಗಿ ದಾಖಲಿಸುವ ಮೊದಲು ಡಬ್ಬಲ್ ಟ್ರಿಬ್ಬಲ್ ಚೆಕ್ಕಿಂಗ್‌ಗಳಿಗೆ ಒಳಪಡಿಸಲಾಗುತ್ತಿದೆ. ಅನೇಕ ವಿಧವಾದ ಸೆಕ್ಯುರಿಟಿ ವಿಧಾನಗಳನ್ನು ಅಳವಡಿಸಲಾಗುತ್ತಿದೆ ಮತ್ತು ವೈಯಕ್ತಿಕ ಜವಾಬ್ದಾರಿಗಳನ್ನು, ಉತ್ತರದಾಯಿತ್ವಗಳನ್ನು ನಿಗದಿಪಡಿಸಲಾಗಿದೆ. ಸಾಲ ಮಂಜೂರಿ ಮತ್ತು ವಿಲೇವಾರಿಗಳು ಕಟ್ಟುನಿಟ್ಟಿನ ನೀತಿ ನಿಯಮಾವಳಿ ಕಾನೂನು ವಿಧಾನ ಪ್ರಕ್ರಿಯೆಗಳಿಗೆ ಒಳಪಡುವುದರಿಂದ ಗ್ರಾಹಕರು ವಿಪರೀತ ತೊಂದರೆಗಳಿಗೆ ಒಳಪಡುವ ಸಾಧ್ಯತೆ ಇದೆ ಎಂದು ತಿಳಿಸಿರುವುದು ಕಳವಳದ ವಿಷಯ.

**ಸಹಕಾರ ಕ್ಷೇತ್ರದಲ್ಲಿ ವೃತ್ತಿಪರತೆಗೆ ಆದ್ಯತೆ ನೀಡಿ :** ಇದು ಸಹಕಾರ ಕ್ಷೇತ್ರದವರಿಗೆ ಎಚ್ಚರಿಕೆಯ ಗಂಟೆ ಎಂದು ನಾನು ಭಾವಿಸುತ್ತೇನೆ. ಸಹಕಾರ ಕ್ಷೇತ್ರದಲ್ಲಿ ವೃತ್ತಿಪರತೆಯ ಕೊರತೆ ಎದ್ದು ಕಾಣುತ್ತಿದೆ. ಸಹಕಾರಿ ಕಾನೂನುಗಳಲ್ಲಿ ಇದಕ್ಕೆ ಅವಕಾಶ ಕಲ್ಪಿಸಿದಾಗ್ಯೂ ಸಹ ವೃತ್ತಿಪರರ ನೇಮಕದಲ್ಲಿ ಮತ್ತೆ ಅನೇಕ ವಿಷಯಗಳು ಕಾಣಿಸಿಕೊಳ್ಳುತ್ತಿವೆ. ನೇಮಕವಾಗಿರುವ ವೃತ್ತಿಪರ ನಿರ್ದೇಶಕರುಗಳ ಸಲಹೆ ಹಾಗೂ ಮಾರ್ಗದರ್ಶನಗಳನ್ನು ಕಡೆಗಣಿಸುವುದು ಮತ್ತು ವೃತ್ತಿಪರ ನಿರ್ದೇಶಕರನ್ನು ನೇಮಕ ಮಾಡಿಕೊಳ್ಳದೇ ಹಾಗೆಯೇ ಮುಂದುವರೆಯುವ ಪ್ರವೃತ್ತಿ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗಿರುವುದಿಲ್ಲ. ಸಾಲ ವಸೂಲಾತಿ ಪ್ರಕ್ರಿಯೆಗಳಲ್ಲಿ ಅನಗತ್ಯ ಪ್ರಭಾವ ಬೀರುವುದು ಒಳ್ಳೆಯದಲ್ಲ. ಸಹಕಾರಿ ಸಂಸ್ಥೆಗಳ ಆಡಳಿತ ಮಂಡಲಿಯಲ್ಲಿ ವೃತ್ತಿಪರ ನಿರ್ದೇಶಕರು, ತಜ್ಞರು ಹಾಗೂ ಅನುಭವಿಗಳು ಇದ್ದರೆ ಸಹಕಾರಿ ಸಂಸ್ಥೆಗಳಲ್ಲಿ ಹಣ ದುರುಪಯೋಗ ಹಾಗೂ ವಂಚನೆ ಪ್ರಕರಣಗಳನ್ನು ತಡೆಯಬಹುದು.

**ಸಹಕಾರಿಗಳಿಗೆ ಅವಕಾಶದ ಸದುಪಯೋಗ ಹಾಗೂ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿಕೊಳ್ಳುವ ಸವಾಲು :** ಸಾರ್ವಜನಿಕ ಬ್ಯಾಂಕುಗಳ ಇಂದಿನ ಕಷ್ಟಕರ ಪರಿಸ್ಥಿತಿ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಒಂದು ಸುವರ್ಣಾವಕಾಶವೆಂದು ಸಹಕಾರಿಗಳು ವ್ಯಾಖ್ಯಾನಿಸಬಹುದಾಗಿದೆ. ಸಾರ್ವಜನಿಕ ಬ್ಯಾಂಕುಗಳಲ್ಲಿ ಮುಂದಿನ ದಿನಗಳಲ್ಲಿ ಯಾವ ವ್ಯವಹಾರಗಳು ಸುಲಭವಾಗಿರದಿರುವುದರಿಂದ ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡಿ ಅವರನ್ನು ಸೆಳೆದುಕೊಳ್ಳುವ ಕಾರ್ಯವನ್ನು ಸಹಕಾರಿ ಸಂಸ್ಥೆಗಳು ಮಾಡಬೇಕಿರುತ್ತದೆ. ಸದಸ್ಯರು ಹಾಗೂ ಗ್ರಾಹಕರಿಗೆ ಹೆಚ್ಚಿನ ಸೌಲಭ್ಯಗಳನ್ನು ಸುಲಭವಾಗಿ ಸಿಗುವಂತೆ ಮಾಡುತ್ತಾ ತಮ್ಮ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ಕಾರ್ಯವನ್ನು ಸಹಕಾರಿ ಸಂಸ್ಥೆಗಳು ರೂಪಿಸಿಕೊಂಡು ಕಾರ್ಯನಿರ್ವಹಿಸಿದಲ್ಲಿ ಈ ದೇಶದ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರಕ್ಕೆ ಪರ್ಯಾಯ ವ್ಯವಸ್ಥೆ ಬೇರೊಂದಿಲ್ಲವೆಂಬುದನ್ನು ಸರಕಾರಗಳು ಮನಗಾಣುವಂತಾಗುತ್ತದೆ. ಸಹಕಾರ ಕ್ಷೇತ್ರದ ಮೂಲಕ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಉತ್ತಮ ನಿದರ್ಶನವಾಗುತ್ತದೆ. ಸಹಕಾರಿಗಳು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುತ್ತಾರೆ ಎಂಬುದು ನನ್ನ ನಂಬಿಕೆ.

## ತೆರಿಗೆ ಪಾವತಿ ಮಾಡದವರ ಹೆಸರು ಬಹಿರಂಗ

**ಹೊಸದಿಲ್ಲಿ :** ಆದಾಯ ತೆರಿಗೆ ಇಲಾಖೆಯು ತೆರಿಗೆ ಕಟ್ಟದ 24 ಮಂದಿ ವ್ಯಕ್ತಿ ಹಾಗೂ ಕಂಪನಿಗಳ ಹೆಸರುಗಳನ್ನು ಬಹಿರಂಗಪಡಿಸಿದೆ. ಇವರೆಲ್ಲರೂ 490 ಕೋಟಿ ರೂ. ತೆರಿಗೆಯನ್ನು ಪಾವತಿಸಬೇಕಾಗಿದೆ.

ಆದಾಯ ತೆರಿಗೆ ಇಲಾಖೆಯು ಜಾಹೀರಾತು ಮೂಲಕ ದಿನ ಪತ್ರಿಕೆಗಳಲ್ಲಿ ವಿವರ ನೀಡಿದೆ. 'ಆದಾಯ ತೆರಿಗೆ ಮತ್ತು ಕಾರ್ಪೊರೇಟ್ ತೆರಿಗೆ ಬಾಕಿದಾರರ ಪಟ್ಟಿ' ಎಂದು ಘೋಷಿಸಿದೆ. ಹೆಸರು, ವಿಳಾಸ, ಬಿಸಿನೆಸ್ ವಿವರ, ತೆರಿಗೆ ಬಾಕಿ ವಿವರ ಪ್ರಕಟಿಸಿದೆ. ದಿಲ್ಲಿ ಮೂಲದ ಸ್ಪಾರ್ಕ್‌ಗುರು, ಕೋಲ್ಕೊತಾ ಮೂಲದ ಅರ್ಜುನ್ ಸೋನ್ಕರ್, ಕಿಶನ್ ಶರ್ಮಾ ಇತ್ಯಾದಿ ಹೆಸರುಗಳಿವೆ. ಒಟ್ಟು 24 ಕಂಪನಿಗಳ ಹೆಸರಿದೆ.

## ಡಿಜಿಟಲ್ ಅರ್ಥವ್ಯವಸ್ಥೆಗೆ ದೇಶಗಳು ಸಿದ್ಧಗೊಂಡಿಲ್ಲ

**ನ್ಯೂಯಾರ್ಕ್ :** ಫೇಸ್‌ಬುಕ್ ಹಾಗೂ ಕೇಂಬ್ರಿಜ್ ಅನಾಲಿಟಿಕಾ ಸಂಸ್ಥೆಯ ದತ್ತಾಂಶ ಅವ್ಯವಹಾರದಿಂದಾಗಿ ಬಹುತೇಕ ದೇಶಗಳು ಡಿಜಿಟಲ್ ಆರ್ಥಿಕತೆಗೆ ಇನ್ನೂ ತಯಾರಾಗಿಲ್ಲ ಎಂಬುದನ್ನು ತೋರಿಸುತ್ತಿದೆ ಎಂದು ವಿಶ್ವಸಂಸ್ಥೆ ಹೇಳಿದೆ. ಕಳೆದ ವರ್ಷ ಅಮೆರಿಕದ ಚುನಾವಣೆಯ ವೇಳೆ ಫೇಸ್‌ಬುಕ್ ದತ್ತಾಂಶವನ್ನು ಬಳಸಿ ಕೇಂಬ್ರಿಜ್ ಅನಾಲಿಟಿಕಾ ಅಕ್ರಮ ಎಸಗಿತ್ತು ಎಂದು ಆರೋಪಿಸಲಾಗಿದೆ. ಈ ಹಿನ್ನೆಲೆಯಲ್ಲಿ, ಇಂಟರ್‌ನೆಟ್ ಬಳಕೆದಾರರ ಸಂಖ್ಯೆ ಹೆಚ್ಚುತ್ತಿದೆ ಮತ್ತು ಸರಕು ಹಾಗೂ ಸೇವೆಗಳ ಖರೀದಿಯೂ ಹೆಚ್ಚುತ್ತಿದೆ. ಹೀಗಾಗಿ ಗ್ರಾಹಕರ ಆನ್‌ಲೈನ್ ವಹಿವಾಟು ರಕ್ಷಿಸುವ ಜವಾಬ್ದಾರಿ ಸರಕಾರಗಳ ಮೇಲಿದೆ ಎಂದು ವಿಶ್ವಸಂಸ್ಥೆ ಹೇಳಿದೆ.

# ಅಧ್ಯಯನ ಹಾಗೂ ಅನುಕರಣೆ ಯೋಗ್ಯ ಸಹಕಾರಿ ಸಂಸ್ಥೆಗಳ ಯಶೋಗಾಥೆಗಳು

ಶತಮಾನದ ಇತಿಹಾಸ ಹೊಂದಿರುವ ಸಹಕಾರ ಕ್ಷೇತ್ರದಲ್ಲಿ ಅನೇಕ ಸಂಸ್ಥೆಗಳು ಯಶಸ್ವಿಯಾಗಿ, ಮಾದರಿ ಸಂಸ್ಥೆಗಳಾಗಿ ಅಧ್ಯಯನಕ್ಕೂ ಅನುಕರಣೆಗೂ ಯೋಗ್ಯವಾಗಿ ರೂಪುಗೊಂಡಿವೆ. ಸೌಹಾರ್ದ ಸಹಕಾರಿಗಳಿಗೆ ಇಂತಹ ಸಂಸ್ಥೆಗಳಿಂದ ಸ್ಫೂರ್ತಿ ಸಿಗಲಿ ಎನ್ನುವ ಉದ್ದೇಶದಿಂದ ಯಶಸ್ವಿ ಸಂಸ್ಥೆಗಳ 'ಯಶೋಗಾಥೆಗಳ' ಮಾಲಿಕೆಯನ್ನು ಈ ಸಂಚಿಕೆಯಿಂದ ಆರಂಭಿಸಲಾಗುತ್ತಿದೆ. ಒಂದಷ್ಟು ಹೊಸ ವಿಚಾರಗಳಿಗಾಗಿ ಮನಸ್ಸನ್ನು ತೆರೆಯೋಣ.

**ಮಾಹಿತಿ/ ಲೇಖನ ಆಹ್ವಾನ :** ತಮಗೆ ತಿಳಿದಿರುವ ಯಶಸ್ವಿ ಸಹಕಾರಿ ಸಂಸ್ಥೆಗಳಿದ್ದಲ್ಲಿ ಅವುಗಳ ಬಗ್ಗೆ ನಮಗೆ ಮಾಹಿತಿ ಕಳುಹಿಸಿ. ಯಶಸ್ವಿ ಸಹಕಾರಿಯೆಂದರೆ ಸಾಂಪ್ರದಾಯಿಕ ಪತ್ತಿನ ಚಟುವಟಿಕೆಗಳ ಜೊತೆಗೆ ಹಲವು ವಿಧದ ವಿಶಿಷ್ಟ ಕಾರ್ಯಚಟುವಟಿಕೆಯನ್ನು ಹೊಂದಿರುವ, ಆರ್ಥಿಕವಾಗಿ ಸಬಲವಾಗಿರುವ, ಸಾಮಾಜಿಕ ಬದ್ಧತೆಯೊಂದಿಗೆ ಸಮಾಜಮುಖಿ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ, ಇತರೆ ಸಂಸ್ಥೆಗಳಿಗೆ ಮಾದರಿಯೆನಿಸುವಂತಹ ಸಂಸ್ಥೆಗಳು. ಇಂತಹ ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ತಾವು ಪತ್ರದ ಮೂಲಕ ಅಥವಾ swabhimani@souharda.coop ಗೆ ಮೇಲ್ ಮಾಡುವ ಸಂಯುಕ್ತ ಸಹಕಾರಿಗೆ ಕಳುಹಿಸಬಹುದು. ಸದರಿ ಸಂಸ್ಥೆಯನ್ನು ಅಧ್ಯಯನ ಮಾಡಿ ಯಶೋಗಾಥೆಯನ್ನು ಪ್ರಕಟಿಸುವ ಬಗ್ಗೆ ತೀರ್ಮಾನಿಸಲಾಗುವುದು. ಯಶೋಗಾಥೆ ಮಾಲಿಕೆಗೆ ಲೇಖನ ಕಳುಹಿಸಲು ಕೂಡ ಅವಕಾಶವಿದೆ. ಪ್ರಕಟಿತ ಲೇಖನಗಳಿಗೆ ಸಂಭಾವನೆ ನೀಡಲಾಗುವುದು. ಪ್ರಕಟಣೆ ಕುರಿತು ಅಂತಿಮ ತೀರ್ಮಾನ ಸಂಪಾದಕರದ್ದಾಗಿರುತ್ತದೆ.

ಯಶೋಗಾಥೆ ಮಾಲಿಕೆ – 01

## ಕೇರಳದ ಉರಾಳುಂಗಲ್ ಲೇಬರ್ ಕಾಂಟ್ರಾಕ್ಟ್ ಕೋ ಆಪರೇಟಿವ್ ಸೊಸೈಟಿಯ ವೈವಿಧ್ಯಮಯ ಕಾರ್ಯಗಳು ಅಧ್ಯಯನ ಯೋಗ್ಯ - ಅನುಕರಣೀಯ

### ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯವರ ಶಿಫಾರಸ್ಸಿನ ಮೇರೆಗೆ ಕೆನಡಾ ವಿಶ್ವವಿದ್ಯಾಲಯದವರು ಅಧ್ಯಯನ ಹಾಗೂ ಸಂಶೋಧನೆಗಾಗಿ ಆಯ್ಕೆ ಮಾಡಿಕೊಂಡಿರುವ ದೇಶದ 3 ಸಹಕಾರಿಗಳಲ್ಲಿ ಇದು ಒಂದು

▶▶ ರಘುನಂದನ ಕೆ., ಸಹಪ್ರಧಾನ ವ್ಯವಸ್ಥಾಪಕ, ಕರಾಸೌಸಂಸನಿ., ಬೆಂಗಳೂರು.

20ನೇ ಶತಮಾನದ ಆರಂಭದ ದಿನಗಳಲ್ಲಿ ಆಗಷ್ಟೇ ಸಹಕಾರ ಚಳುವಳಿ ಕಾಯ್ದೆಯ ರೂಪದಲ್ಲಿ ಅಧಿಕೃತತೆಯನ್ನು ಪಡೆದುಕೊಂಡು ಅಂಬೆಗಾಲಿಡುತ್ತಿದ್ದ ಸಮಯ. ಜಾತಿ ಪದ್ಧತಿಯ ಅರಾಜಕತೆಗಳಿಂದ ಸಮಾಜ ಸುಧಾರಣೆಯತ್ತ ಬದಲಾವಣೆಗಳು ಆರಂಭವಾಗಿದ್ದ ಕಾಲ. ಈ ಬದಲಾವಣೆಗಳಲ್ಲಿ ಸಹಕಾರ ಕ್ಷೇತ್ರ ಒಳಗೊಳ್ಳಬಹುದಾದ ಸಾಧ್ಯತೆಗಳತ್ತ ಹೊಸದಾಗಿ ರೂಪುಗೊಳ್ಳುತ್ತಿದ್ದ ಸಹಕಾರಿ ಚಿಂತಕರು ಪ್ರಯತ್ನಗಳನ್ನು ಆರಂಭಿಸಲು ಚಿಂತನೆಯಲ್ಲಿ ತೊಡಗಿದ್ದ ಸಂದರ್ಭ. ಸಹಕಾರವೆಂದರೆ ಸಾಮಾಜಿಕ ತೊಂದರೆಗಳ ನಿವಾರಣೆಗಾಗಿ ಸಿಕ್ಕ ಸಮಾಜ ಸುಧಾರಣೆಯ ಉಪಕರಣವೆಂದು ಸಮಾಜ ಸುಧಾರಕರು ನಂಬಿದ್ದ ಸಮಯ. ಅದಾಗಲೇ, ದಕ್ಷಿಣ ಭಾರತದಲ್ಲಿ ಅದರಲ್ಲೂ ಮುಖ್ಯವಾಗಿ ಕೇರಳದಲ್ಲಿ ಕಾರ್ಮಿಕ ಚಳುವಳಿ ರೂಪಗೊಂಡಿತ್ತು. ಆದರೆ ಇಂತಹ ಕಾರ್ಮಿಕ ಚಳುವಳಿಗೆ ಒಂದು ಸುಸ್ಥಿರ ಅಭಿವೃದ್ಧಿಯ ಸ್ವರೂಪವನ್ನು ನೀಡುವ ಸಂಘಟನೆಯ ಅಗತ್ಯವಿತ್ತು. ಈ ಅವಶ್ಯಕತೆಯನ್ನು ಅರಿತು ಸಾಮಾಜಿಕ ಸುಧಾರಣೆಗೆ ಮುಂದಾದವರು ಶ್ರೀ ಗುರು ವಾಗ್ಭಟಾನಂದ. ತಮ್ಮ ಕಾರ್ಮಿಕ ಶಿಷ್ಯರ ಮನವಿಗಳನ್ನು ಪೂರೈಸಲು ಮಲಬಾರಿನ ದೂರದ ಹಳ್ಳಿಯಾದ ಉರಾಳುಂಗಲ್ ಸಮೀಪದ ಕರಕ್ಕಾಡುಗೆ ಸ್ವತಃ ವಲಸೆ ಬಂದಿದ್ದ ಇವರು ದಿನಗೂಲಿ ಕಾರ್ಮಿಕ ಶಿಷ್ಯರ ಮೂಲಕ ಸಾಮಾಜಿಕ ರೂಪಾಂತರದ ಪ್ರಯತ್ನವನ್ನು ಆರಂಭಿಸಿದಾಗ ಉರಾಳುಂಗಲ್ ಲೇಬರ್ ಕಾಂಟ್ರಾಕ್ಟ್ ಕೋ ಆಪರೇಟಿವ್ ಸೊಸೈಟಿ ರಚನೆಯಾಯಿತು.

ತುಂಡು ಭೂಮಿಯನ್ನೂ ಹೊಂದಿರದ ಬಡತನದಲ್ಲಿ ವಾಸಿಸುತ್ತಿದ್ದ ಕಾರ್ಮಿಕರಿಗೆ, ಗುರುಗಳ ಸಿದ್ಧಾಂತಗಳು ಸಹಕಾರ ಸಂಸ್ಥೆಯ ಮೂಲಕ ಹೊಸ ಅವಕಾಶಗಳಿಗೆ ತೆರೆದುಕೊಳ್ಳಲು ಸ್ಫೂರ್ತಿ ನೀಡಿತು. ಆರಂಭದಲ್ಲಿ ಈ ಸಹಕಾರ ಸಂಸ್ಥೆಯನ್ನು ರೂಪಿಸಲು 14 ಜನರು ಸೇರಿಕೊಂಡಾಗ ಅದರಲ್ಲಿ 11 ಜನ ಅರೆ ಹೊಟ್ಟೆಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರಾಗಿದ್ದರು. ಈ ಬಡ ಕಾರ್ಮಿಕರು ಗುರುಗಳೊಂದಿಗೆ ಕೈ ಜೋಡಿಸಿ ಸಹಕಾರ ಸಂಸ್ಥೆಯನ್ನು ಸ್ಥಾಪಿಸಲು ಸಿದ್ಧರಾದರು. ಫೆಬ್ರವರಿ 25, 1925ರಂದು ಪ್ರಾರಂಭವಾದ ಈ ಪ್ರಯತ್ನ ಕಾಲನ ಪ್ರವಾಹದ ಎಲ್ಲ ಸ್ಥಿತ್ಯಂತರಗಳನ್ನು ಮೀರಿ ವಿಶ್ವಾದ ಅತಿದೊಡ್ಡ ಯಶಸ್ವಿ ಸಹಕಾರ ಸಂಸ್ಥೆಯಾಗಿ ಬೆಳೆಯುತ್ತದೆ ಎಂಬ ಪರಿಕಲ್ಪನೆ ಅಂದು ಯಾರಿಗೂ ಇರಲಿಲ್ಲ. ಇಂದು 3000ಕ್ಕಿಂತಲೂ ಹೆಚ್ಚಿನ ಜನರಿಗೆ ನೇರ ಉದ್ಯೋಗ ನೀಡಿರುವ ಈ ಸಂಸ್ಥೆ, 750 ಸದಸ್ಯರನ್ನು, 1749 ಸದಸ್ಯೇತರರನ್ನು ಹೊಂದಿ 6000 ಕುಟುಂಬಗಳ ಜೀವನ ನಿರ್ವಹಣೆಯ ಜವಾಬ್ದಾರಿಯನ್ನು ಯಶಸ್ವಿಯಾಗಿ ನೆರವೇರಿಸುತ್ತಿದೆ. ಇದರ ವಾರ್ಷಿಕ ವಹಿವಾಟು ಹನ್ನೆರಡು ಸಾವಿರ ಲಕ್ಷ ರೂಪಾಯಿಗಳಿಗಿಂತ ಅಧಿಕವಾಗಿದ್ದು, ಇದು ಹದಿನಾಲ್ಕು ಸಾವಿರ ಲಕ್ಷದಷ್ಟು ಆಸ್ತಿಯನ್ನು, 1550 ಲಕ್ಷ ರೂಪಾಯಿಗಳಷ್ಟು ಲಾಭವನ್ನು ಹೊಂದಿರುವ ಬೃಹತ್ ಸಂಸ್ಥೆಯಾಗಿ ರೂಪಗೊಂಡಿದೆ.

**ಉರಾಳುಂಗಲ್ ಲೇಬರ್ ಕಾಂಟ್ರಾಕ್ಟ್ ಕೋ ಆಪರೇಟಿವ್ ಸೊಸೈಟಿಯ ವೈವಿಧ್ಯಮಯ ಚಟುವಟಿಕೆಗಳು :** ಮೂಲತಃ ಸಮಾಜ ಕಲ್ಯಾಣಕ್ಕಾಗಿ ಹಾಗೂ ಕಾರ್ಮಿಕರಿಗೆ ಪೂರ್ಣಾವಧಿಯ ಉದ್ಯೋಗವನ್ನು ಒದಗಿಸುವುದು ಈ ಸಂಸ್ಥೆಯ ಆರಂಭದ ಉದ್ದೇಶವಾಗಿತ್ತಾದರೂ, ಕಾಲ ಬದಲಾದಂತೆ ಜಾಗತಿಕ ಆರ್ಥಿಕ ಮಾರುಕಟ್ಟೆಯ ಪರಿಣಾಮಗಳನ್ನೆದುರಿಸಲು ಕಾರ್ಯಚಟುವಟಿಕೆಗಳಲ್ಲಿ ಕ್ಷಿಪ್ರ ಬದಲಾವಣೆಯನ್ನು ತಂದುಕೊಳ್ಳಲಾಯಿತು. ಹೆಚ್ಚು ಸಾಂಪ್ರದಾಯಿಕವಾಗಿರದೇ ಉಳಿವಿಗಾಗಿ ವೈವಿಧ್ಯತೆಯನ್ನು ಅಳವಡಿಸಿಕೊಳ್ಳುತ್ತ ಬರಲಾಯಿತು. ಅಂತಹ ಕೆಲವು ವೈವಿಧ್ಯತೆಯ ವಿವರಗಳನ್ನು ಗಮನಿಸಿ:

- ಇದುವರೆಗೆ 4000ಕ್ಕೂ ಹೆಚ್ಚು ಪ್ರಾಜೆಕ್ಟ್‌ಗಳನ್ನು ಯಶಸ್ವಿಯಾಗಿ ನಿರ್ವಹಣೆ ಮಾಡಲಾಗಿದ್ದು, ರಸ್ತೆಗಳ ನಿರ್ಮಾಣ, ಮೇಲ್ಸೇತುವೆಗಳ ನಿರ್ಮಾಣ, ಸರಕಾರಿ ಹಾಗೂ ಖಾಸಗಿ ಕಂಪನಿಗಳ ಕಟ್ಟಡಗಳ ನಿರ್ಮಾಣಗಳನ್ನು ಮಾಡಲಾಗಿದೆ. 2010ರ ಅಂಕಿ ಅಂಶದಂತೆ ಸಹಕಾರಿಯು ಒಂದು ವರ್ಷದಲ್ಲಿ ಸರಾಸರಿ 107 ಗ್ರಾಮೀಣ ರಸ್ತೆಗಳ ಕೆಲಸಗಳನ್ನು ತೆಗೆದುಕೊಳ್ಳುತ್ತಿದೆ.
- ಸಹಕಾರಿಯು ಕೃಷಿ ಕ್ಷೇತ್ರದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದು, ತೊಟ್ಟುಮುಕ್ಕಂನಲ್ಲಿ 60 ಎಕರೆಗಳನ್ನು ಹೊಂದಿ ವಿವಿಧ ತರಕಾರಿ, ಲವಂಗ, ಬಾಳೆ, ಮಾವುಗಳ ಮಿಶ್ರ ಕೃಷಿಯನ್ನು ಮಾಡಲಾಗುತ್ತಿದೆ, ಇಲ್ಲಿ ಡೈರಿ ಫಾರ್ಮ್ ಕೂಡ ಹೊಂದಲಾಗಿದೆ. ನಟ್ಟುಕೊಟ್ಟಾದಲ್ಲಿ 40 ಎಕರೆಗಳ

ಭೂಮಿಯಲ್ಲಿ ಅಡಿಕೆ, ತೆಂಗು, ಬಾಳೆ, ರಬ್ಬರ್ ಬೆಳೆಯಲಾಗುತ್ತಿದೆ. ಫಾರಾದಲ್ಲಿನ 5 ಎಕರೆಯಲ್ಲಿ ತರಕಾರಿಗಳನ್ನು ಬೆಳೆಯಲಾಗುತ್ತಿದೆ. ಕೀಟನಾಶಕ ಮುಕ್ತ ಸಾವಯವ ಮತ್ತು ಆರೋಗ್ಯಯುತ ಆಹಾರವನ್ನು ಕಾರ್ಮಿಕರಿಗೆ ಒದಗಿಸುವುದು ಇದರ ಉದ್ದೇಶ.

- ಯೋಜನೆಗಳ ಸಲಹೆ, ವಿನ್ಯಾಸ, ಸಾಮರ್ಥ್ಯ ನಿರ್ಮಾಣ, ಸಂಶೋಧನೆ ಮತ್ತು ದಾಖಲೆಗಳ ಕಾರ್ಯಕ್ಕಾಗಿ ಯೋಜನೆ ಮತ್ತು ವಿನ್ಯಾಸ ಕೋಶವನ್ನು ಹೊಂದಲಾಗಿದೆ.
- ಬುಡಕಟ್ಟು ಜನರ ಪುನರ್ವಸತಿಯ ಭಾಗವಾಗಿ ಸಾಮಾಜಿಕ ಬದ್ಧತೆಯಡಿಯಲ್ಲಿ ಕೊಯಿಕ್ಕೋಡ್ ಬಳಿಯ ವೆಲ್ಲಾಯಿಲ್ ತೀರದಲ್ಲಿ ಸಂಧಿಗ್ರಾಮ್ ಸ್ಥಾಪಿಸಲಾಗಿದ್ದು, 41 ಬುಡಕಟ್ಟು ಕುಟುಂಬಗಳು ಸ್ವಂತ ಮನೆಗಳನ್ನು ಹೊಂದುವಂತೆ ಮಾಡಲಾಗಿದೆ.
- ಸಹಕಾರಿಯು ಕಲ್ಲು, ಗ್ರಾನೈಟ್ ಕ್ರಷರ್ ಘಟಕಗಳನ್ನು ಹೊಂದಿದ್ದು, ಅತ್ಯಂತ ಆಧುನಿಕ ತಂತ್ರಜ್ಞಾನವನ್ನು ಇದರಲ್ಲಿ ಬಳಸಲಾಗುತ್ತಿದ್ದು, ಗುಣಮಟ್ಟದ ಉತ್ಪನ್ನ ಸಿದ್ಧವಾಗುತ್ತಿದೆ. ಸಂಬಂಧಪಟ್ಟ ಇಲಾಖೆಗಳ ಅನುಮತಿಯೊಂದಿಗೆ ಮಾಲಿನ್ಯ ನಿಯಂತ್ರಣ ಮಂಡಲಿಯಿಂದ ಕ್ಲಿಯರೆನ್ಸ್ ಪ್ರಮಾಣ ಪತ್ರ ಕೂಡ ಹೊಂದಲಾಗಿದೆ.
- ಸಹಕಾರಿಯು 8 ಎಕರೆ ಭೂಮಿಯಲ್ಲಿ, 3 ಎಕರೆಯಲ್ಲಿ ಇಟ್ಟಿಗೆ ಉತ್ಪಾದನಾ ಘಟಕವನ್ನು ನಡೆಸುತ್ತಿದೆ. ವಿವಿಧ ಗಾತ್ರಗಳ 600 ರಿಂದ 2000ದವರೆಗೆ ಪ್ರತಿದಿನ ಇಟ್ಟಿಗೆ ಉತ್ಪಾದನೆಯಾಗುತ್ತದೆ. ಉಳಿದ 5 ಎಕರೆಯನ್ನು ಸಾವಯವ ಕೃಷಿಗೆ ಮೀಸಲಿರಿಸಲಾಗಿದೆ.
- **ಸರ್ಗಾಲಯ** : ಸಾಂಪ್ರದಾಯಿಕ ಕರಕುಶಲ ಕ್ಷೇತ್ರವನ್ನು ಪುನಶ್ಚೇತನಗೊಳಿಸುವ ಪ್ರಯತ್ನವಾಗಿ ಕೇರಳ ರಾಜ್ಯ ಸರ್ಕಾರದ ಸರ್ಗಾಲಯಾ ಕರಕುಶಲ ಗ್ರಾಮ ಯೋಜನೆಯ ನಿರ್ಮಾಣ ಮತ್ತು ನಿರ್ವಹಣೆ ಕಾರ್ಯವನ್ನು ಕೈಗೊಳ್ಳಲಾಗಿದೆ.
- **ಯುಎಲ್ ಫೌಂಡೇಶನ್** : ಬೆಳವಣಿಗೆಯೆಂದರೆ ಬ್ಯಾಲೆನ್ಸ್‌ಶೀಟ್ ಅಂಕಿ ಅಂಶಗಳೊಂದೇ ಅಲ್ಲ ಎನ್ನುವುದನ್ನು ಪರಿಗಣಿಸುತ್ತ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ ಅಡಿಯಲ್ಲಿ ಚಾರಿಟಿ ಕಾರ್ಯವನ್ನು ನಡೆಸಲಾಗುತ್ತಿದೆ. ಇದಕ್ಕಾಗಿ ಯುಎಲ್ ಫೌಂಡೇಶನ್ ಸ್ಥಾಪಿಸಲಾಗಿದೆ. ಇದರ ಮೂಲಕ ವೃದ್ಧರಿಗೆ ಆಸರೆ, ಆರೈಕೆಗಳ ವ್ಯವಸ್ಥೆಯನ್ನು, ಸಮಾಜದ ಕೆಳ ಸ್ತರದ ವಿದ್ಯಾರ್ಥಿಗಳ ಶಿಕ್ಷಣದ ಜವಾಬ್ದಾರಿಯನ್ನು ನಿರ್ವಹಿಸಲಾಗುತ್ತಿದೆ.
- **ಯುಎಲ್ ಟೆಕ್ನಾಲಜಿ ಸೊಲ್ಯೂಷನ್** : 2011ರಲ್ಲಿ ಆರಂಭಿಸಲಾಗಿರುವ ಇದು ಸರ್ಕಾರ, ಸಾರ್ವಜನಿಕ ಹಾಗೂ ಖಾಸಗಿ ಸಂಸ್ಥೆಗಳಿಗೆ ಸಾಫ್ಟ್‌ವೇರ್ ಸೇವೆಗಳನ್ನು ನೀಡುವುದರೊಂದಿಗೆ ಬ್ಯಾಂಕಿಂಗ್ ಸಾಫ್ಟ್‌ವೇರ್ ಅಭಿವೃದ್ಧಿಯಲ್ಲಿ ತನ್ನದೇ ಗುರುತನ್ನು ಮೂಡಿಸುವ ಪ್ರಯತ್ನ ಜಾರಿಯಲ್ಲಿದ್ದು, ಮುಂದಿನ ಐದು ವರ್ಷಗಳಲ್ಲಿ ಪ್ರಮುಖ ಐಟಿ ಕಂಪನಿಯಾಗಿ ರೂಪುಗೊಳ್ಳಲಿದೆ. ಇದರ ತ್ರಿವೆಂಡ್ರಮ್ ಟೆಕ್ನೋಪಾರ್ಕ್‌ನಲ್ಲಿ 140 ಸದಸ್ಯರ ತಂಡ ಕಾರ್ಯನಿರ್ವಹಿಸುತ್ತಿದೆ. ಕೊಚ್ಚಿ ಮತ್ತು ದೆಹಲಿಯಲ್ಲಿ ಕಛೇರಿಗಳಿವೆ. ಮುಂದಿನ ವರ್ಷದಲ್ಲಿ 200 ಕೋಟಿ ರೂಪಾಯಿ ವ್ಯವಹಾರದ ಗುರಿಯಿದೆ.
- **ಯುಎಲ್ ಸೈಬರ್ ಪಾರ್ಕ್** : ಬದಲಾಗುತ್ತಿರುವ ಜಗತ್ತಿಗೆ ಹೊಂದಿಕೊಳ್ಳುವ, ವೃತ್ತಿ ಬೆಳವಣಿಗೆಗಾಗಿ ವಿದೇಶಗಳತ್ತ ಮುಖ ಮಾಡಿರುವ ಯುವಜನತೆಗೆ ಉದ್ಯೋಗವಕಾಶ ಹಾಗೂ ವೃತ್ತಿ ನೈಪುಣ್ಯತೆಯನ್ನು ಒದಗಿಸುವ ನಿಟ್ಟಿನಲ್ಲಿ 2014ರಲ್ಲಿ ಯುಎಲ್ ಸೈಬರ್ ಪಾರ್ಕ್‌ನ್ನು ಕೊಯಿಕೋಡ್ ನಗರದ ಸಮೀಪದಲ್ಲಿ ಆರಂಭಿಸಲಾಗಿದೆ. 10 ಅಂತಸ್ತುಗಳ 31 ಲಕ್ಷ ಚದರ ಅಡಿಯ ಮೊದಲ ಹಸಿರು ಐಟಿ ಪಾರ್ಕ್ ಇದಾಗಿದ್ದು, 600 ಕೋಟಿ ಯೋಜನೆಯನ್ನು ಪೂರ್ಣಗೊಳಿಸಿ ತನ್ನ ಸಾಮರ್ಥ್ಯವನ್ನು ಸಾಬೀತುಗೊಳಿಸಿದೆ. ಮಾಹಿತಿ ತಂತ್ರಜ್ಞಾನದಲ್ಲಿ 40,000 ಉದ್ಯೋಗವನ್ನು ಹಾಗೂ 1,00,000 ದಷ್ಟು ಪರೋಕ್ಷ ಉದ್ಯೋಗಾವಕಾಶವನ್ನು ತೆರೆಯುವ ಗುರಿಯಿದೆ.

ಸುಸ್ಥಿರ ಉದ್ಯೋಗವನ್ನು ಒದಗಿಸುವುದು, ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ನಿರ್ವಹಿಸುವುದು, ಮಹಿಳಾ ಸಬಲತೆಯ ಕಾರ್ಯಚಟುವಟಿಕೆಯನ್ನು ನಡೆಸುವುದು, ಅಲ್ಪಾವಧಿಯ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸುವುದು, ಆರೋಗ್ಯ ಜಾಗೃತಿ ಶಿಬಿರಗಳು, ಕಾರ್ಮಿಕರಿಗೆ ಅಗತ್ಯವಾದ ಸಾಲ, ಹಣಕಾಸು ಸೌಲಭ್ಯಗಳನ್ನು ಒದಗಿಸುವುದು, ಕಾರ್ಮಿಕ ರಕ್ಷಣಾ ವ್ಯವಸ್ಥೆಯನ್ನು ಒದಗಿಸುವುದು ಮುಂತಾದ ಕಾರ್ಯಚಟುವಟಿಕೆಗಳನ್ನು ಕಾರ್ಮಿಕರಿಗಾಗಿ ಸಹಕಾರಿಯು ನಡೆಸುತ್ತಿದೆ. ಭ್ರಷ್ಟಾಚಾರ ಅಥವಾ ಹಣ ದುರುಪಯೋಗಕ್ಕೆ ಅವಕಾಶವಿಲ್ಲದಿರುವುದು, ನ್ಯಾಯ ಸಮ್ಮತವಾದ ವ್ಯಾವಹಾರಿಕ ಅಭ್ಯಾಸಗಳು, ಬದಲಾಗುವ ಕಾಲಘಟ್ಟಕ್ಕೆ ತಕ್ಷಣ ಒಗ್ಗಿಕೊಳ್ಳುವುದು, ಕಾರ್ಮಿಕ ಶಕ್ತಿ, ಆರ್ಥಿಕ ಸ್ಥಿರತೆ, ಕಚ್ಚಾ ಸಾಮಗ್ರಿಗಳ ಬೃಹತ್ ಸಂಪನ್ಮೂಲ, ಯಂತ್ರೋಪಕರಣಗಳ ಬಳಕೆ, ವೃತ್ತಿ ಸಂಸ್ಕೃತಿ ಹಾಗೂ ಅಭಿವೃದ್ಧಿಗಾಗಿ ರಾಜಿ ಮಾಡಿಕೊಳ್ಳದ ಧೈರ್ಯಯುತ ಧೋರಣೆ, ಸಂಘಟನೆಯ ನೀತಿ ಸಂಹಿತೆಯನ್ನು ಅಭಿವೃದ್ಧಿಪಡಿಸಿರುವುದು ಇತ್ಯಾದಿಗಳು ಈ ಸಹಕಾರ ಸಂಸ್ಥೆಯನ್ನು ಯಶಸ್ವಿಯಾಗಿಸುವಲ್ಲಿ ಕಾರಣೀಕರ್ತವಾಗಿವೆ.

ಸಹಕಾರಿಯ 92 ವರ್ಷಗಳ ಬೆಳವಣಿಗೆಯ ದಾರಿಯಲ್ಲಿ ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿದ್ದು, ಭಾರತ ಸರ್ಕಾರದಿಂದ 2008ರಲ್ಲಿ ನೀಡಲ್ಪಟ್ಟ ಎನ್‌ಸಿಡಿಸಿ ಎಕ್ಸಲೆನ್ಸಿ ಅವಾರ್ಡ್, ನ್ಯಾಷನಲ್ ಲೇಬರ್ ಕೋ ಆಪರೇಟಿವ್ ಫೆಡರೇಷನ್ ನವದೆಹಲಿಯಿಂದ ನೀಡಲಾದ ಬೆಸ್ಟ್ ಲೇಬರ್ ಕೋ ಆಪರೇಟಿವ್ ಅವಾರ್ಡ್, 2005ರಲ್ಲಿ ಇಂದಿರಾ ಗಾಂಧಿ ಸದ್ಭಾವನಾ ಅವಾರ್ಡ್, 2002ರಲ್ಲಿ ರೋಟರಿ ಇಂಟರ್‌ನ್ಯಾಷನಲ್ ಅವಾರ್ಡ್, ಇಂಡೋ ಅರಬ್ ಕಾನ್ಫೆಡರೇಷನ್ ಕೌನ್ಸಿಲ್ಸ್ ಕರ್ಮ ರತ್ನ ಪುರಸ್ಕಾರ ಇವು ಪ್ರಮುಖವಾದವು.

ಸಾಂಪ್ರದಾಯಿಕತೆಗೆ ಅಂಟಿಕೊಂಡಿರುವುದರಿಂದ ಪ್ರಗತಿ ಸಾಧ್ಯವಿಲ್ಲ. ಸಹಕಾರ ಕ್ಷೇತ್ರಕ್ಕೆ ಸಾಕಷ್ಟು ಅವಕಾಶಗಳಿವೆ ಎಂಬುದಕ್ಕೆ ಈ ಸಹಕಾರಿಯ ಕಾರ್ಯಚಟುವಟಿಕೆಗಳೇ ಸಾಕ್ಷಿ. ಕೇರಳ ರಾಜ್ಯದ ಹಣಕಾಸು ಸಚಿವರಾದ ಡಾ.ಥಾಮಸ್ಸ್ ರವರು ಈ ಸಹಕಾರಿ ಸಂಸ್ಥೆಯ ಬಗ್ಗೆ ಒಂದು ಪುಸ್ತಕವನ್ನೇ ಬರೆದಿದ್ದಾರೆ. ಕೊಲಂಬಿಯಾ ವಿಶ್ವ ವಿದ್ಯಾಲಯದವರು ಪ್ರತಿ ವರ್ಷ ನಡೆಸುವ ಅಧ್ಯಯನ ಕಾರ್ಯಕ್ರಮದ ಯೋಜನೆಯಲ್ಲಿ ಈ ಸಂಸ್ಥೆಯನ್ನೂ ಕೂಡ ಒಂದಾಗಿ ಪರಿಗಣಿಸಿರುವುದು ವಿಶೇಷ. ನಿಮ್ಮ ಕಿವಿಗಳನ್ನು ನಮ್ಮ ಹೃದಯದ ಹತ್ತಿರವಿರಿಸಿ, ನಮ್ಮ ಕಾರ್ಮಿಕ ಶಕ್ತಿಯನ್ನು ಹುರಿಗೊಳಿಸಿದ ಸಹಕಾರದ ಸಂಗೀತವನ್ನು ಅಲ್ಲಿ ನೀವು ಕೇಳಬಹುದು ಎನ್ನುವ ಆತ್ಮವಿಶ್ವಾಸದ ನಂಬಿಕೆಯೊಂದಿಗೆ ಬೆಳೆಯುತ್ತಿದೆ ಈ ಸಂಸ್ಥೆ. ಇದೆಲ್ಲ ಹೇಗೆ ಸಾಧ್ಯ ಎನ್ನುವುದಕ್ಕೆ ಉತ್ತರವಾಗಿ, ನಿಮ್ಮ ಕಣ್ಣುಗಳನ್ನು ತೆರೆದಿಟ್ಟು ಗಮನಿಸಿ; ಪ್ರಾಮಾಣಿಕತೆ, ಸಮಯದ ಸದ್ಬಳಕೆ ಹಾಗೂ ಗುಣಮಟ್ಟದ ಮೌಲ್ಯವನ್ನು ಅವಲಂಬಿಸಿ ಬೆಳೆದ ವೃತ್ತಿ ಸಂಸ್ಕೃತಿಯ ಫಲಶೃತಿಯನ್ನು ನೀವು ಕಾಣಬಹುದು ಎನ್ನುತ್ತದೆ ಈ ಸಂಸ್ಥೆ. ಇಂತಹ ಯಶಸ್ಸು ಸಾಧ್ಯವಾಗಬೇಕಾದರೆ ಹೊಸ ವಿಷಯಗಳನ್ನು ಸ್ವೀಕರಿಸುವ ಮಾನಸಿಕತೆಯನ್ನು ರೂಢಿಸಿಕೊಳ್ಳುವುದು ಅಗತ್ಯ, ಹೊಸ ಹೊಸ ಆವಿಷ್ಕಾರಗಳ ಅನುಷ್ಠಾನ ಅಗತ್ಯ, ಕಾರ್ಯಚಟುವಟಿಕೆಗಳಲ್ಲಿ ಹೊಸತನ್ನು ಅಳವಡಿಸುವುದು ಅಗತ್ಯ ಎನ್ನುವುದನ್ನು ತೋರಿಸುತ್ತಿದೆ ಈ ಸಹಕಾರ ಸಂಸ್ಥೆ.

**ಸಹಕಾರಿಯ ಸಂಪರ್ಕ ವಿವರ :** ಶ್ರೀ ರಮೇಶನ್ ಪಳೇರಿ ಇವರು ಸಹಕಾರಿಯ ಅಧ್ಯಕ್ಷರಾಗಿ, ಶ್ರೀ ಶಾಜು ಎಸ್ ಇವರು ಸಹಕಾರಿಯ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಉರಾಳುಂಗಲ್ ಲೇಬರ್ ಕಾಂಟ್ರಾಕ್ಟ್ ಕೋ ಆಪರೇಟಿವ್ ಸೊಸೈಟಿಯ ಕಛೇರಿ ಮಡಪ್ಪಲಿ ಕಾಲೇಜ್ ಪೋಸ್ಟ್, ವಟಕರ, ಕಾಯಿಕೋಡ್, ಕೇರಳ – 673102 ಆಗಿರುತ್ತದೆ. ಸಹಕಾರಿಯ ವೆಬ್‌ಸೈಟ್ : http://ulccsltd.com/ ನಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಬಹುದು.

# ಪ್ರಕೃತಿ ವಿಕೋಪ ನಿರ್ವಹಣೆ ಮತ್ತು ಸುಸ್ಥಿರ ಅಭಿವೃದ್ಧಿಯಲ್ಲಿ ಸಹಕಾರಿಗಳ ಪಾತ್ರ

ಶಿವಪ್ರಸಾದ ಟಿ., ಕಿರಿಯ ಸಹಾಯಕ, ಕರಾಸೌಸಂಸನಿ.,

ಭಾರತವು ವೈವಿಧ್ಯಮಯ ಹಾಗೂ ಶ್ರೀಮಂತವೂ ಆದ ಅತ್ಯಂತ ಹಳೆಯ ನಾಗರೀಕತೆಗಳಲ್ಲಿ ಒಂದಾಗಿದೆ. ಕಳೆದ 70 ವರ್ಷಗಳ ಇತಿಹಾಸದಲ್ಲಿ ಸರ್ವ ಸಾಮಾಜಿಕ, ಆರ್ಥಿಕ ಪ್ರಗತಿ ಸಾಧಿಸಿದೆ, ಕೃಷಿ ಉತ್ಪಾದನೆಯಲ್ಲಿ ಭಾರತವು ಸ್ವಾವಲಂಬಿ ರಾಷ್ಟ್ರವಾಗಿದ್ದು, ಅಲ್ಲದೇ ಕೈಗಾರಿಕೀಕರಣಗೊಂಡ ರಾಷ್ಟ್ರಗಳ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಸಹ ಪಡೆದುಕೊಂಡಿದೆ. ಭಾರತದ ನಿಸರ್ಗವು ವಿವಿಧ ಹವಾಗುಣಗಳ ನೆಲೆವೀಡಾಗಿದ್ದು, ಇಲ್ಲಿ ಹಿಮದಿಂದ ಆವೃತ್ತವಾದ ಹಿಮಾಲಯದ ಎತ್ತರದಿಂದ ಉಷ್ಣವಲಯಕ್ಕೆ ವಿಸ್ತರಿಸಿದ ದಕ್ಷಿಣ ಮಳೆಕಾಡು ಪ್ರದೇಶವನ್ನು ಒಳಗೊಂಡಿದೆ. ವಿಶ್ವದ 7ನೇ ಅತಿ ದೊಡ್ಡ ದೇಶವಾಗಿದ್ದು, ಏಷ್ಯಾ ಖಂಡದ ಭಾಗವಾಗಿದೆ. ಪರ್ವತ ಶ್ರೇಣಿ ಮತ್ತು ಸಮುದ್ರಗಳಿಂದ ಗುರುತಿಸಪ್ಪ ವಿಶಿಷ್ಟ ಭೌಗೋಳಿಕ ಅಸ್ತಿತ್ವ ಹೊಂದಿದೆ. ನಾಲ್ಕನೇ ಮೂರು ಭಾಗ ನೀರಿನಿಂದ ಆವೃತ್ತವಾಗಿದ್ದು, ನಾಲ್ಕನೇ ಒಂದರಷ್ಟು ಭೂ ಭಾಗವನ್ನು ಹೊಂದಿದೆ. ಇದರಲ್ಲಿ ಮುಖ್ಯವಾಗಿ ದೊಡ್ಡ ಪರ್ವತ ವಲಯ, ಗಂಗಾ-ಸಿಂಧೂ ಪ್ರದೇಶ, ಮರುಭೂಮಿ ಪ್ರದೇಶ ಮತ್ತು ದಕ್ಷಿಣದಲ್ಲಿ ಪರ್ಯಾಯ ದ್ವೀಪಗಳಿವೆ. ಭಾರತದ ಜನಗಣತಿ ಮಾರ್ಚ್ 2011ರ ಪ್ರಕಾರ, ಜನಸಂಖ್ಯೆಯು 1,210 ಕೋಟಿ (623.7 ದಶಲಕ್ಷ ಪುರುಷರು ಮತ್ತು 586.4 ಮಿಲಿಯನ್ ಮಹಿಳೆಯರು) ಇದ್ದು, ಶೇ. 1.64 ವಾರ್ಷಿಕ ಸರಾಸರಿ ಬೆಳವಣಿಗೆಯು 2001-2011ರಲ್ಲಿ ಕಂಡು ಬಂದಿದೆ.


ತಾಂತ್ರಿಕ ಬೆಳವಣಿಗೆಯ ವಿಷಯದಲ್ಲಿ ಮಾನವರು ವಿವಿಧ ಮಗ್ಗುಲುಗಳಲ್ಲಿ ಮಹತ್ತರ ಪ್ರಗತಿ ಸಾಧಿಸಿದ್ದರೂ, ಸಾಧನೆಗಳ ಪಟ್ಟಿ ಬಹಳಷ್ಟಿದ್ದರೂ ವಾಸ್ತವವಾಗಿ ಪ್ರಕೃತಿಯ ಪ್ರಾಬಲ್ಯದ ಮುಂದೆ ಮಾನವ ತೃಣ ಮಾತ್ರನಾಗಿದ್ದಾನೆ. ಪ್ರಕೃತಿಯಲ್ಲಿನ ಸಣ್ಣ ಬದಲಾವಣೆಯಿಂದ ಹಿಡಿದು ಪ್ರವಾಹಗಳು, ಚಂಡಮಾರುತ, ಭೂಕುಸಿತ, ಹಿಮಕುಸಿತ, ಜ್ವಾಲಾಮುಖಿ ಸ್ಫೋಟ, ಭೂಕಂಪನಗಳಂತಹ ನೈಸರ್ಗಿಕ ವಿಕೋಪಕ್ಕೆ ಬಲಿಯಾಗಿದ್ದಾನೆ.

**ನೈಸರ್ಗಿಕ ವಿಕೋಪ :** ನೈಸರ್ಗಿಕ ವಿಕೋಪವು ಪ್ರಕೃತಿಯಲ್ಲಿ ಅಥವಾ ಭೂಮಿಯ ನೈಸರ್ಗಿಕ ಪ್ರಕ್ರಿಯೆಗಳಿಂದ ಉಂಟಾದ ಯಾವುದೇ ದುರಂತ ಘಟನೆಯೇ ನೈಸರ್ಗಿಕ ವಿಕೋಪ ಅಥವಾ ನೈಸರ್ಗಿಕ ವಿಪತ್ತು ಎನ್ನುವರು.

**ನೈಸರ್ಗಿಕ ವಿಪತ್ತಿನಿಂದಾಗುವ ಅನಾಹುತಗಳು :** ಅತಿ ಹೆಚ್ಚು ನೈಸರ್ಗಿಕ ವಿಕೋಪಕ್ಕೆ ತುತ್ತಾದ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತವು 10ನೇ ಸ್ಥಾನದಲ್ಲಿದೆ. ಅವುಗಳಲ್ಲಿ ಹೆಚ್ಚಿನ ಅನಾಹುತಗಳನ್ನು ಎರಡು ಭಾಗಗಳಾಗಿ ವಿಂಗಡಿಸಿದ್ದು, ಒಂದು ಮಾನವ ನಿರ್ಮಿತ ವಿಕೋಪಗಳು ಹಾಗೂ ಪ್ರಾಕೃತಿಕ ನೈಸರ್ಗಿಕ ವಿಕೋಪಗಳು.

| ನೈಸರ್ಗಿಕ ವಿಕೋಪಗಳು | ಮಾನವ ನಿರ್ಮಿತ ವಿಕೋಪಗಳು |
|---|---|
| ಪ್ರವಾಹಗಳು | ಪರಿಸರ ಅವನತಿ |
| ಅಕಾಲಿಕ ಮಾನ್ಸೂನ್ | ಜನಸಂಖ್ಯೆ ಸ್ಫೋಟ |
| ಭೂಕಂಪನ | ನಗರೀಕರಣ |
| ಭೂಕುಸಿತ | ಕೈಗಾರಿಕೀಕರಣ |
| ಹಿಮಪಾತ | ಅವೈಜ್ಞಾನಿಕ ಬೆಳವಣಿಗೆ |
| ಬಿರುಗಾಳಿ | ಕಲುಷಿತ ವಾತಾವರಣ |
| ಸುನಾಮಿ | |

ಈ ಎಲ್ಲಾ ಅನಾಹುತಗಳ ವಿಪರೀತತೆಯು ಭೂಮಿಯ ವಾತಾವರಣ ಮಾತ್ರವಲ್ಲದೇ, ಆರ್ಥಿಕ-ಸಾಮಾಜಿಕ ವ್ಯವಸ್ಥೆಯ ಮೇಲೆಯೂ ಅತಿ ಹೆಚ್ಚು ಪರಿಣಾಮ ಬೀರಿದೆ. ಒಟ್ಟಾರೆ 36 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ



27 ರಾಜ್ಯಗಳು ವಿಕೋಪಕ್ಕೆ ನಲುಗಿ ಹೋಗಿವೆ. ಅದರಲ್ಲಿ ಹೆಚ್ಚಿನದಾಗಿ ಶೇ.58.6ರಷ್ಟು ಭೂಕಂಪನಕ್ಕೆ ತುತ್ತಾದರೆ, ಶೇ.12ರಷ್ಟು ಭೂಭಾಗವು ಪ್ರವಾಹ ಅಥವಾ ಸುನಾಮಿಗೆ ಹಾನಿಯಾಗಿವೆ, ಶೇ.68ರಷ್ಟು ಉಳುಮೆ ಯೋಗ್ಯ ಭೂಮಿ ಮತ್ತು ಪರ್ವತ ಶ್ರೇಣಿಗಳು ಕಂಪನದ ತೀವ್ರತೆಗೆ ಕುಸಿದಿದೆ.

1. **ನೀರು ಮತ್ತು ಹವಾಮಾನ ಸಂಬಂಧ ವಿಪತ್ತುಗಳು :**
- ಪ್ರವಾಹಗಳು, ಚಂಡಮಾರುತಗಳು, ಸುಂಟರಗಾಳಿಗಳು ಮತ್ತು ಚಂಡಮಾರುಗಳು.
- ಮೇಘ ಸ್ಫೋಟ, ಉಷ್ಣ ಹವೆ ಮತ್ತು ಶೀತ ಹವೆ, ಹಿಮ ಕುಸಿತಗಳು, ಬರ/ಜಲ ಕ್ಷಾಮಗಳು.
- ಸಮುದ್ರ ಸವೆತ, ಮಿಂಚು ಮತ್ತು ಗುಡುಗು, ಸುನಾಮಿ, ಬಿರುಗಾಳಿಗಳು.

2. **ಭೂವೈಜ್ಞಾನಿಕ ಸಂಬಂಧಿತ ದುರಂತಗಳು :**
- ಭೂಕುಸಿತಗಳು ಮತ್ತು ಮಣ್ಣಿನ ಹರಿವು.
- ಅಣೆಕಟ್ಟು ಸ್ಫೋಟಗಳು, ಭೂಕಂಪಗಳು.
- ಮೈನ್ ವಿಪತ್ತುಗಳು.


3. **ರಾಸಾಯನಿಕ, ಕೈಗಾರಿಕಾ ಮತ್ತು ಪರಮಾಣು ಸಂಬಂಧಿತ ವಿಪತ್ತುಗಳು :**
- ರಾಸಾಯನಿಕ ದುರಂತಗಳು.
- ಕೈಗಾರಿಕಾ ದುರಂತಗಳು.
- ಅಣು ವಿಪತ್ತುಗಳು.

4. **ಅಪಘಾತ ಸಂಬಂಧಿತ ವಿಪತ್ತುಗಳು :**
- ಕಾಡ್ಗಿಚ್ಚು, ತೈಲ ಸೋರಿಕೆಗಳು, ಪ್ರಮುಖ ಕಟ್ಟಡ ಕುಸಿತ.
- ಸರಣಿ ಸ್ಫೋಟಗಳು, ವಿದ್ಯುತ್ ವಿಪತ್ತುಗಳು ಮತ್ತು ಬೆಂಕಿ, ಉತ್ಸವ ಸಂಬಂಧಿತ ದುರಂತಗಳು.
- ವಿದ್ಯುತ್ ವಿಪತ್ತುಗಳು ಮತ್ತು ಬೆಂಕಿ, ವಾಯು, ರಸ್ತೆ ಮತ್ತು ರೈಲು ಅಪಘಾತಗಳು.

5. **ಜೈವಿಕ ಸಂಬಂಧಿತ ವಿಪತ್ತುಗಳು :**
- ಸಾಂಕ್ರಾಮಿಕ ರೋಗಗಳು.
- ಕೀಟ ದಾಳಿಗಳು, ಆಹಾರ ವಿಷಪೂರಿತ.
- ಜಾನುವಾರು ಸಾಂಕ್ರಾಮಿಕ ರೋಗಗಳು.

ಈ ಎಲ್ಲಾ ವರ್ಗೀಕರಣಗಳ ಮೂಲಕ ಪ್ರವಾಹಗಳು, ಚಂಡಮಾರುತ, ಭೂಕುಸಿತ, ಬೀಳುವ ಕಟ್ಟಡ ಮತ್ತು ಮರ, ಹವಾ ಘನೀಕರಣ, ಕೊಚ್ಚಿ ಹೋಗುವುದು, ಬಿಸಿಲಿನ ಶಾಖ ಮಾರಣಾಂತಿಕ ತೊಂದರೆಗಳನ್ನು ಪರಿಶೀಲಿಸಿ, ಪರಿಹಾರೋಪಾಯ ಕ್ರಮಕ್ಕೆ ಸಹಾಯಕವಾಗಿದೆ. (ಮುಂದಿನ ಸಂಚಿಕೆಗೆ...)

# RBI NEWS - FEBRUARY 2018



K. Vittal Shetty, Banking Consultant, kohimavittal@Hotmail.com, Mob : 9845699904

First Bi-monthly Monetary Policy Statement for 2018-19 is scheduled on April 4 and 5, 2018.

| Policy Rates with effect from 02 AUGUST 2017. | % |
|---|---|
| POLICY REPO RATE | 6.00% |
| REVERSE REPO RATE | 5.75% |
| MARGINAL STANDING FACILITY RATE | 6.25% |
| BANK RATE | 6.25% |
| Reserve Ratios | % |
| Cash Reserve Ratio | 4.00% |
| Statutory Reserve Ratio WEF 14 OCTOBER 2017 | 19.50% |

Date : Mar 28, 2018

Scheduled Banks' Statement of Position in India as on Friday, March 16, 2018

(Amount in Billions of )

| | | SCHEDULED COMMERCIAL BANKS | | | ALL SCHEDULED BANKS | | |
|---|---|---|---|---|---|---|---|
| | | 17-MAR-2017 | 02-MAR-2018* | 16-MAR-2018* | 17-MAR-2017 | 02-MAR-2018* | 16-MAR-2018* |
| I | a) Deposits | 104911.82 | 111873.19 | **111607.49** | 107733.66 | 114846.17 | **114571.06** |
| | i) Demand | 11519.65 | 11699.71 | **11843.98** | 11777.44 | 11974.63 | **12113.29** |
| | ii) Time | 93392.18 | 100173.48 | **99763.54** | 95956.22 | 102871.50 | **102457.8** |
| II | CASH | 563.76 | 605.36 | **604.18** | 584.49 | 621.69 | **620.14** |
| III | WITH R.B.I. | 4256.89 | 4637.71 | **4564.34** | 4379.28 | 4762.28 | **4685.04** |
| IV | INVESTMENTS | 31950.61 | 34171.48 | **33477** | 32839.34 | 35114.82 | **34415.26** |
| V | BANK CREDIT | 75382.02 | 83464.98 | **83774.44** | 77724.41 | 86017.31 | **86346.61** |

## IMPORTANT NEWS

**1) March 01, 2018 :** Review of Currency Distribution & Exchange Scheme (CDES)

Refer to the announcement made in Part B of the Bi-Monthly Review of Monetary Policy dated February 7, 2018. The RBI has been providing several incentives to banks, from time to time for installation of various machines by them to encourage technology absorption in their currency operations for improved customer service. It is observed that the objectives of the scheme have largely been achieved.

It has been decided to withdraw the incentives which was being given to the banks for installation of Cash Recyclers and ATMs dispensing only lower denomination notes as contained in the Master Direction DCM (CC) No.G-4/03.41.01/2016-17 dated July 20, 2016.

The above instructions will come into force with immediate effect. The claims in respect of machines which were delivered to the banks before and including the date of the circular, shall be settled by our Regional offices, subject to the limits already advised in the above Master Direction dated July 20, 2016. The circular is available on website – www.rbi.org.in.

**2) March 13, 2018 :** Discontinuance of Letters of Undertaking (LoUs) and Letters of Comfort (LoCs) for Trade Credits.

### Directions, Withdrwals, Penalties & Cancellation of Licences of Urban Co-operative Banks :

**1) Mar 05, 2018 :** RBI imposes Monetary Penalty on Axis Bank Limited on February 27, 2018, of Rs. 30 million for non-compliance with the directions issued by RBI on Income Recognition and Asset Classification (IRAC) norms.

**2) Mar 05, 2018 :** RBI imposes Monetary Penalty on Indian Overseas Bank on February 27, 2018 of Rs.20 million for non-compliance with the directions issued by RBI on Know Your Customer (KYC) norms.

**3) Mar 06, 2018 :** RBI extends validity of the Directions issued to the Brahmawart Commercial Co-operative Bank Ltd., Kanpur, Uttar Pradesh for a further period of four months from March 07, 2018 to July 06, 2018.

**4) Mar 07, 2018 :** Directions under Section 35A read with

Swabhimani Sahakari, Monthly, Publishing Date 5th, Posting Day 8th.
Posted at Bangalore PSO, Mysore Road, Bangalore 560026
Registered No. KA/BGW/1744/2017-19. RNI No. KARBIL - 2004/18001/Pages 28

Section 56 of the Banking Regulation Act, 1949 Alwar Urban Co-operative Bank Ltd., Alwar (Rajasthan) shall continue to apply to the bank for a further period of Four months from March 08, 2018 to 07 July 2018.

**5) Mar 07, 2018 :** Reserve Bank of India imposes monetary penalty on State Bank of India on March 01, 2018, of Rs. 4 million for non-compliance with the directions issued by RBI on Detection and Impounding of Counterfeit Notes.

**6) Mar 08, 2018 :** Directions under Section 35A read with Section 56 of the Banking Regulation Act, 1949 Bhilwara Mahila Urban Co-operative Bank Ltd., Bhilwara (Rajasthan) shall continue to apply for a further period of Four months from March 10, 2018 to July 09, 2018.

**7) Mar 08, 2018 :** Reserve Bank of India imposes monetary penalty on Equitas Small Finance Bank Limited on March 01, 2018 of one million for non-compliance with one of the licensing conditions stipulated by RBI.

**8) Mar 09, 2018 :** Reserve Bank of India imposes monetary penalty on Airtel Payments Bank Limited on March 07, 2018, of Rs. 50 million for contravening the 'Operating Guidelines for Payments Banks' and directions issued by RBI on Know Your Customer (KYC) norms.

**9) Mar 09, 2018 :** RBI extends validity of the Directions issued to the Indian Mercantile Co-operative Bank Ltd., Lucknow, Uttar Pradesh for a further period of six months from March 12, 2018 to September 11, 2018,

**10) Mar 14, 2018 :** Directions under Section 35A of the Banking Regulation Act, 1949 (AACS) – Sanmitra Sahakari Bank Maryadit, Mumbai, Maharashtra shall continue to apply to the bank for a further period of four months from March 15, 2018 to July 14, 2018.

**11) Mar 26, 2018 :** RBI imposed penalty on Urban Co-operative Bank Ltd., Sitapura of Rs. 5,00,000/- (Rs. five lakhs only) for continuous non-submission of the returns.

**12) Mar 28, 2018 :** Directions under Section 35A of the Banking Regulation Act, 1949 (AACS) – Shree Ganesh Sahakari Bank Ltd, Nashik, Maharashtra- Extension of period and relaxation in directions.

In terms of the existing directions, among other conditions, a sum not exceeding Rs. 70,000/- of the total balance in every savings bank or current account or any other deposit account by whatever name called, was allowed to be withdrawn by a depositor.

"i. A sum not exceeding Rs. 80,000/- (Rupees Eighty Thousand only) of total balance in every savings bank account or current account or term deposit account or any other deposit account (by whatever name called); may be allowed to be withdrawn by depositor, provided that wherever such depositor is having liability to the bank in any manner, i.e. either as a borrower or surety, including loans against the bank deposits, the amount may be adjusted first to the relevant borrower account/s."

**Source: www.rbi.org.in**

## ಭಾವಪೂರ್ಣ ಶ್ರದ್ಧಾಂಜಲಿ

ಕೌಸ್ತುಭ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮೈಸೂರು ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಎನ್.ಸ್ವಾಮಿನಾಥನ್ (ಐಯ್ಯಂಗಾರ್ ಪ್ಲಾಸಾ) ರವರು ದಿನಾಂಕ : 01.04.2018ರಂದು ಅಕಾಲಿಕ ಮರಣ ಹೊಂದಿದ್ದು, ಶ್ರೀಯುತರಿಗೆ ಸಹಕಾರಿ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ.



ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ, (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055. ದೂ. : 080–23449933/34.
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು – 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831–2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ – 585102. ದೂ: 08472–270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010